ಶನಿವಾರ, ಡಿಸೆಂಬರ್ 24, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಚಳಿಗಾಲದಲ್ಲಿ ಬಾಣಂತಿಯರ ಆರೈಕೆ

ಶನಿವಾರ, ಡಿಸೆಂಬರ್ 24, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 354 | ಪುಟ 26
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅನುಭವ ಮಂಟಪ
ಮೀಸಲಾತಿ ಭಿನ್ನ ನೋಟಗಳು

ಜಿಲ್ಲಾಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಿಫಾರಸು 8

ಚಂದಾ ಕೊಚ್ಚರ್ ಬಂಧನ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,845	17,807	₹55,900 (ಬೆಂಗಳೂರು)	₹69,400 (ಬೆಂಗಳೂರು)	82.82

‘ಬಡವರಿಗೆ 1ವರ್ಷ ಉಚಿತ ಆಹಾರ ಧಾನ್ಯ ವಿತರಣೆ’

ನವದೆಹಲಿ(ಪಿಟಿಐ): ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್ಎಫ್ಎಸ್ಎ) ಅಡಿಯಲ್ಲಿ ದೇಶದ 81.35 ಕೋಟಿ ಬಡವರಿಗೆ ಒಂದು ವರ್ಷದವರೆಗೆ ಉಚಿತ ಪಡಿತರ ನೀಡುವ ಮಹತ್ವದ ನಿರ್ಧಾರವೊಂದನ್ನು ಕೇಂದ್ರ ಸರ್ಕಾರವು ಶುಕ್ರವಾರ ಪ್ರಕಟಿಸಿದೆ. 13

ಚಿನಕುರಳಿ

ಪ್ರಕಾಶ್ ಶೆಟ್ಟಿ



ಶೀಘ್ರವೇ ವರದಿ ಸಲ್ಲಿಕೆಗೆ ಹಿಂದುಳಿದ ವರ್ಗಗಳ ಆಯೋಗಕ್ಕೆ ಸಿ.ಎಂ ಸೂಚನೆ

ಒಕ್ಕಲಿಗ ಮೀಸಲಾತಿ ಕಾವು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡುವ ವಿಚಾರದಲ್ಲಿ ರಾಜ್ಯ ಸರ್ಕಾರದಿಂದ ಸಕಾರಾತ್ಮಕ ಸಂದೇಶ ರವಾನೆಯಾದ ಬೆನ್ನಲ್ಲೇ ಒಕ್ಕಲಿಗ ಸಮುದಾಯವೂ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಬೇಕೆಂದು ಒತ್ತಡ ಹೇರಿದ್ದು, ಈ ಸಂಬಂಧ ತ್ವರಿತವಾಗಿ ವರದಿ ಸಲ್ಲಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಿಂದುಳಿದ ವರ್ಗಗಳ ಆಯೋಗಕ್ಕೆ ಸೂಚನೆ ನೀಡಿದ್ದಾರೆ.

ಒಕ್ಕಲಿಗ ಸಮುದಾಯದ ಸಚಿವರು ಗುರುವಾರ ರಾತ್ರಿ ಇಲ್ಲಿ ಸಭೆ ಸೇರಿ ಚರ್ಚೆ ನಡೆಸಿದ ಬಳಿಕ ಶುಕ್ರವಾರ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ, ಒಕ್ಕಲಿಗ ಸಮುದಾಯದ ಮೀಸಲಾತಿ ಪ್ರಮಾಣವನ್ನು ಶೇ 12ಕ್ಕೆ ಹೆಚ್ಚಳ ಮಾಡಲು ಬೇಡಿಕೆ ಮುಂದಿಟ್ಟರು.

ಅಲ್ಲದೇ, ಆರ್ಥಿಕ ದುರ್ಬಲ ವರ್ಗಕ್ಕೆ (ಇಡಬ್ಲ್ಯುಎಸ್) ನೀಡುವ ಶೇ 10ರಷ್ಟು ಮೀಸಲಾತಿಯಲ್ಲಿ ನಗರ ಪ್ರದೇಶದ ಒಕ್ಕಲಿಗರನ್ನೂ ಸೇರಿಸಬೇಕು ಎಂದು ಸಚಿವರು ಪ್ರತಿಪಾದಿಸಿದರು.

ಒಕ್ಕಲಿಗ ಸಮುದಾಯಕ್ಕೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಹೆಚ್ಚು ಅವಕಾಶ ಸಿಗಬೇಕು. ಸಮುದಾಯದ ಜನಸಂಖ್ಯೆಯೂ ಹೆಚ್ಚಾಗಿದ್ದು, ಅದಕ್ಕೆ ಸರಿಯಾಗಿ ಮೀಸಲಾತಿ ಪ್ರಮಾಣವೂ ಹೆಚ್ಚಳವಾಗಬೇಕು. ಅಲ್ಲದೇ, ಒಕ್ಕಲಿಗ ಸಮುದಾಯಕ್ಕೆ ಹೊಂದಿಕೊಂಡಿರುವ ರೆಡ್ಡಿ, ಬಂಟ ಸಮುದಾಯಗಳಿಗೆ ಮೀಸಲಾತಿ ಅಗತ್ಯವಿದೆ. ಕುಂಚಿಟಿಗ ಸಮುದಾಯ ಕೇಂದ್ರದ ಒಬಿಸಿ ಪಟ್ಟಿಯಲ್ಲಿ ಇಲ್ಲ. ಹೀಗಾಗಿ ಆ ಸಮುದಾಯವನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರ್ಪಡೆಗೊಳಿಸಬೇಕು ಎಂದು ಸಚಿವರು ಪ್ರತ್ಯೇಕ ಮನವಿ ಸಲ್ಲಿಸಿದರು.

ಜನವರಿ 23 ಗಡುವು: ಒಕ್ಕಲಿಗರ ಹೋರಾಟ ಸಮಿತಿಯ ವತಿಯಿಂದ ನವೆಂಬರ್‌ನಲ್ಲಿ ಸಭೆಯೊಂದನ್ನು ನಡೆಸಿ, ಒಕ್ಕಲಿಗ ಉಪ ಪಂಗಡಗಳನ್ನು ಒಳಗೊಂಡ ರಾಜ್ಯದ ಇತರ ಹಿಂದುಳಿದ ವರ್ಗಗಳ ‘ಪ್ರವರ್ಗ-3ಎ’ಗೆ ನೀಡಲಾಗಿರುವ ಮೀಸಲಾತಿ ಪ್ರಮಾಣವನ್ನು ಜನವರಿ 23ರ ಒಳಗೆ ಶೇ 4ರಿಂದ ಶೇ 12ಕ್ಕೆ ಹೆಚ್ಚಿಸಬೇಕು. ಇಲ್ಲವಾದರೆ ಹೋರಾಟದ ಹಾದಿ ಹಿಡಿಯುವುದಾಗಿ ಎಚ್ಚರಿಕೆ ನೀಡಿತ್ತು.

ಈ ಸಭೆಯಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಪಟ್ಟನಾಯಕನಹಳ್ಳಿ ಮಠದ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಭಾಗವಹಿಸಿದ್ದರು. ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಒಕ್ಕಲಿಗ ಸಮುದಾಯದ ಪ್ರಮುಖ ನಾಯಕರು ಭಾಗವಹಿಸಿದ್ದರು.

8ನೇ ಪುಟ ನೋಡಿ

‘ಆಯೋಗದ ಪರಿಶೀಲನೆಯಲ್ಲಿ ಮನವಿ’

ಸಚಿವರ ಜತೆಗಿನ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿಯವರ ನೇತೃತ್ವದಲ್ಲಿ ಸಭೆ ನಡೆಸಿದ ಒಕ್ಕಲಿಗ ಸಮುದಾಯದ ಮುಖಂಡರು ಮನವಿಯನ್ನು ಕೊಟ್ಟಿದ್ದಾರೆ. ಆ ಮನವಿಯನ್ನು ಈಗಾಗಲೇ ಹಿಂದುಳಿದ ವರ್ಗಗಳ ಆಯೋಗಕ್ಕೆ ಕಳುಹಿಸಲಾಗಿದೆ’ ಎಂದರು. ‘ಮನವಿಯ ಪರಿಶೀಲನೆ ನಡೆಯುತ್ತಿದೆ. ಯಾವುದೇ ಕ್ರಮ ತೆಗೆದುಕೊಳ್ಳಲು ಸಂವಿಧಾನದತ್ತವಾದ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸು ಅಗತ್ಯ. ಹೀಗಾಗಿ ನವೆಂಬರ್ 29ರಂದೇ ಮನವಿಯನ್ನು ಕಳುಹಿಸಲಾಗಿದೆ. ಇದರ ಅಂಶಗಳನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸುವುದಾಗಿ ಹಿಂದುಳಿದ ವರ್ಗಗಳ ಆಯೋಗ ತಿಳಿಸಿದೆ. ಈಗಿನ ಮನವಿಯನ್ನೂ ಆಯೋಗಕ್ಕೆ ಕಳುಹಿಸಲಾಗುವುದು ಎಂದು ಬೊಮ್ಮಾಯಿ ತಿಳಿಸಿದರು.

‘ಮೀಸಲಾತಿ ಅರ್ಥ ಕಳೆದುಕೊಳ್ಳುತ್ತಿದೆ’

ರಾಮನಗರ: ‘ಸದ್ಯ ದೇಶದ ಶೇ 90ರಷ್ಟು ಜನರಿಗೆ ಈಗಾಗಲೇ ಮೀಸಲಾತಿ ಸಿಕ್ಕಿದ್ದು, ಅದು ಕಾಲಕ್ರಮೇಣ ತನ್ನ ಅರ್ಥವನ್ನೇ ಕಳೆದುಕೊಳ್ಳುತ್ತಿದೆ’ ಎಂದು ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ಹೇಳಿದರು.

ನಗರದಲ್ಲಿ ಶುಕ್ರವಾರ ಪತ್ರಕರ್ತರ ಜೊತೆ ಮಾತನಾಡಿ ಪಂಚಮಸಾಲಿ ಸಮುದಾಯದ ಮೀಸಲಾತಿ ಹೋರಾಟ ಕುರಿತು ಪ್ರತಿಕ್ರಿಯಿಸಿದ ಅವರು, ‘ಇತ್ತೀಚಿನ ದಿನಗಳಲ್ಲಿ ಅನೇಕ ಸ್ವಾಮೀಜಿಗಳನ್ನೂ ಒಳಗೊಂಡಂತೆ ಕೆಲವರು ಮೀಸಲಾತಿ ಪದದ ಅರ್ಥಕ್ಕೆ ಮಸಿ ಬಳಿಯುತ್ತಿದ್ದಾರೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.


8ನೇ ಪುಟ ನೋಡಿ

ಕಣಿವೆಗೆ ಉರುಳಿದ ಟ್ರಕ್: 16 ಸೈನಿಕರ ಸಾವು

ನವದೆಹಲಿ(ಪಿಟಿಐ): ಉತ್ತರ ಸಿಕ್ಕಿಂನ ಝೆಮಾದ ರಸ್ತೆ ತಿರುವಿನಲ್ಲಿ ಶುಕ್ರವಾರ ಸೇನಾ ಟ್ರಕ್‌ವೊಂದು ಜಾರಿ ಕಣಿವೆಗೆ ಬಿದ್ದು ಮೂವರು ಜೂನಿಯರ್ ಕಮಿಷನ್ಡ್ ಅಧಿಕಾರಿಗಳು (ಜೆಸಿಒ) ಸೇರಿದಂತೆ ಒಟ್ಟು 16 ಸೈನಿಕರು ಸಾವಿಗೀಡಾಗಿದ್ದಾರೆ ಎಂದು ಭಾರತೀಯ ಸೇನೆಯು ತಿಳಿಸಿದೆ.

‘ಈ ಅಪಘಾತದಲ್ಲಿ ನಾಲ್ವರು ಸೈನಿಕರು ಗಾಯಗೊಂಡಿದ್ದು, ಅವರನ್ನು ಚಿಕಿತ್ಸೆಗಾಗಿ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಅಪಘಾತಕ್ಕೀಡಾದ ಟ್ರಕ್ ಮೂರು ವಾಹನಗಳ ಬೆಂಗಾವಲು ಪಡೆಯ ಭಾಗವಾಗಿದ್ದು, ಶುಕ್ರವಾರ ಬೆಳಿಗ್ಗೆ ಛಟ್ಟೆನ್ ಕಡೆಯಿಂದ ಥಂಗು ಕಡೆಗೆ ತೆರಳುತ್ತಿತ್ತು, ಈ ವೇಳೆ ಕಡಿದಾದ ಇಳಿಜಾರಿನಲ್ಲಿ ಟ್ರಕ್ ಉರುಳಿ ಬಿದ್ದಿದೆ’ ಎಂದು ಸೇನೆಯು ಹೇಳಿದೆ.

‘ಅಪಘಾತ ಸಂಭವಿಸಿದ ತಕ್ಷಣ ಸ್ಥಳಕ್ಕೆ ತೆರಳಿ ರಕ್ಷಣಾ ಕಾರ್ಯಾಚರಣೆ ಕೈಗೊಳ್ಳಲಾಯಿತು. ಗಾಯಗೊಂಡ ನಾಲ್ವರು ಸೈನಿಕರನ್ನು ಹೆಲಿಕಾಪ್ಟರ್ ಮೂಲಕ ಆಸ್ಪತ್ರೆಗೆ ದಾಖಲಿಸಲಾಯಿತು’ ಎಂದು ಸೇನೆಯು ಮಾಹಿತಿ ನೀಡಿದೆ.



ಅಪಘಾತಕ್ಕೀಡಾದ ಭಾರತೀಯ ಸೇನೆಯ ಟ್ರಕ್ –ಪಿಟಿಐ ಚಿತ್ರ


ಸ್ಯಾಮ್ ಕರನ್ ಐಪಿಎಲ್ ಕುಬೇರ

ಆಲ್‌ರೌಂಡರ್‌ಗಳಿಗೆ ಜಾಕ್‌ಪಾಟ್



ಕೊಚ್ಚಿಯಲ್ಲಿ ಗುರುವಾರ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಗಾಗಿ ನಡೆದ ಮಿನಿ ಹರಾಜಿನಲ್ಲಿ ಇಂಗ್ಲೆಂಡ್ ಆಲ್‌ರೌಂಡರ್ ಸ್ಯಾಮ್ ಕರನ್ ಬಂಪರ್ ಮೊತ್ತ ಗಳಿಸಿದರು. ಟೂರ್ನಿಯ ಇತಿಹಾಸದಲ್ಲಿಯೇ ಅತಿ ಹೆಚ್ಚು ಮೌಲ್ಯ ಗಳಿಸಿದ ಆಟಗಾರನೆನಿಸಿದರು. ಕರ್ನಾಟಕದ ಮಯಂಕ್ ಅಗರವಾಲ್ ಅವರು ಭಾರತದ ಆಟಗಾರರಲ್ಲಿಯೇ ಅತಿ ಹೆಚ್ಚು ಮೊತ್ತ ಗಳಿಸಿದರು.

₹18.50 ಕೋಟಿ
ಸ್ಯಾಮ್ ಕರನ್ (ಇಂಗ್ಲೆಂಡ್)
ಆಲ್‌ರೌಂಡರ್
ಪಂಜಾಬ್ ಕಿಂಗ್ಸ್




ಕೋಟಿಗಳಲ್ಲಿ

₹17.50	₹16.25	₹16	₹13.25	₹8.25
ಕ್ಯಾಮರೂನ್ ಗ್ರೀನ್ (ಆಸ್ಟ್ರೇಲಿಯಾ) ಆಲ್‌ರೌಂಡರ್ ಮುಂಬೈ ಇಂಡಿಯನ್ಸ್	**ಬೆನ್ ಸ್ಟೋಕ್ಸ್** (ಇಂಗ್ಲೆಂಡ್) ಆಲ್‌ರೌಂಡರ್ ಚೆನ್ನೈ ಸೂಪರ್ ಕಿಂಗ್ಸ್	**ನಿಕೊಲಸ್ ಪೂರನ್** (ವೆಸ್ಟ್ ಇಂಡೀಸ್) ವಿಕೆಟ್‌ಕೀಪರ್ ಲಖನೌ ಸೂಪರ್‌ಜೈಂಟ್ಸ್	**ಹ್ಯಾರಿ ಬ್ರೂಕ್ಸ್** (ಇಂಗ್ಲೆಂಡ್) ಬ್ಯಾಟರ್ ಸನ್‌ರೈಸರ್ಸ್ ಹೈದರಾಬಾದ್	**ಮಯಂಕ್ ಅಗರವಾಲ್** (ಭಾರತ) ಬ್ಯಾಟರ್ ಸನ್‌ರೈಸರ್ಸ್ ಹೈದರಾಬಾದ್

80 ಖರೀದಿಯಾದ ಒಟ್ಟು ಆಟಗಾರರು | 29 ವಿದೇಶಿ ಆಟಗಾರರ ಖರೀದಿ | 405 ಹರಾಜು ಪಟ್ಟಿಯಲ್ಲಿದ್ದ ಆಟಗಾರರು

ಕೋವಿಡ್ ಚಿಕಿತ್ಸಾ ಸೌಲಭ್ಯಗಳ ಸನ್ನದ್ಧತೆ ಖಾತ್ರಿಪಡಿಸಲು 27ರಂದು ತಾಲೀಮು

ನವದೆಹಲಿ(ಪಿಟಿಐ): ಕೋವಿಡ್-19 ಚಿಕಿತ್ಸೆಗಾಗಿಯೇ ಮೀಸಲಾದ ವೈದ್ಯಕೀಯ ಸೌಲಭ್ಯಗಳು ಬಳಕೆಗೆ ಸನ್ನದ್ಧವಾಗಿರುವುದನ್ನು ಖಾತರಿಪಡಿಸಿಕೊಳ್ಳುವ ಉದ್ದೇಶದಿಂದ ಡಿ.27ರಂದು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ತಾಲೀಮು ನಡೆಸುವಂತೆ ಶುಕ್ರವಾರ ಸೂಚಿಸಲಾಗಿದೆ.



ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ಆರೋಗ್ಯ ಸಚಿವರೊಂದಿಗೆ ವರ್ಚುವಲ್ ವಿಧಾನದ ಮೂಲಕ ನಡೆಸಿದ ಸಭೆಯಲ್ಲಿ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ಈ ಸೂಚನೆ ನೀಡಿದರು.

‘ಆಸ್ಪತ್ರೆಗಳಲ್ಲಿ ಆಮ್ಲಜನಕ ಘಟಕಗಳು, ವೆಂಟಿಲೇಟರ್‌ಗಳು, ಸಾಗಣೆ ವ್ಯವಸ್ಥೆ, ಮಾನವ ಸಂಪನ್ಮೂಲಗಳ ಸನ್ನದ್ಧತೆ ಬಗ್ಗೆ ಈ ತಾಲೀಮು ಸಂದರ್ಭದಲ್ಲಿ ಹೆಚ್ಚು ಒತ್ತು ನೀಡಬೇಕು. ದೇಶದಲ್ಲಿ ಈ ಹಿಂದೆ ಕಂಡುಬಂದಿದ್ದ ಕೋವಿಡ್‌ನ ಅಲೆಗಳ ಸಂದರ್ಭದಲ್ಲಿ ಕಾರ್ಯನಿರ್ವಹಿಸಿದ ರೀತಿಯಲ್ಲಿಯೇ ಕೇಂದ್ರ ಹಾಗೂ ರಾಜ್ಯಗಳು ಸಮನ್ವಯದಿಂದ ಕೆಲಸ ಮಾಡಬೇಕಿದೆ’ ಎಂದು ಹೇಳಿದರು.

ಕಣ್ಗಾವಲು ವ್ಯವಸ್ಥೆಯನ್ನು ಬಲಗೊಳಿಸಬೇಕು. ಕೋವಿಡ್ ಪತ್ತೆಗೆ ಸಂಬಂಧಿಸಿದ ಮೂಲಸೌಕರ್ಯಗಳನ್ನು ಹೆಚ್ಚಿಸಬೇಕು, ಮುನ್ನೆಚ್ಚರಿಕೆ ಡೋಸ್‌ಗಳನ್ನು ಪಡೆಯುವಂತೆ ಜನರನ್ನು ಉತ್ತೇಜಿಸಬೇಕು. ಅಗತ್ಯ ಔಷಧಗಳ ದಾಸ್ತಾನು ಸೇರಿದಂತೆ ವೈದ್ಯಕೀಯ ಮೂಲಸೌಕರ್ಯಗಳ ಲಭ್ಯತೆ ಹಾಗೂ ಸನ್ನದ್ಧತೆಯ ಮೇಲ್ವಿಚಾರಣೆಯನ್ನು ಆಯಾ ರಾಜ್ಯಗಳ ಆರೋಗ್ಯ ಸಚಿವರೇ ಸ್ವತಃ ಕೈಗೊಳ್ಳಬೇಕು ಎಂದು ಸಚಿವ ಮಾಂಡವೀಯ ಸೂಚಿಸಿದರು.

ಕೋವಿಡ್ ನಿರ್ವಹಣೆ ಕಾರ್ಯತಂತ್ರದ ಬಗ್ಗೆ ಕಳೆದ ಜೂನ್‌ನಲ್ಲಿ ನೀಡಲಾಗಿದ್ದ ಮಾರ್ಗಸೂಚಿಗಳನ್ನು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಗಮನಕ್ಕೆ ಮತ್ತೊಮ್ಮೆ ತರಲಾಯಿತು ಎಂದು ಆರೋಗ್ಯ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಇಳಿಕೆ: ಒಟ್ಟಾರೆ, ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆ ಕಂಡುಬರುತ್ತಿದೆ. ಡಿ. 22ರಂದು ದಾಖಲಾದ ಮಾಹಿತಿಯಂತೆ, ದೇಶದಲ್ಲಿನ ಒಟ್ಟು ಪ್ರಕರಣಗಳ ಪೈಕಿ ಕೇರಳ, ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ ಹಾಗೂ ತಮಿಳುನಾಡಿನ ಪಾಲು ಶೇ 78ರಷ್ಟು ಎಂದು ಮೂಲಗಳು ಹೇಳಿವೆ.

ಇನ್ನಷ್ಟು ಸುದ್ದಿಗಳು 9



ಕಲ್ಲು ಗಣಿಗಾರಿಕೆಗೆ ದಂಡ: 28ಕ್ಕೆ ಪ್ರತಿಭಟನೆ

ಬೆಂಗಳೂರು: ಕ್ರಷರ್ ಮತ್ತು ಕಲ್ಲು ಗಣಿಗಾರಿಕೆಗೆ ಸರ್ಕಾರ ವಿಧಿಸುತ್ತಿರುವ ದಂಡವನ್ನು ವಿರೋಧಿಸಿ ಬೆಂಗಳೂರು ನಗರ ಜಿಲ್ಲಾ ಸ್ಟೋನ್ ಕ್ರಷರ್ ಮತ್ತು ಕ್ವಾರಿ ಮಾಲೀಕರ ಒಕ್ಕೂಟ ಇದೇ 28ರಂದು ಬೆಳಗಾವಿಯ ಸುವರ್ಣ ಸೌಧದ ಬಳಿ ಪ್ರತಿಭಟನೆ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಆನಂದಕುಮಾರ್, 'ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದಂತೆ ಕಾನೂನನ್ನು ಸರಳೀಕರಿಸಿ, ಸಮಸ್ಯೆಗಳ ನಿವಾರಣೆಗೆ ಕ್ರಮವಹಿಸಬೇಕು. ಅವೈಜ್ಞಾನಿಕ ನಿಯಮಗಳನ್ನು ಜಾರಿಗೊಳಿಸುವ ಮೂಲಕ ಐದು ಪಟ್ಟು ದಂಡ ವಿಧಿಸಲಾಗುತ್ತಿದೆ. ಇದನ್ನು ರದ್ದುಪಡಿಸಬೇಕು. ರಾಜಧನದಲ್ಲಿಯೂ ವ್ಯತ್ಯಾಸವನ್ನು ಕಾಣಬಹುದಾಗಿದೆ. ನೆರೆಯ ತಮಿಳುನಾಡಿನಲ್ಲಿ ರಾಜಧನ ₹ 30 ಇದ್ದರೆ, ನಮ್ಮಲ್ಲಿ ₹ 105 ಇದೆ. ಇದರಿಂದ ಇಲ್ಲಿನ ಕ್ರಷರ್ ಮತ್ತು ಗಣಿ ಗುತ್ತಿಗೆದಾರರು ನಷ್ಟ ಅನುಭವಿಸಿ, ಬೀದಿಗೆ ಬರುತ್ತಿದ್ದಾರೆ' ಎಂದು ತಿಳಿಸಿದರು.

'ಸರ್ಕಾರವು ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಬೆಂಗಳೂರಿನಲ್ಲಿ ನಡೆಯುತ್ತಿರುವ ಕಾಮಗಾರಿಗಳಿಗೆ ಜಲ್ಲಿ ಮತ್ತು ಎಂ. ಸ್ಯಾಂಡ್ ಸರಬರಾಜು ಮಾಡುವುದಿಲ್ಲ' ಎಂದು ಎಚ್ಚರಿಸಿದರು.



ಅಂತರ ಕಾಲೇಜು ಸಂಗೀತ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಇಎಸ್ ಕಲಾವೇದಿ ಸಂಸ್ಥೆಯು ಇಲ್ಲಿನ ಪದವಿ ಪೂರ್ವ ಹಾಗೂ ಪದವಿ ವಿದ್ಯಾರ್ಥಿಗಳಿಗೆ ಅಂತರ ಕಾಲೇಜು ಸಂಗೀತ ಸ್ಪರ್ಧೆಯನ್ನು ಹಮ್ಮಿಕೊಂಡಿದೆ.

ಡಿ.28ರಂದು ವೀಣೆ ಶೇಷಣ್ಣ ಸ್ಮಾರಕ ವಾದ್ಯ ಸಂಗೀತ ಸ್ಪರ್ಧೆ ಹಾಗೂ ಸ್ವರಮೂರ್ತಿ ವಿ.ಎಮ್. ರಾವ್ ಸ್ಮಾರಕ ಗಾಯನ ಸ್ಪರ್ಧೆ ಆಯೋಜಿಸಿದೆ. ಸ್ಪರ್ಧೆಗೆ ಪ್ರತಿ ಕಾಲೇಜಿನಿಂದ ಇಬ್ಬರು ವಿದ್ಯಾರ್ಥಿಗಳು ಭಾಗವಹಿಸಬಹುದು. ಪ್ರವೇಶ ಶುಲ್ಕ ₹10 ನಿಗದಿಪಡಿಸಿದ್ದು, ಭಾಗವಹಿಸುವವರು ಪ್ರವೇಶ ಪತ್ರಗಳನ್ನು ಇದೇ 27ರ ಒಳಗೆ ಪ್ರಧಾನ ಕಾರ್ಯನಿರ್ವಾಹಕರು, ಎಂ.ಇ.ಎಸ್. ಕಿಶೋರ ಕೇಂದ್ರ, ಬ್ರಾಹ್ಮಿ, 10ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಬೆಂಗಳೂರು–560003 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ: 080–23562526



ಲೈಂಗಿಕ ಕಿರುಕುಳ ಆರೋಪ: ವೇಣುಗೋಪಾಲ್ ಆರೋಪ ಮುಕ್ತ

ತಿರುವನಂತಪುರ: ಸೌರಫಲಕ ಹಗರಣದಲ್ಲಿ ಆರೋಪಿಯಾಗಿರುವ ಕೇರಳದ ಮಹಿಳೆಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿರುವ ಪ್ರಕರಣದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರನ್ನು ಸಿಬಿಐ ಆರೋಪಮುಕ್ತಗೊಳಿಸಿದೆ.

ಪ್ರಕರಣದ ತನಿಖೆಯ ಅಂತಿಮ ವರದಿಯನ್ನು ತಿರುವನಂತಪುರದ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಸಿಬಿಐ ಶುಕ್ರವಾರ ಸಲ್ಲಿಸಿದೆ. ವೇಣುಗೋಪಾಲ್ ಅವರು ತನಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಮಹಿಳೆಯ ಮಾಡಿರುವ ಆರೋಪಕ್ಕೆ ಯಾವುದೇ ಪುರಾವೆಗಳಿಲ್ಲ ಎಂದು ಸಿಬಿಐ ವರದಿಯಲ್ಲಿ ಹೇಳಿರುವುದಾಗಿ ಮೂಲಗಳು ತಿಳಿಸಿವೆ.

ಪ್ರಶಸ್ತಿಗಾಗಿ ಕೃತಿಗಳ ಆಹ್ವಾನ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿ ನೀಡುವ 'ಚಿರಂತನ ವೈಚಾರಿಕ' ಪ್ರಶಸ್ತಿಗಾಗಿ ಕೃತಿಗಳನ್ನು ಆಹ್ವಾನಿಸಲಾಗಿದೆ.

2022ರಲ್ಲಿ ಪ್ರಕಟಗೊಂಡ ವೈಚಾರಿಕತೆಗೆ ಒತ್ತುಕೊಟ್ಟು ರಚಿತಗೊಂಡ ಕಥೆ, ಕಾದಂಬರಿ, ನಾಟಕ ಮುಂತಾದ ಕೃತಿಗಳನ್ನು ಪ್ರಶಸ್ತಿಗಾಗಿ ಜ.10ರ ಒಳಗೆ ಕಳುಹಿಸಿಕೊಡಬೇಕು ಎಂದು ಸಮಿತಿ ಅಧ್ಯಕ್ಷ ಎ.ಎಸ್. ನಾಗರಾಜಸ್ವಾಮಿ ತಿಳಿಸಿದ್ದಾರೆ.

ಪ್ರಶಸ್ತಿಯು ₹5 ಸಾವಿರ ನಗದು, ಫಲಕ, ಅಭಿನಂದನಾ ಪತ್ರವನ್ನು ಒಳಗೊಂಡಿದೆ. ಕೃತಿಯ 2 ಪ್ರತಿಗಳನ್ನು 'ಎ.ಎಸ್. ನಾಗರಾಜಸ್ವಾಮಿ, ಅಧ್ಯಕ್ಷ, ಕನ್ನಡ ಸಂಘರ್ಷ ಸಮಿತಿ, ನಂ.3, 1ನೇ ತಿರುವು, 1ನೇ ಮುಖ್ಯ ರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಉಲ್ಲಾಳ ಮುಖ್ಯ ರಸ್ತೆ, ಬೆಂಗಳೂರು-560056. ಮೊಬೈಲ್: 9739001410' ಕಳುಹಿಸಬೇಕು.



26ರಂದು ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುರಂಜನ್‌ದಾಸ್ ರಸ್ತೆ-ಹಳೆ ವಿಮಾನ ನಿಲ್ದಾಣ ರಸ್ತೆಯ ಜಂಕ್ಷನ್‌ನಲ್ಲಿ ಬಿಬಿಎಂಪಿಯಿಂದ ಕೆಳಸೇತುವೆ ಕಾಮಗಾರಿ ಕೈಗೆತ್ತಿಕೊಂಡಿದ್ದು, ಆ ಸ್ಥಳದಲ್ಲಿ ನೀರಿನ ಕೊಳವೆ ಮರುಜೋಡಣೆ ಮಾಡಬೇಕಿರುವ ಕಾರಣ ಡಿ.26ರಂದು ಬೆಳಿಗ್ಗೆ 6ರಿಂದ ಸಂಜೆ 6ರ ತನಕ ಕೆಲವು ಪ್ರದೇಶಗಳಲ್ಲಿ ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಎಂಪಿ ಕ್ಯಾಂಪ್, ಕೆಆರ್ ಗಾರ್ಡನ್, ವಿನಾಯಕನಗರ, ಶ್ರೀರಾಮನಗರ ಕೊಳೆಗೇರಿ ಪ್ರದೇಶ, ನಂಜಾರೆಡ್ಡಿ ಕಾಲೊನಿ, ಎನ್‌ಆರ್ ಬಡಾವಣೆ, ಮಂಜುನಾಥ್ ಬಡಾವಣೆ, ಏರ್‌ವ್ಯೂ ಕಾಲೊನಿ, ಇಂದಿರಾನಗರ, ಮೋಟಪ್ಪನಪಾಳ್ಯ, ಅಪ್ಪಾರೆಡ್ಡಿಪಾಳ್ಯ, ಡಿಫೆನ್ಸ್ ಕಾಲೊನಿ, ಮೈಕೆಲ್ ಪಾಳ್ಯ, ಎಚ್. ಕಾಲೊನಿ, ಬಿನ್ನಮಂಗಲ, 1ನೇ ಹಂತ, ಜಿಎಂ ಪಾಳ್ಯ, ಕಾವೇರಿ ಬಡಾವಣೆ, ಮಲ್ಲೇಶಪಾಳ್ಯ, ಸುದಗುಂಟೆಪಾಳ್ಯ, ಕಗ್ಗದಾಸಪುರ, ನ್ಯೂ ತಿಪ್ಪೇಸಂದ್ರ ಹಾಗೂ ಎಚ್‌ಎಎಲ್ 3ನೇ ಹಂತದ ಸುತ್ತಮುತ್ತಲ ಪ್ರದೇಶದಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ತಿಳಿಸಿದೆ.

ಮಿಡ್‌ನೈಟ್ ವಾಕಥಾನ್ ಇಂದು

ಬೆಂಗಳೂರು: ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಅಂಗವಾಗಿ ಡಿ. 24ರಂದು (ಶನಿವಾರ) ಮಧ್ಯಾರಾತ್ರಿ ಮಲ್ಲೇಶ್ವರ ವ್ಯಾಪ್ತಿಯಲ್ಲಿ 'ಮಿಡ್‌ನೈಟ್ ವಾಕಥಾನ್' ಹಮ್ಮಿಕೊಳ್ಳಲಾಗಿದೆ.

ಈ ವಾಕಥಾನ್ ಶನಿವಾರ ರಾತ್ರಿ 11 ಗಂಟೆಯಿಂದ ಮಲ್ಲೇಶ್ವರ ಕ್ರೀಡಾಂಗಣದಿಂದ ಆರಂಭವಾಗಲಿದ್ದು, ಗುಟ್ಟಹಳ್ಳಿಯ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಸ್ಯಾಂಕಿ ರಸ್ತೆ ಸ್ಕೈವಾಕ್, ಗೋಕಾಕ್ ಉದ್ಯಾನ, 18ನೇ ಅಡ್ಡರಸ್ತೆ ಸರ್ಕಾರಿ ಕಾಲೇಜು ಮೂಲಕ ಸಾಗಲಿದ್ದು, ಬಳಿಕ ಚಂದ್ರಶೇಖರ್ ಆಜಾದ್ ಕ್ರೀಡಾಂಗಣಲ್ಲಿ ಮುಕ್ತಾಯವಾಗಲಿದೆ.

ಆಸಕ್ತರು https://prod.racetime.in/event/nmw2022 ನಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬಹುದು ಎಂದು ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಣ್ಣಿನ ಉಚಿತ ತಪಾಸಣೆ, ಶಸ್ತ್ರಚಿಕಿತ್ಸೆ

ಪೀಣ್ಯ ದಾಸರಹಳ್ಳಿ: ಬಾಗಲಗುಂಟೆಯ ಮಾರಮ್ಮ ದೇವಸ್ಥಾನದ ಬಳಿ ಡಾ. ನಾಗಲಕ್ಷ್ಮಿ ಫೌಂಡೇಶನ್ ವತಿಯಿಂದ ಡಿ.25 (ಭಾನುವಾರ) ಬೆಳಿಗ್ಗೆ 9ರಿಂದ ಮಧ್ಯಾಹ್ನ 3 ಗಂಟೆಯವರೆಗೂ ಕಣ್ಣಿನ ಉಚಿತ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆ ಶಿಬಿರ ಆಯೋಜಿಸಲಾಗಿದೆ.

ವೈದ್ಯರಿಂದ ತಪಾಸಣೆ ನಡೆಸಿ ಕಣ್ಣಿನ ದೋಷವಿದ್ದವರಿಗೆ ಶಸ್ತ್ರಚಿಕಿತ್ಸೆ ನೀಡಲಾಗುವುದು. ಸಾರ್ವಜನಿಕರು ಬಂದು, ಇದರ ಉಪಯೋಗ ಪಡೆದುಕೊಳ್ಳಬೇಕು ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಾ. ನಾಗಲಕ್ಷ್ಮಿ ತಿಳಿಸಿದರು.

ಹೆಚ್ಚಿನ ಮಾಹಿತಿಗೆ ಮೊಬೈಲ್ 89511 91178 ಹಾಗೂ 98455 64448 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/124/2022-23 **ಪ್ರಕಟಣೆ** ದಿನಾಂಕ: 22.12.2022.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ (ಕ್ಲಬ್) ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
(1)	(2)	(3)	(4)	(5)	(6)	(7)	(8)	(9)
1)	ಶ್ರೀ ಕೆ. ಪ್ರವೀಣ್ ಬಿನ್ ಕೆ. ಪ್ರತಾಪ್ ರೆಡ್ಡಿ #133/1, ದಿ ರೆಸಿಡೆನ್ಸಿ, 2ನೇ ಮಹಡಿ, ರೆಸಿಡೆನ್ಸಿ ರಸ್ತೆ, ಬೆಂಗಳೂರು–560025.	ಆನೇಕಲ್	ಜಿಗಣಿ	ಮಹಂತಲಿಂಗಾಪುರ	44/5 44/6	0–04 0–37	ವ್ಯವಸಾಯ	ವಾಣಿಜ್ಯ (ಕ್ಲಬ್)

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳು ಭೂಉಪಯೋಗ ಬದಲಾವಣೆಯಿಂದ ಉದ್ಯೋಗ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಾಣಿಜ್ಯ (ಕ್ಲಬ್) ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ
ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/3689/ಆಕಾರ್/22–23







ಆರೈಕೆಯ ವಿಧಾನ

ಹೆರಿಗೆಯಾಗಿ ಆರು ವಾರಗಳ ನಂತರವೇ ಗರ್ಭಕೋಶ ತನ್ನ ಮೊದಲಿನ ಸ್ಥಿತಿಗೆ ಬರುತ್ತದೆ. ಯೋನಿ ಮತ್ತು ಯೋನಿಯ ಸುತ್ತಮುತ್ತಲಿನ ಮಾಂಸಖಂಡಗಳು ಯಥಾಸ್ಥಿತಿಗೆ ಬರಲು ಎಂಟು ವಾರಗಳ ಸಮಯ ಹಿಡಿಯುತ್ತದೆ. ಆದರೂ ಮೊದಲಿನ ಶಕ್ತಿ ಮತ್ತು ಬಿಗಿತವನ್ನು ಪೂರ್ಣ ಪ್ರಮಾಣದಲ್ಲಿ ಪಡೆಯುವುದು ಕಷ್ಟ.

ಎಣ್ಣೆ ಮಜ್ಜನ, ಬಿಸಿ ಬಿಸಿ ನೀರಿನ ಸ್ನಾನ ಸಾಕಾಗುವುದಿಲ್ಲ. ಜತೆಗೆ ಹೊಟ್ಟೆಯ ಮಾಂಸಖಂಡಗಳನ್ನು ಬಲಪಡಿಸುವ ವ್ಯಾಯಾಮದ ಅಗತ್ಯವಿರುತ್ತದೆ. ಸರಿಯಾದ ಪ್ರಮಾಣದಲ್ಲಿ ಆಹಾರ ಸೇವನೆ ಹಾಗೂ ನಿಯಮಿತ ವ್ಯಾಯಾಮದಿಂದ ದೇಹ ಮೊದಲಿನ ಸ್ಥಿತಿಗೆ ಬರಲು ಸಹಾಯವಾಗುತ್ತದೆ. ಸ್ಥಳೀಯವಾಗಿ ಲಭ್ಯವಿರುವ ಆಹಾರಕ್ರಮವನ್ನು ಅನುಸರಿಸಬೇಕು. ಗರ್ಭಿಣಿಯಾಗಿದ್ದಾಗ ತೆಗೆದುಕೊಳ್ಳುತ್ತಿದ್ದಕ್ಕಿಂತ ಹೆಚ್ಚಿನ ಕ್ಯಾಲೊರಿ, ಪ್ರೊಟೀನ್ ಬಾಣಂತಿಯರಿಗೆ ಬೇಕು. ಕುಚಲಕ್ಕಿ, ರಾಗಿ ಇವೆಲ್ಲ ಥಂಡಿಯಾಗಬಹುದು ಎನ್ನುವ ತಪ್ಪು ಕಲ್ಪನೆಯಿದೆ. ಬಿಳಿ ಅಕ್ಕಿಗಿಂತಲೂ ಕುಚಲಕ್ಕಿಯನ್ನೇ ನೀಡಬಹುದು. ತರಕಾರಿ, ಸೊಪ್ಪು, ಹಣ್ಣು ಎಲ್ಲವೂ ಬಾಣಂತಿಯರ ಊಟದಲ್ಲಿ ಇರಲಿ. ಚೆನ್ನಾಗಿ ನೀರು ಕುಡಿಯುವುದನ್ನು ಮರೆಯದಿರಿ.

ಚಳಿಗಾಲ: ಬಾಣಂತಿ ಆರೈಕೆ ಹೀಗಿರಲಿ

ಬಾಣಂತನವೆಂಬ ಅತಿ ಸೂಕ್ಷ್ಮಘಟ್ಟದಲ್ಲಿ ಚಳಿಯ ವಾತಾವರಣದಲ್ಲಿ ಎದುರಾಗುವ ಆರೋಗ್ಯ ಸಮಸ್ಯೆಗಳು, ಸವಾಲುಗಳು ಮತ್ತು ತೆಗೆದುಕೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಸ್ತ್ರೀಆರೋಗ್ಯ ತಜ್ಞೆ ಡಾ.ವೀಣಾ ಎನ್. ಸುಳ್ಯ ವಿವರಿಸಿದ್ದಾರೆ.

ಬಾಣಂತನವೆಂಬುದು ಹೆಣ್ಣಿನ ಬದುಕಿನ ಬಹುಸೂಕ್ಷ್ಮ ಘಟ್ಟ. ದೈಹಿಕ ಹಾಗೂ ಮಾನಸಿಕವಾಗಿ ಸಾಕಷ್ಟು ಏರಿಳಿತವಿರುತ್ತದೆ. ಇಂಥ ಸಮಯದಲ್ಲಿ ಅತಿ ಹೆಚ್ಚು ಕಾಳಜಿ ವಹಿಸುವುದು ಅಗತ್ಯ. ಅದರಲ್ಲೂ ಆಯಾ ಋತುಗಳು ಒಡ್ಡುವ ಸವಾಲುಗಳ ನಡುವೆ ಬಾಣಂತಿ ಮತ್ತು ಶಿಶುವನ್ನು ರಕ್ಷಿಸಬೇಕು. ಥಂಡಿ ವಾತಾವರಣದಲ್ಲಿ ದೇಹಕ್ಕೆ ಹೆಚ್ಚಿನ ಕೊಬ್ಬಿನಾಂಶದ ಅಗತ್ಯವಿರುತ್ತದೆ. ಸೂಕ್ಷ್ಮಜೀವಿಗಳು ಬೆಳೆಯಲು ಈ ವಾತಾವರಣ ಪೂರಕವಾಗಿರುವುದರಿಂದ ನಂಜು ಉಂಟಾಗುವ ಸಾಧ್ಯತೆಯೂ ಹೆಚ್ಚು.

ಹೆರಿಗೆಯಾದ ನಂತರ ರಕ್ತದ ಪರಿಚಲನೆಯಲ್ಲಿನ ವ್ಯತ್ಯಾಸಗಳು, ಜೀರ್ಣಕ್ರಿಯೆಯ ವ್ಯತ್ಯಾಸ, ತೂಕ ಹೆಚ್ಚಳ, ರಕ್ತದೊತ್ತಡ ಹೀಗೆ ನಾನಾ ಸವಾಲುಗಳು ಎದುರಾಗುತ್ತವೆ. ಜತೆಗೆ ಮಗುವಿನ ಜವಾಬ್ದಾರಿ ಇರುತ್ತದೆ. ಹಾಲಿನ ಉತ್ಪತ್ತಿಗೆ ಹೆಚ್ಚುವರಿ ಕ್ಯಾಲೊರಿ ಬೇಕಾಗುತ್ತದೆ. ಬಾಣಂತಿ ಪಥ್ಯದಲ್ಲಿ ಇರಬೇಕು ಎಂಬ ಮಿಥ್ಯೆಯಿಂದಾಗಿ ಪೂರಕ ಆಹಾರವೂ ಸಿಗುವುದಿಲ್ಲ. ಹಾಗಾಗಿ ಬಾಣಂತಿ ಮತ್ತು ಬಾಣಂತನ ಮಾಡುವ ಅಮ್ಮಂದಿರಲ್ಲಿಯೂ ಜಾಗೃತಿ ಮೂಡಬೇಕಿದೆ. ಇನ್ನು ಹೆರಿಗೆಯಾಗಿಯೂ ಶಿಶುವಿನ ಆರೋಗ್ಯ ಸರಿ ಇಲ್ಲದಿದ್ದಾಗ, ಹೆರಿಗೆಯಲ್ಲಿ ತೊಂದರೆ ಯಾದಾಗಲೂ ತಾಯಿ–ಮಗುವಿನ ಆರೈಕೆಗೆ ಪ್ರಾಮುಖ್ಯ ಸಿಗಬೇಕಿದೆ.

ಜನನಾಂಗ ದ್ವಾರದ ನಂಜು: ಹೆರಿಗೆ ಬಳಿಕ ಗರ್ಭಕೋಶದ ಒಳಪದರ ಮತ್ತು ಯೋನಿ ಸಣ್ಣ ಪುಟ್ಟ ಗಾಯಗಳಿಗೆ ಒಳಗಾಗಿರುವುದರಿಂದ, ಪದರಗಳಲ್ಲಿ ಬಿರುಕು ಬಿಟ್ಟಿರುವುದರಿಂದಲೂ ಮತ್ತು ತೆರೆದುಕೊಂಡಿರುವುದರಿಂದಲೂ ಸೂಕ್ಷ್ಮಜೀವಿಗಳು (ಬ್ಯಾಕ್ಟೀರಿಯಾಗಳು) ಶರೀರವನ್ನು ಪ್ರವೇಶಿಸಲು ಅವಕಾಶವಿರುತ್ತದೆ. ಯೋನಿಯ ಮೂಲಕ ಪ್ರವೇಶಿಸಿದ ಸೂಕ್ಷ್ಮ ಜೀವಿಗಳು ಗರ್ಭಕೋಶದ ಮೂಲಕ ಗರ್ಭನಾಳಗಳ ಮುಖಾಂತರ ಕೆಳ ಹೊಟ್ಟೆಯ ಒಳಗೆ ಪ್ರವೇಶಿಸಿ ನಂಜು, ಇಡೀ ಹೊಟ್ಟೆಯನ್ನು ತಲುಪಿ ಮಾರಣಾಂತಿಕವಾಗುವ ಸಾಧ್ಯತೆ ಇದೆ .

ಗಾಳಿ, ಬೆಳಕಿರುವ ಸ್ವಚ್ಛ ಕೊಠಡಿಯಲ್ಲಿ ಬಾಣಂತಿ ಹಾಗೂ ಮಗು ಇರಬೇಕು. ಹೆರಿಗೆಯಾದ ನಂತರ 3 ವಾರಗಳವರೆಗೆ ಬಾಣಂತಿಗೆ ರಕ್ತಸ್ರಾವ ಉಂಟಾಗುತ್ತದೆ. ಹಾಸಿಗೆ ಬಟ್ಟೆಗಳು, ಮುಟ್ಟಿನ ಬಟ್ಟೆಗಳು, ಒಳಉಡುಪುಗಳನ್ನು ಚೆನ್ನಾಗಿ ತೊಳೆದು ಬಿಸಿಲಿನಲ್ಲಿ ಒಣಗಿಸಿಯೇ ಬಳಕೆ ಮಾಡಬೇಕು. ಚಳಿಗಾಲದಲ್ಲಿ ಬಟ್ಟೆ ಸರಿಯಾಗಿ ಬಿಸಿಲಿಗೆ ಒಣಗದೇ ಮರುಬಳಕೆ ಮಾಡಿದರೆ ಸೂಕ್ಷ್ಮಾಣು ಜೀವಿಗಳಿಂದ ನಂಜು ಉಂಟಾಗುತ್ತದೆ. ಕೆಲವು ಭಾಗಗಳಲ್ಲಿ ಬಾಣಂತಿಯರನ್ನು ಮೈಲಿಗೆಯ ಹೆಸರಿನಲ್ಲಿ ಮನೆಯಿಂದ ಹೊರಗಿರಿಸುವ ಪದ್ಧತಿ ಇದೆ. ಇದರಿಂದ ತಾಯಿ ಹಾಗೂ ಮಗುವಿನ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ.

ಏನೆಲ್ಲ ಸಮಸ್ಯೆ?

ಪ್ರಸವೋತ್ತರ ಜ್ವರ: ಯಾವುದೇ ಬಾಣಂತಿಗೆ ಹೆರಿಗೆಯಾಗಿ 10 ದಿನಗಳ ಒಳಗೆ ಜ್ವರ ಕಾಣಿಸಿಕೊಂಡರೆ ಅದನ್ನು ಬಾಣಂತಿ ಜ್ವರ ಎಂದೇ ಕರೆಯಲಾಗುತ್ತದೆ. ಕೆಳಕಂಡ ಸೋಂಕುಗಳು ಈ ಜ್ವರಕ್ಕೆ ಕಾರಣವಾಗಿರಬಹುದು.

ಮೂತ್ರನಾಳದಲ್ಲಿ ನಂಜು: ಗರ್ಭಕೋಶದ ಒತ್ತಡ ಮೂತ್ರಚೀಲಕ್ಕೆ ಬೀಳುವುದರಿಂದ, ಮೂತ್ರಚೀಲದ ಮಾಂಸಖಂಡಗಳು ಸೆಳೆತಕ್ಕೆ ಒಳಗಾಗಿ ಸಣ್ಣದಾಗುವ ಶಕ್ತಿಯನ್ನು ಕಳೆದುಕೊಂಡಿರುವುದರಿಂದ, ಮೂತ್ರಚೀಲ ತುಂಬಿದಾಗ ಸಂವೇದನೆಯನ್ನು ಕಳಿಸುವ ನರತಂತುಗಳ ಕಾರ್ಯಕ್ಷಮತೆಯು ಕುಂಠಿತಗೊಂಡು ಮೂತ್ರ ತುಂಬಿದ ಸೂಚನೆ ಸಿಗದೇ ಇರುವ ಸಂದರ್ಭಗಳಲ್ಲಿ ಮೂತ್ರನಾಳದಲ್ಲಿ ನಂಜು ಉಂಟಾಗುತ್ತದೆ. ಆಗಾಗ ಮೂತ್ರ ವಿಸರ್ಜನೆ ಮಾಡದೇ ಇರುವುದರಿಂದ ಮೂತ್ರದಲ್ಲಿ ಉರಿ ಕಾಣಿಸಿಕೊಳ್ಳಬಹುದು. ಬಾಣಂತಿಗೆ ನೀರು ಕೊಟ್ಟರೆ ನಂಜಾಗುತ್ತದೆ ಎನ್ನುವ ತಪ್ಪು ಕಲ್ಪನೆಯಿದೆ. ಇದರಿಂದ ಮೂತ್ರ ಉತ್ಪತ್ತಿ ಕಡಿಮೆಯಾಗುತ್ತದೆ.

ಮೂತ್ರನಾಳದಲ್ಲಿ ನಂಜು ಉಂಟಾಗಿ (ಯುರಿಟ್ರೈಟಿಸ್) ಮೂತ್ರಚೀಲದಿಂದ ಮೂತ್ರಪಿಂಡ ತಲುಪುತ್ತದೆ. ವಿಪರೀತ ನಿರ್ಜಲೀಕರಣದಿಂದಾಗಿ (ಡೀಹೈಡ್ರೇಷನ್) ಚಳಿ–ಜ್ವರ ಉಂಟಾಗಿ ಸೂಕ್ತ ಚಿಕಿತ್ಸೆ ಸಿಗದೆ ಮೂತ್ರಪಿಂಡ ವೈಫಲ್ಯ ಉಂಟಾಗಬಹುದು. ಮರಣ ಸಂಭವಿಸಬಹುದು.

ರಕ್ತನಾಳಗಳಲ್ಲಿ ನಂಜು: ರಕ್ತ ಪರಿಚಲನೆಯಲ್ಲಿ ವ್ಯತ್ಯಾಸ, ದೈಹಿಕವಾಗಿ ಚಟುವಟಿಕೆ ಇಲ್ಲದಿರುವುದು, ನೀರು ಕುಡಿಯುವುದು ಕಡಿಮೆ ಆದಾಗಲೂ ರಕ್ತನಾಳದಲ್ಲಿ ನಂಜು ಉಂಟಾಗುತ್ತದೆ. ಹೆಪ್ಪುಗಟ್ಟಿದ್ದ ರಕ್ತದ ಭಾಗಗಳು ಅಲ್ಲಿಂದ ಪ್ರತ್ಯೇಕಗೊಂಡು ಮೆದುಳಿಗೆ ಹೋಗಿ ರಕ್ತಪರಿಚಲನೆಗೆ ತೊಂದರೆ ಕೊಡುತ್ತದೆ. ಪ್ರಜ್ಞೆ ತಪ್ಪಬಹುದು, ಶರೀರ ಸ್ವಾಧೀನ ತಪ್ಪಬಹುದು. ಶ್ವಾಸಕೋಶದ ರಕ್ತನಾಳಗಳಲ್ಲಿ ನಂಜು ಪ್ರವೇಶಿಸಿ ಮುನ್ಸೂಚನೆ ಕೊಡದೆ ಮರಣ ಸಂಭವಿಸಬಹುದು. ಚಟುವಟಿಕೆಯಿಂದ ಇರುವುದು, ಅಗತ್ಯವಿರುವಷ್ಟು ನೀರು ತೆಗೆದುಕೊಳ್ಳುವುದರಿಂದ ಈ ನಂಜಿನಿಂದ ದೂರವಿರಬಹುದು.

ಸ್ತನಗಳಲ್ಲಿ ನಂಜು: ಸ್ತನ್ಯಪಾನದ ವೇಳೆ ತೊಟ್ಟಿನ ಸುತ್ತದ ಪೂರ್ತಿ ಭಾಗ ಶಿಶುವಿನ ಬಾಯಿಯ ಒಳಗೆ ಹೋಗುವಂತೆ ನೋಡಿಕೊಳ್ಳಬೇಕು. ತೊಟ್ಟನ್ನು ಮಾತ್ರ ಚೀಪದಂತೆ ಜಾಗ್ರತೆ ವಹಿಸಬೇಕು. ಮಗು ಸರಿಯಾಗಿ ಹಾಲು ಕುಡಿಯದೇ ಇದ್ದಾಗ ಸ್ತನದಲ್ಲಿ ಹಾಲು ಪೂರ್ತಿ ಖಾಲಿಯಾಗುವುದಿಲ್ಲ. ಎದೆಯಲ್ಲಿ ಹಾಲು ತುಂಬಿದಾಗ, ಸಮಯಕ್ಕೆ ಸರಿಯಾಗಿ ಖಾಲಿ ಆಗದೆ ಇದ್ದಾಗಲೂ ಜ್ವರ ಬರುತ್ತದೆ. ಸ್ತನದ ತೊಟ್ಟಿನಲ್ಲಿ ಸಣ್ಣ ಗಾಯವಾದರೂ, ಆ ಗಾಯದಿಂದ ನಂಜು ನಾಳಗಳ ಮೂಲಕ ಹಾಲು ಉತ್ಪತ್ತಿ ಮಾಡುವ ಗ್ರಂಥಿಗಳನ್ನು ತಲುಪುತ್ತದೆ. ನಾಳಗಳಲ್ಲಿ ತಡೆ ಉಂಟಾಗುವುದರ ಜತೆಗೆ ಹಾಲು ಹೊರಬರುವುದು ನಿಲ್ಲುತ್ತದೆ. ಹಿಮ್ಮುಖವಾದ ಒತ್ತಡದಿಂದ ಜೀವಕೋಶಗಳು ಸಾಯುವುದಲ್ಲದೇ, ರಸಿಕೆ ತುಂಬಿಕೊಳ್ಳುತ್ತದೆ. ನಂಜಿನ ಲಕ್ಷಣಗಳನ್ನು ಗುರುತಿಸಿದ ಕೂಡಲೇ ಆ್ಯಂಟಿಬಯೋಟಿಕ್ ಮತ್ತು ನೋವು ನಿವಾರಕ ಮಾತ್ರೆಗಳನ್ನು ಕೊಟ್ಟು ಸಮಸ್ಯೆಗೆ ಪರಿಹಾರ ಕೊಡಬಹುದು.



ಗೀತಾಗೆ ಡಾಕ್ಟರೇಟ್ ‘ಸಿದ್ಧಿ’

ನಿರೂಪಣೆ: ಪವಿತ್ರಾ ಭಟ್

‘ಟಣಿಂಗಾ ಮಿಣಿಂಗಾ ಟಿಶ್ಯಾ..’ ಹಾಡಿನ ಮೂಲಕ ನಾಡಿನಾದ್ಯಂತ ಮನೆಮಾತಾಗಿದ್ದ ರಂಗಭೂಮಿ ಕಲಾವಿದೆ ಗೀತಾ ಸಿದ್ಧಿ, ಈಗ ‘ಡಾ. ಗೀತಾ ಸಿದ್ಧಿ’ಯಾಗಿದ್ದಾರೆ. ರಂಗಭೂಮಿಯಲ್ಲಿ ಡಾಕ್ಟರೇಟ್ ಪಡೆದ ಸಿದ್ಧಿ ಸಮುದಾಯದ ಮೊದಲ ಮಹಿಳೆ ಎಂಬ ವಿಶೇಷಣಕ್ಕೂ ಪಾತ್ರರಾಗಿದ್ದಾರೆ. ಈ ಪಯಣದ ಹಾದಿಯನ್ನು ಇಲ್ಲಿ ತೆರೆದಿಟ್ಟಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲ್ಲೂಕಿನ ಅಣಲೆಸರ ಗ್ರಾಮ ನನ್ನೂರು, ಪ್ರಾಥಮಿಕ ಶಿಕ್ಷಣವನ್ನು ಹಾಸಣಗಿ ಶಾಲೆಯಲ್ಲಿ, ಪ್ರೌಢಶಾಲೆಯನ್ನು ಮಂಚಿಕೇರಿಯಲ್ಲಿ ಮುಗಿಸಿದೆ. ಅಪ್ಪ ಅಮ್ಮನಿಗೆ ಕೂಲಿ ಬಿಟ್ಟರೆ ಬೇರೇನೂ ತಿಳಿಯದು. ಎಸ್ಸೆಸ್ಸೆಲ್ಸಿಯಲ್ಲಿ ಗಣಿತ ಹಾಗೂ ವಿಜ್ಞಾನ ವಿಷಯಗಳಲ್ಲಿ ಫೇಲಾದೆ. ಇದರಿಂದ ಸಾಕಷ್ಟು ಅವಮಾನ, ಹಿಂಜರಿಕೆ ಅನುಭವಿಸಿದೆ. ಇದು ನನ್ನ ಓದಿಗೆ ಹಿನ್ನಡೆಯಾಯಿತು.

ನೀನಾಸಂ ತಂದ ತಿರುವು...

ಹತ್ತನೇ ತರಗತಿಯ ನಂತರ ಗೆಳತಿಯರೆಲ್ಲರೂ ಓದಿಗಾಗಿ ಬೇರೆ ಕಡೆ ತೆರಳಿದರು. ನಾನು ಊರಿನಲ್ಲಿ ಒಂಟಿಯಾದೆ. ಇದೇ ಸಮಯಕ್ಕೆ ನೀನಾಸಂ (ನೀಲಕಂಠೇಶ್ವರ ನಾಟ್ಯ ಸಂಘ) ಶಿಬಿರ ಹಮ್ಮಿಕೊಂಡಿತ್ತು. ಅಲ್ಲಿ ಮೇಷ್ಟ್ರಾಗಿದ್ದ ಚಿದಂಬರ ರಾವ್ ಜಂಬೆ ಅವರು ನನ್ನನ್ನು ಸೇರಿಸಿಕೊಂಡು ‘ಪುಂಟಿಲ’ ಎನ್ನುವ ನಾಟಕ ಮಾಡಿಸಿದರು. ಜತೆಗೆ ನನ್ನ ಅಭಿನಯ ಕಂಡು ‘ನೀನ್ಯಾಕೆ ನೀನಾಸಂಗೆ ಸೇರಬಾರದು’ ಎಂದು ಕೇಳಿದರು.

ಸಿದ್ದಿಗಳನ್ನು ಅಸ್ಪೃಶ್ಯರಂತೆ ನೋಡುವ ಕಾಲವೊಂದಿತ್ತು. ನಮ್ಮನ್ನು ನೋಡಿ ನಗುವವರೇ ಹೆಚ್ಚಿದ್ದರು. ಆದರೆ, ಯಕ್ಷಗಾನ, ಭರತನಾಟ್ಯ, ಸಂಗೀತ, ಡಮಾಮಿ ಕುಣಿತ, ಸುಗ್ಗಿ ಕುಣಿತ ಇವೆಲ್ಲವೂ ನಾನು ಬೆಳೆದ ಪರಿಸರದಲ್ಲಿ ತುಸು ಹೆಚ್ಚೇ ಪ್ರಚಲಿತದಲ್ಲಿತ್ತು. ನಾನು ಕಂಡುಂಡ ನೋವುಗಳಿಗೆ ಈ ಕಲೆ ಮದ್ದಾಗಿತ್ತು. ಅದೇ ನನ್ನೊಳಗೆ ಹೊಸ ಧೈರ್ಯವನ್ನು ಹುಟ್ಟುಹಾಕಿತ್ತು.

ನೀನಾಸಂನಲ್ಲಿ ನಾಟಕದ ಡಿಪ್ಲೊಮಾ ಕೋರ್ಸ್‌ಗೆ ಸೇರಿದೆ. ಸಹಪಾಠಿಗಳೆಲ್ಲ ಪದವಿ ಮುಗಿಸಿ ಬಂದವರು. ಅವರ ಎದುರು ಫೇಲಾದ ಕೀಳರಿಮೆಯ ಸೂಜಿ ನನ್ನನ್ನು ಸದಾ ಚುಚ್ಚುತ್ತಿತ್ತು. ಓದು ಮುಂದುವರಿಸುವ ಯೋಚನೆ ಬಂದದಷ್ಟೆ ತಡ ಮಾಡಲಿಲ್ಲ. ಫೇಲ್ ಆಗಿದ್ದ ಎಸ್ಸೆಸ್ಸೆಲ್ಸಿಯ ಎರಡು ವಿಷಯಗಳನ್ನು ಓದಿ ಪಾಸ್ ಮಾಡಿದೆ. ಮುಂದೆ ಓದುವ ಆಸಕ್ತಿ ಮೊಳೆಯಿತಾದರೂ ಹಣಕ್ಕೆ ತತ್ವಾರವಿತ್ತು. ಹಾಗಾಗಿ ನೀನಾಸಂ ತಿರುಗಾಟ ತಂಡದೊಂದಿಗೆ ಸೇರಿ ನಾಟಕಗಳಿಂದ ಬಂದ ಹಣದಿಂದ ದ್ವಿತೀಯ ಪಿಯು ಮುಗಿಸಿದೆ.

ಬೆಂಗಳೂರಿನ ನಂಟು

ಅಷ್ಟೊತ್ತಿಗಾಗಲೇ ಅಕ್ಕ ಗಿರಿಜಾ ರಂಗಭೂಮಿ ಕಲಾವಿದ ಸಿ. ಚನ್ನಕೇಶವ ಅವರನ್ನು ಮದುವೆಯಾಗಿದ್ದರು. ಇವರು ನನ್ನ ಕನಸಿನ ಬದುಕಿಗೆ ನೀರೆರೆದರು. ಅವರ ಪ್ರೋತ್ಸಾಹದಿಂದಲೇ ಬೆಂಗಳೂರಿಗೆ ಬಂದೆ. ರಂಗಭೂಮಿ ಹಾಗೂ ಕ್ರೀಡೆಯಲ್ಲಿನ ಆಸಕ್ತಿಯಿಂದಾಗಿ ಸುರಾನಾ ಕಾಲೇಜಿನಲ್ಲಿ ಪದವಿ ತರಗತಿಗೆ ಪ್ರವೇಶ ಪಡೆದೆ. ರಾಜಕೀಯಶಾಸ್ತ್ರ ಇಷ್ಟದ ಕಾರಣ ಇತಿಹಾಸ, ಇಂಗ್ಲಿಷ್ ಹಾಗೂ ರಾಜಕೀಯಶಾಸ್ತ್ರವನ್ನು ಆಯ್ಕೆ ಮಾಡಿಕೊಂಡೆ. ನೀನಾಸಂ ಕೋರ್ಸ್‌ನ ಪ್ರಮಾಣಪತ್ರದ ಆಧಾರದ ಮೇಲೆ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ನಾಟಕ ವಿಷಯದಲ್ಲಿ ಎಂ.ಎ ಮುಗಿಸಿದ್ದೆ.

ಅಕ್ಷರದಿಂದ ಆತ್ಮವಿಶ್ವಾಸ..

ಹಿಂದುಳಿದ ವರ್ಗದವರಾಗಿದ್ದು, ರೂಪದಲ್ಲಿಯೂ ಸಂಪ್ರದಾಯದಲ್ಲಿಯೂ ಭಿನ್ನವಾಗಿರುವ ನಮ್ಮ ಸಿದ್ದಿ ಜನಾಂಗಕ್ಕೆ ಮೂಲಸೌಕರ್ಯವೆಲ್ಲ ಕನಸಿನ ಮಾತಾಗಿತ್ತು. ನಾಡಿನಲ್ಲಿದ್ದರೂ ಕಾಡುಪಾಲಾದ ಜನಾಂಗ ನಮ್ಮದು. ಹಾಗಾಗಿ ಓದಿನ ಕಿಚ್ಚಿನಿಂದಲೇ ಬದುಕನ್ನು ಒಪ್ಪವಾಗಿಸಿಕೊಳ್ಳಬೇಕು, ನನ್ನ ಸಮುದಾಯಕ್ಕೂ ನೆಲೆ ಕಲ್ಪಿಸಿಕೊಡಬೇಕು ಎಂಬ ಮಹದಾಸೆ ಇತ್ತು. ಹಾಗಾಗಿ ಪಿಎಚ್‌.ಡಿ ಪಡೆಯಲು ಮುಂದಾದೆ. ಅದಕ್ಕಾಗಿ ಆಯ್ಕೆ ಮಾಡಿಕೊಂಡಿದ್ದು ಅದೇ ರಂಗಭೂಮಿ ವಿಷಯವನ್ನು.

ಎಂ.ಎ ಮುಗಿದ ತಕ್ಷಣ ಸಿಇಟಿ ಬರೆದು ಸಿಕ್ಕ ಅವಕಾಶವನ್ನು ಬಳಸಿಕೊಳ್ಳಬೇಕೆಂದು ನಿರ್ಧರಿಸಿದೆ. ಆದರೆ ಮಾರ್ಗದರ್ಶಕರ ಆಯ್ಕೆ ಕಷ್ಟವಾಯಿತು. ಸ್ನೇಹಿತರೆಲ್ಲರೂ ಗೈಡ್‌ಗಳನ್ನು ಆಯ್ಕೆ ಮಾಡಿಕೊಂಡ ಕಾರಣ ಕೊನೆಯಲ್ಲಿ ನಾನು ಬಾಕಿಯಾದೆ. ಆಗ ಸಿಕ್ಕವರು ಪ್ರದರ್ಶನ ಕಲಾ ವಿಭಾಗದ ಪ್ರಾಧ್ಯಾಪಕರಾದ ಡಾ.ಎಸ್. ಎನ್. ಸುಶೀಲಾ ಮೇಡಂ.

ಪಿಎಚ್‌.ಡಿ ಮಾಡುವಾಗಲೂ ಹಣದ ಸಮಸ್ಯೆಯಾಗಿತ್ತು. ಆಗಲೂ ನನ್ನ ಕೈಹಿಡಿದಿದ್ದು ಕಲೆ ಮತ್ತು ರಂಗಭೂಮಿ. ಆಗಾಗ ನಾಟಕಗಳನ್ನು ಮಾಡುತ್ತಿದ್ದೆ. ಅಲ್ಲಲ್ಲಿ ಹಾಡುಗಳನ್ನು ಹಾಡುವುದು, ಮಕ್ಕಳ ಶಿಬಿರಗಳನ್ನು ನಡೆಸಿ ನಾಟಕದ ತರಬೇತಿ ನೀಡುತ್ತಿದ್ದೆ. ಜೊತೆಗೆ ಒಂದಷ್ಟು ಸ್ಕಾಲರ್‌ಷಿಪ್‌ಗಳಿಂದ ಕಲಿಕೆಯ ದಾರಿ ಸುಗಮವಾಯಿತು. ‘ಆಧುನಿಕ ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಸ್ತ್ರೀಲೋಕ’ ಎಂಬ ಮಹಾಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ಸಿಕ್ಕಿತು. ಜನಪದ ಹಾಡುಗಾರಿಕೆಯಿಂದ ಭಾರತ ಮಾತ್ರವಲ್ಲದೆ ಅಮೆರಿಕ, ದುಬೈಗಳಲ್ಲೂ ಸಿದ್ದಿ ಜನಾಂಗದ ಕಥೆಗಳ ಆಧಾರಿತ ನಾಟಕ ಪ್ರದರ್ಶನ ನೀಡಿದ್ದೇನೆ.

ಸಿದ್ದಿಯರ ಪರ ನಿಲ್ಲುವ ಕನಸು...

ನನ್ನ ಸಮುದಾಯಕ್ಕೆ ಗೌರವ ಸಿಗಬೇಕಿದೆ. ಅದನ್ನು ದಕ್ಕಿಸಿಕೊಡುವುದು ನನ್ನ ಜವಾಬ್ದಾರಿಯೂ ಹೌದು. ಎಸ್ಸೆಸ್ಸೆಲ್ಸಿ ಪಾಸಾಗುವುದೇ ದೊಡ್ಡದು ಎನ್ನುವ ಸ್ಥಿತಿ ಇದೆ. ಓದುವ ಹಂಬಲವಿರುವವರಿಗೆ ಸ್ಫೂರ್ತಿಯಾಗಿ ನಿಲ್ಲಬೇಕಿದೆ. ರಂಗಭೂಮಿಯಲ್ಲಿ ಸಕ್ರಿಯರಾಗಿರುವ ಸಿದ್ದಿಯರನ್ನು ನೋಡುವ ದೃಷ್ಟಿಕೋನವೂ ಬದಲಾಗಬೇಕಿದೆ.

ಪುಸ್ತಕ ಬರೆಯುವಾಸೆ...

ಜಾನಪದ ವಿಶ್ವವಿದ್ಯಾಲಯದಲ್ಲಿ ಎರಡು ವರ್ಷ ಉಪನ್ಯಾಸಕಿಯಾಗಿದ್ದೆ. ಈಗಲೂ ಪಾಠ ಮಾಡುವ ತುಡಿತವಿದೆ. ಅದರ ಜೊತೆಗೆ ಮುಖ್ಯವಾಗಿ ಸಿದ್ದಿ ಜನಾಂಗದ ಹಾಡು, ಕಲೆ, ಕತೆಗಳನ್ನು ಒಟ್ಟು ಸೇರಿಸಿ ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಆಸೆಯಿದೆ. ನಮ್ಮ ಸಂಪ್ರದಾಯದ ಡಮಾಮಿ ಹಾಡು, ನೃತ್ಯಗಳನ್ನು ಮಾಡುವುದು ಇತ್ತೀಚಿನವರಿಗೆ ಅವಮಾನ ಎನಿಸಲು ಆರಂಭವಾಗಿದೆ. ಹಳೆಯ ಪದ್ಧತಿಯನ್ನು ಬರಹದ ಮುಖಾಂತರವಾಗಿಯೋ, ಸಿನಿಮಾ, ಹಾಡುಗಳ ಮೂಲಕವಾಗಿಯೋ ಕಾಪಿಟ್ಟುಕೊಳ್ಳುವ ಅಗತ್ಯವಿದೆ.

ಟಣಿಂಗ ಮಿಣಿಂಗ ಟಿಶ್ಯಾ...

‘ಸಲಗ’ ಸಿನಿಮಾ ತಂಡ ಹಾಡು ಬೇಕೆಂದು ಕೇಳಿದಾಗ ಮೊದಲು ಒಪ್ಪಿರಲಿಲ್ಲ. ಏಕೆಂದರೆ ಸಮುದಾಯದ ಸಂಸ್ಕೃತಿಗೆ ಧಕ್ಕೆಯಾಗಬಹುದೆಂಬ ಭಯವಿತ್ತು. ಕೊನೆಯಲ್ಲಿ ಹಿರಿಯರ ಒಪ್ಪಿಗೆ ಪಡೆದು ಟಣಿಂಗ ಮಿಣಿಂಗ ಟಿಶ್ಯಾ ಹಾಡನ್ನು ನಾನು ಮತ್ತು ಅಕ್ಕ ಗಿರಿಜಾ ನಮ್ಮದೇ ಶೈಲಿಯಲ್ಲಿ ಹಾಡಿದ್ದೆವು. ಅದಕ್ಕೆ ಆಧುನಿಕ ರೂಪ ಕೊಟ್ಟಿದ್ದು ಚಿತ್ರತಂಡ. ಹೀಗಾಗಿ ಹಾಡು ಜನಪ್ರಿಯವಾಯಿತು.


ಗೀತಾ ಸಿದ್ದಿ

ಕರ್ನಾಟಕ, ಗುಜರಾತ್‌ನಲ್ಲಷ್ಟೇ ಸಿದ್ದಿಗಳ ಆವಾಸ...

ಪಿತೃ ಆರಾಧನೆ, ಪ್ರಕೃತಿಯ ಪೂಜೆಯನ್ನೇ ನಂಬಿಕೊಂಡಿರುವ ಜನಾಂಗ ಸಿದ್ದಿ ಸಮುದಾಯ. ಸುಮಾರು 200 ವರ್ಷಕ್ಕೂ ಹಿಂದೆ ಈ ಜನಾಂಗದವರು ಆಫ್ರಿಕಾದಿಂದ ಭಾರತಕ್ಕೆ ವಲಸೆ ಬಂದರು ಎನ್ನುವ ಉಲ್ಲೇಖವಿದೆ. ಹೆಚ್ಚಾಗಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲ, ಹಳಿಯಾಳ, ಮುಂಡಗೋಡ, ಯಲ್ಲಾಪುರ, ಜೊಯಿಡಾದಲ್ಲಿ ವಾಸ ಮಾಡುತ್ತಾರೆ. ತಮ್ಮದೇ ಆದ ಸಂಪ್ರದಾಯ, ಸಂಸ್ಕೃತಿ, ಆಚಾರ, ವಿಚಾರಗಳಿಂದ ಅಸ್ತಿತ್ವ ಕಂಡುಕೊಂಡಿದ್ದಾರೆ.

ಟೇಸ್ಟಿ ಟೇಸ್ಟಿ ಚಿಕನ್ ಗೊಜ್ಜು

ನಾನ್‌ವೆಜ್ ಪ್ರಿಯರಿಗೆ ಇಷ್ಟವಾಗುವಂತಹ, ಮನೆಯಲ್ಲೇ ಸುಲಭ, ಸರಳ ಹಾಗೂ ಕಡಿಮೆ ಸಮಯದಲ್ಲಿ ತಯಾರಿಸಬಹುದಾದ ವಿಶಿಷ್ಟ ಚಿಕನ್ ಖಾದ್ಯಗಳ ಬಗ್ಗೆ ವಿವರಿಸಿದ್ದಾರೆ ದೀಪಕ್ ಗೌಡ


ಚಿಕನ್ ಲಿವರ್ ಗುಂಡಿಗೆಕಾಯಿ ಗೊಜ್ಜು



ಬೇಕಾದ ಸಾಮಗ್ರಿಗಳು: ಕೋಳಿಯ ಗುಂಡಿಗೆಕಾಯಿ ಲಿವರ್ – ಅರ್ಧ ಕೆಜಿ, ಈರುಳ್ಳಿ –4, ಟೊಮೊಟೊ –4, ಹಸಿಮೆಣಸಿನಕಾಯಿ –6, ಶುಂಠಿ –ಬೆಳ್ಳುಳ್ಳಿ ಪೇಸ್ಟ್, ಕೊತ್ತಂಬರಿ ಸೊಪ್ಪು –ಒಂದು ಕಪ್, ಖಾರದಪುಡಿ –ಎರಡು ಚಮಚ, ದನಿಯಾ ಪುಡಿ –ಎರಡು ಚಮಚ, ಗರಂ ಮಸಾಲ –ಒಂದು ಚಮಚ, ಜೀರಿಗೆ ಪುಡಿ –ಒಂದು ಚಮಚ, ಅರಿಶಿಣ ಪುಡಿ –ಅರ್ಧ ಚಮಚ, ಒಗ್ಗರಣೆಗೆ ಆಗುವಷ್ಟು ಎಣ್ಣೆ, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ

ಕುಕ್ಕರ್‌ನಲ್ಲಿ ಗುಂಡಿಗೆಕಾಯಿ ಮತ್ತು ಲಿವರ್ ಅನ್ನು ಪ್ರತ್ಯೇಕವಾಗಿ ಫ್ರೈ ಮಾಡಿಕೊಳ್ಳಬೇಕು. ಗುಂಡಿಗೆಕಾಯಿಯಲ್ಲಿ ಹೆಚ್ಚು ಕೊಬ್ಬಿನಂಶ ಇರುವುದರಿಂದ ಕಡಿಮೆ ಎಣ್ಣೆ ಬಳಸಬೇಕು. ಸ್ವಲ್ಪ ಉಪ್ಪು, ಎರಡು ಗ್ಲಾಸ್ ನೀರನ್ನು ಬಳಸಿ ಮೂರರಿಂದ ನಾಲ್ಕು ನಿಮಿಷ ಫ್ರೈ ಮಾಡಿಕೊಳ್ಳಬೇಕು. ನಂತರ ಲಿವರ್ ಹಾಕಿ ಚೆನ್ನಾಗಿ ಮಿಶ್ರಣವನ್ನು ಮಾಡಿ. ಬಳಿಕ ಪಾತ್ರೆಯಲ್ಲಿ ನಾಲ್ಕು ಚಮಚ ಎಣ್ಣೆ ಹಾಕಿಕೊಂಡು ಈರುಳ್ಳಿ, ಟೊಮೆಟೊ, ಹಸಿಮೆಣಸಿನಕಾಯಿ, ಶುಂಠಿ-ಬೆಳ್ಳುಳ್ಳಿ ಪೇಸ್ಟ್, ಮಸಾಲೆ ಪುಡಿಗಳನ್ನು ಹಾಕಿ ಚೆನ್ನಾಗಿ ಬೆರೆಸಿಕೊಡಬೇಕು. ಅದಕ್ಕೆ ಈಗಾಗಲೇ ಫ್ರೈ ಮಾಡಿಕೊಂಡಿದ್ದ ಗುಂಡಿಗೆಕಾಯಿ ಲಿವರ್ ಅನ್ನು ಒಗ್ಗರಣೆಗೆ ಸೇರಿಸಬೇಕು. ರುಚಿಗೆ ತಕ್ಕಷ್ಟು ಉಪ್ಪು ಮಿಶ್ರಣ ಮಾಡಿಕೊಂಡು ಹತ್ತರಿಂದ ಹದಿನೈದು ನಿಮಿಷಗಳವರೆಗೆ ಬೇಯಿಸಿದರೆ ಚಿಕನ್ ಲಿವರ್ ಗುಂಡಿಗೆಕಾಯಿ ಗೊಜ್ಜು ಸವಿಯಲು ಸಿದ್ಧ.



ನಳಪಾಕ

ಹರಿಯಾಲಿ ಚಿಕನ್

ಬೇಕಾದ ಸಾಮಗ್ರಿಗಳು: ಚಿಕನ್ –ಅರ್ಧ ಕೆಜಿ, ಈರುಳ್ಳಿ –4, ಎಣ್ಣೆ –ಒಂದು ಕಪ್, ಹಸಿ ಮೆಣಸಿನಕಾಯಿ, ಚಕ್ಕೆ, ಏಲಕ್ಕಿ, ಪುದಿನ –ಒಂದು ಕಪ್, ಕೊತ್ತಂಬರಿ ಸೊಪ್ಪು –ಒಂದು ಕಪ್, ಕಸ್ತೂರಿ ಮೆಂತ್ಯ –ಒಂದು ಕಪ್, ಜೀರಿಗೆ ಪುಡಿ –ಒಂದು ಚಮಚ, ಗರಂಮಸಾಲಾ –ಒಂದು ಚಮಚ, ಖಾರದಪುಡಿ –ಒಂದು ಚಮಚ, ದನಿಯಾ ಪುಡಿ –ಒಂದು ಚಮಚ, ಶುಂಠಿ -ಬೆಳ್ಳುಳ್ಳಿ ಪೇಸ್ಟ್, ಮೊಸರು –ಒಂದು ಕಪ್, ಒಗ್ಗರಣೆಗೆ ಬೇಕಾದಷ್ಟು ಎಣ್ಣೆ, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಪುದಿನ, ಕೊತ್ತಂಬರಿ ಸೊಪ್ಪು, ಹಸಿ ಮೆಣಸಿನಕಾಯಿ, ಮೊಸರು ಸೇರಿಸಿ ಮಿಕ್ಸಿಯಲ್ಲಿ ರುಬ್ಬಿಕೊಳ್ಳಬೇಕು. ಬಳಿಕ ಪ್ಯಾನ್‌ನಲ್ಲಿ ಎಣ್ಣೆ ಬಿಸಿ ಮಾಡಲು ಇಡಿ. ಎಣ್ಣೆ ಬಿಸಿಯಾದ ಮೇಲೆ ಏಲಕ್ಕಿ, ಚಕ್ಕೆಯನ್ನು ಹಾಕಿ ಬೆರೆಸಿಕೊಡಬೇಕು. ಅದಕ್ಕೆ ಹೆಚ್ಚಿದ ಈರುಳ್ಳಿಯನ್ನು ಹಾಕಿ ಚೆನ್ನಾಗಿ ಫ್ರೈ ಮಾಡಿ. ಈರುಳ್ಳಿ ಕಂದು ಬಣ್ಣಕ್ಕೆ ತಿರುಗಿದ ಬಳಿಕ ಚಿಕನ್ ಹಾಕಿ. ಅದಕ್ಕೆ ಶುಂಠಿ- ಬೆಳ್ಳುಳ್ಳಿ ಪೇಸ್ಟ್, ಮಸಾಲೆ ಪದಾರ್ಥಗಳನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಚಿಕನ್ ಎಣ್ಣೆ ಬಿಡುವವರೆಗೆ ಫ್ರೈ ಮಾಡಬೇಕು. ರುಬ್ಬಿದ ಮಿಶ್ರಣವನ್ನು ಹಾಕಿ, ಕಡಿಮೆ ಪ್ರಮಾಣದಲ್ಲಿ ನೀರನ್ನು ಸೇರಿಸಿ ಕುದಿಯಲು ಬಿಡಿ. ಸಣ್ಣ ಉರಿಯಲ್ಲಿ 15- 20 ನಿಮಿಷ ಬೇಯಿಸಿ. ಕೊನೆಯಲ್ಲಿ ಎರಡು ಚಮಚ ಕಸ್ತೂರಿ ಮೆಂತ್ಯ ಸೇರಿಸಿ ಚೆನ್ನಾಗಿ ಬೆರೆಸಿದರೆ ಹರಿಯಾಲಿ ಚಿಕನ್ ಸವಿಯಲು ರೆಡಿ.

ನವಜಾತ ಶಿಶುವಿಗೂ ಕೆಂಪುಮುಟ್ಟಾಗಲು ಸಾಧ್ಯವೇ?

ಸ್ಪಂದನ



ಡಾ. ವೀಣಾ ಎಸ್. ಭಟ್

• ನನಗೆ ಹೆರಿಗೆಯಾಗಿ ಈಗ ಆರನೇ ದಿನ. ಎರಡು ದಿನಗಳ ಹಿಂದೆ ಮಗುವಿಗೆ ಯೋನಿಭಾಗದಿಂದ ರಕ್ತಸ್ರಾವ ಆಯಿತು. ಈಗ ನಿಂತಿದೆ. ಎಲ್ಲರೂ ಮುಂದೆ ತೊಂದರೆ ಎಂದು ಹೆದರಿಸುತ್ತಾರೆ. ಆಸ್ಪತ್ರೆಯಲ್ಲಿ ಇದೆಲ್ಲಾ ನಾರ್ಮಲ್ ಎನ್ನುತ್ತಾರೆ. ಮುಂದೆ ಏನಾದರೂ ತೊಂದರೆ ಇದೆಯಾ ಡಾಕ್ಟರ್?

ಸಾಹೀರಬಾನು, ದಾವಣಗೆರೆ

ಉತ್ತರ: ಸಾಹೀರರವರೇ ಕೆಲವು ನವಜಾತ ಹೆಣ್ಣು ಶಿಶುಗಳಲ್ಲಿ, ಹುಟ್ಟಿದ 2 ರಿಂದ 10 ದಿನಗಳೊಳಗಾಗಿ ಯಾವಾಗ ಬೇಕಾದರೂ ಈ ತರಹ ಯೋನಿಯಿಂದ ಮುಟ್ಟಿನ ತರಹದ ಸ್ರಾವ ಆಗಬಹುದು. ಇದನ್ನು ‘ಸುಳ್ಳುಮುಟ್ಟು‘ ಎನ್ನುತ್ತಾರೆ. ಇದಕ್ಕೆ ಕಾರಣ ಶಿಶು ತಾಯಿಯ ಗರ್ಭದಲ್ಲಿದ್ದಾಗ ಹೆಣ್ತನದ ಹಾರ್ಮೋನಾದ ಈಸ್ಟ್ರೋಜನ್‌ಗೆ ಕಸ ಅಥವಾ ಮಾಸುವಿನ ಮೂಲಕ ತೆರೆದುಕೊಂಡಿರುತ್ತದೆ. ನವಜಾತ ಶಿಶುವಿನಲ್ಲಿ ಈ ಸ್ರಾವವೂ ಕೆಂಪಾಗಿ ಇಲ್ಲವೇ ತಿಳಿಕೆಂಪಾಗಿ, ಮೂರರಿಂದ ನಾಲ್ಕುದಿನದವರೆಗೆ ಆಗಬಹುದು. ಅದಕ್ಕೂ ಹೆಚ್ಚಾದರೆ ತಜ್ಞವೈದ್ಯರನ್ನ ಸಂಪರ್ಕಿಸಿ. ಇಷ್ಟೇ ಅಲ್ಲ ಕೆಲವು ಹೆಣ್ಣು ಶಿಶುಗಳಲ್ಲಿ ಜನನ ನಂತರ ಹತ್ತು ದಿನಗಳೊಳಗೆ ಈಸ್ಟ್ರೋಜನ್ ಹಾರ್ಮೋನು ಕಡಿಮೆಯಾಗಿ ಯೋನಿಯಿಂದ ದಪ್ಪಗೆ ಬಿಳಿ ಅಥವಾ ಬೂದು ಬಣ್ಣದ ಸ್ರಾವವೂ ಆಗಬಹುದು ಮತ್ತು ಯೋನಿಭಾಗವೂ ಸ್ವಲ್ಪ ಊದಿ ಕೆಂಪು ಕೂಡಾ ಆಗಬಹುದು. ಇನ್ನೂ ಕೆಲವು ಶಿಶುಗಳಲ್ಲಿ ಹೆಣ್ಣು ಅಥವಾ ಗಂಡು ಶಿಶು ಎಂಬ ಬೇಧವಿಲ್ಲದೆ ಸ್ತನಗಳ ಬಾವು ಉಂಟಾಗಬಹುದು. ಅದರಲ್ಲಿ ಸ್ವಲ್ಪ ಪ್ರಮಾಣದಲ್ಲಿ ಹಾಲೂ ಉತ್ಪಾದನೆಯಾಗಬಹುದು (ಮಾಟಗಾತಿ ಹಾಲು). ಇವಕ್ಕೆಲ್ಲಾ ಯಾವುದೇ ವಿಶೇಷ ಚಿಕಿತ್ಸೆಯ ಅಗತ್ಯವಿಲ್ಲ. ತಾನೇ ತಾನಾಗಿ ಸರಿಹೋಗುತ್ತದೆ. ಭಯ, ಆತಂಕಪಡುವುದು ಬೇಡ.

ಹೆಚ್ಚಿನ ಪ್ರಶ್ನೆಗಳಿಗೆ prajavani.net ಓದಿ

ಸ್ಪಂದನ

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಸಂಕ್ಷಿಪ್ತ ಸುದ್ದಿ

ಲಂಚ: 'ಮುಡಾ' ತಹಶೀಲ್ದಾರ್, ಎಸ್‌ಡಿಎ, ಅಟೆಂಡರ್ ಬಂಧನ

ಮೈಸೂರು: ನಿವೇಶನಗಳಿಗೆ ಖಾತೆ ಮಾಡಿಕೊಡಲು ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ತಹಶೀಲ್ದಾರ್ ಶ್ರೀನಿವಾಸ್, ಎಸ್‌ಡಿಎ ರಂಗಣ್ಣ ಹಾಗೂ ಅಟೆಂಡರ್ ವರಲಕ್ಷ್ಮಿ ಅವರನ್ನು ಲೋಕಾಯುಕ್ತ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

'ನಗರದ ನಿವಾಸಿ ಕಾರ್ತಿಕ್ ಎಂಬುವರು 7 ನಿವೇಶನಗಳಿಗೆ ಖಾತೆ ಮಾಡಿಸಲು ಅರ್ಜಿ ಸಲ್ಲಿಸಿದ್ದರು. ಆ ಕೆಲಸ ಮಾಡಿಕೊಡಲು ಪ್ರತಿ ನಿವೇಶನಕ್ಕೆ ₹ 2 ಸಾವಿರದಂತೆ ₹ 14 ಸಾವಿರ ಲಂಚಕ್ಕೆ ಅಧಿಕಾರಿಗಳು ಬೇಡಿಕೆ ಇಟ್ಟಿದ್ದರು. ಅಟೆಂಡರ್ ವರಲಕ್ಷ್ಮಿ ಮೂಲಕ ತಹಶೀಲ್ದಾರ್ ಶ್ರೀನಿವಾಸ್ ಹಣ ಪಡೆಯುವಾಗ ಸಿಕ್ಕಿಬಿದ್ದಿದ್ದಾರೆ' ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

'ಖಾತೆ ಮಾಡಿಕೊಡಲು 2 ವರ್ಷಗಳಿಂದ ಅಲೆಸುತ್ತಿದ್ದಾರೆ. ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ' ಎಂದು ಕಾರ್ತಿಕ್ ಲೋಕಾಯುಕ್ತಕ್ಕೆ ದೂರು ನೀಡಿದ್ದರು.

ಲೋಕಾಯುಕ್ತ ಎಸ್ಪಿ ಸುರೇಶ್ ಬಾಬು ಮಾರ್ಗದರ್ಶನದಲ್ಲಿ, ಡಿವೈಎಸ್‌ಪಿ ಕೃಷ್ಣ ಹಾಗೂ ಇನ್‌ಸ್ಪೆಕ್ಟರ್ ರೂಪಶ್ರೀ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿತು.

ಜಾಮೀನು ನಿಯಮ ಉಲ್ಲಂಘಿಸಿ ಆರ್. ಡಿ. ಪಾಟೀಲ ನಾಪತ್ತೆ



ಆರ್.ಡಿ. ಪಾಟೀಲ

ಕಲಬುರಗಿ: ಹೈಕೋರ್ಟ್‌ನ ಕಲಬುರಗಿ ಪೀಠದಿಂದ ಈಚೆಗೆ ಜಾಮೀನು ಪಡೆದ ಪಿಎಸ್‌ಐ ಅಕ್ರಮ ನೇಮಕಾತಿ ಹಗರಣದ ಪ್ರಮುಖ ಆರೋಪಿ ಆರ್.ಡಿ. ಪಾಟೀಲ ಬಿಡುಗಡೆಯಾದ ದಿನದಿಂದ ನಾಪತ್ತೆಯಾಗಿದ್ದು, ವಿಚಾರಣೆಗೆ ಹಾಜರಾಗುವಂತೆ ಸಿಐಡಿ ಪೊಲೀಸರು ಮೂರನೇ ನೋಟಿಸ್ ಜಾರಿಗೊಳಿಸಿದ್ದಾರೆ.

'ಜಾಮೀನು ಪಡೆಯುವಾಗ, ನ್ಯಾಯಾಲಯದ ವ್ಯಾಪ್ತಿ ಬಿಟ್ಟು ಬೇರೆಡೆ ತೆರಳುವುದಿಲ್ಲ. ವಿಚಾರಣೆಗೆ ಕರೆದಾಗ ಹಾಜರಾಗುವೆ, ಸಾಕ್ಷಿಗಳಿಗೆ ಬೆದರಿಸುವುದಿಲ್ಲ, ಅಕ್ರಮಗಳಲ್ಲಿ ತೊಡಗುವುದಿಲ್ಲ ಎಂಬ ಷರತ್ತುಗಳಿಗೆ ಆರೋಪಿ ಒಪ್ಪಿದ್ದ' ಎಂದು ಸಿಐಡಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಈಗಾಗಲೇ ಮೂರು ನೋಟಿಸ್ ಜಾರಿಗೊಳಿಸಿದ್ದೇವೆ. ಶೀಘ್ರ ಹಾಜರಾಗದಿದ್ದರೆ ಜಾಮೀನು ರದ್ದುಗೊಳಿಸಲು ಹೈಕೋರ್ಟ್‌ಗೆ ಕೋರುತ್ತೇವೆ' ಎಂದು ಸಿಐಡಿ ಅಧಿಕಾರಿಯೊಬ್ಬರು ತಿಳಿಸಿದರು. ಡಿ. 17ರಂದು ಬಿಡುಗಡೆಯಾಗಿದ್ದು, ಅಂದಿನಿಂದ ನಾಪತ್ತೆಯಾಗಿದ್ದಾರೆ.

ಜೂನ್ 4ರಂದು ಜೆಇಇ ಅಡ್ವಾನ್ಸ್ಡ್

ನವದೆಹಲಿ (ಪಿಟಿಐ): ಭಾರತೀಯ ತಂತ್ರಜ್ಞಾನ ಸಂಸ್ಥೆಗಳ (ಐಐಟಿ) ಪ್ರವೇಶಕ್ಕಾಗಿ ನಡೆಸುವ ಜಂಟಿ ಪ್ರವೇಶ ಪರೀಕ್ಷೆ (ಜೆಇಇ) ಅಡ್ವಾನ್ಸ್ಡ್ ಅನ್ನು 2023ರ ಜೂನ್ 4ರಂದು ನಡೆಸಲಾಗುವುದು ಎಂದು ಐಐಟಿ ಗುವಾಹಟಿ ಶುಕ್ರವಾರ ಘೋಷಿಸಿದೆ.

2023ರಲ್ಲಿ ಈ ಪರೀಕ್ಷೆ ನಡೆಸುವ ಜವಾಬ್ದಾರಿಯನ್ನು ಈ ಸಂಸ್ಥೆಗೆ ವಹಿಸಲಾಗಿದೆ.

ಪರೀಕ್ಷೆಯಲ್ಲಿ ತಲಾ ಮೂರು ಗಂಟೆ ಅವಧಿಯ ಎರಡು ಪ್ರಶ್ನೆಪತ್ರಿಕೆಗಳು ಇರಲಿವೆ. ಪರೀಕ್ಷಾರ್ಥಿಗಳು ಕಡ್ಡಾಯವಾಗಿ ಎರಡೂ ಪ್ರಶ್ನೆಪತ್ರಿಕೆಗಳಿಗೆ ಉತ್ತರಿಸಬೇಕು ಎಂದೂ ಐಐಟಿ ಅಧಿಕಾರಿಗಳು ತಿಳಿಸಿದ್ದಾರೆ.

ಆನೆಗೆ ಗುಂಡು ಹೇಳಿಕೆ ಬಿಜೆಪಿ ಮುಖಂಡ ವಿಶ್ವನಾಥ್ ವಿಷಾದ

ಹಾಸನ: 'ನನ್ನ ಪ್ರಾಣ ರಕ್ಷಣೆ ಮಾಡಿಕೊಳ್ಳುವ ಉದ್ದೇಶದಿಂದಾಗಿ, ಆನೆಗೆ ಗುಂಡು ಹಾರಿಸುವುದಾಗಿ ಹೇಳಿದ್ದೇನೆ. ಅದು ಸರಿಯಲ್ಲ. ನನ್ನ ಹೇಳಿಕೆಗೆ ವಿಷಾದ ವ್ಯಕ್ತಪಡಿಸುತ್ತೇನೆ' ಎಂದು ಬಿಜೆಪಿ ಮುಖಂಡ ಎಚ್.ಎಂ.ವಿಶ್ವನಾಥ್ ತಿಳಿಸಿದರು.

'ಆನೆ ಹಾವಳಿ ಅಧ್ಯಯನಕ್ಕೆಂದು ನ.7ರಂದು ಬಂದಿದ್ದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರಾಜ್‌ಕಿಶೋರ್ ಸಿಂಗ್ ನೇತೃತ್ವದ ಉನ್ನತ ಮಟ್ಟದ ಸಮಿತಿ ಎದುರು ನೀಡಿದ್ದ ಹೇಳಿಕೆಯಿಂದಾಗಿ ಕೇಂದ್ರದ ಮಾಜಿ ಸಚಿವೆ ಮೇನಕಾ ಗಾಂಧಿ ಹಾಸನ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದರು. ಆ ಪರಿಣಾಮ, ಜಿಲ್ಲಾಧಿಕಾರಿ ನನ್ನ ಬಂದೂಕು ವಶಕ್ಕೆ ಪಡೆದಿದ್ದಾರೆ' ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ನಮ್ಮ ಮನೆತನದ ಹಿರಿಯರಿಗೆ ಬ್ರಿಟಿಷರ ಕಾಲದಲ್ಲಿ ಉಡುಗೊರೆಯಾಗಿ ನೀಡಿದ್ದ ಆಯುಧವದು. ಇದೀಗ ಜಿಲ್ಲಾಡಳಿತ ನನ್ನ ಅಭಿಪ್ರಾಯವನ್ನೂ ಕೇಳದೇ ಅದನ್ನು ವಶಕ್ಕೆ ಪಡೆದಿದೆ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.



ಹಿಮಾಚಲ ಪ್ರದೇಶದ ಸ್ಕೌಟ್ಸ್ ಮತ್ತು ಗೈಡ್ಸ್ ತಂಡವು ತಮ್ಮ ರಾಜ್ಯದ ಸಾಂಪ್ರದಾಯಿಕ ಮದುವೆಯ ದಿಬ್ಬಣದ ದೃಶ್ಯವನ್ನು ಶುಕ್ರವಾರ ಪ್ರಸ್ತುತಪಡಿಸಿತು – ಪ್ರಜಾವಾಣಿ ಚಿತ್ರ /ಫಕ್ರುದ್ದೀನ್ ಎಚ್.

ಮದುವೆಗಳ ರಂಗಿನ ಲೋಕ

• ಪ್ರವೀಣ ಕುಮಾರ್ ಪಿ.ವಿ

ಮೂಡುಬಿದಿರೆ: ಮಹಾರಾಷ್ಟ್ರದಲ್ಲಿ ಮದುವೆ ಸಂದರ್ಭದಲ್ಲಿ ವಧು–ವರರ ಹಾಗೂ ಅವರ ಪರಿವಾರದವರ ಉಡುಗೆ ತೊಡುಗೆ ಹೇಗಿರುತ್ತದೆ, ಹಿಮಾಚಲ ಪ್ರದೇಶದಲ್ಲಿ ಮದುವಣಗಿತ್ತಿಯನ್ನು ಮದುವೆ ಮಂಟಪಕ್ಕೆ ಕರೆ ತರುವ ಮೆರವಣಿಗೆ ಎಷ್ಟು ಅದ್ಧೂರಿ, ಮದುವೆ ದಿನ ಹಾಗೂ ಅದರ ಮುನ್ನಾ ದಿನ ಕೊಡವರು ಹಾಡು– ಕುಣಿತಗಳೊಂದಿಗೆ ಸಂಭ್ರಮಿಸುವ ಪರಿ ಹೇಗೆ...

ವಿವಿಧ ರಾಜ್ಯ ಹಾಗೂ ಕರ್ನಾಟಕದ ವಿವಿಧ ಜಿಲ್ಲೆಗಳ ಸಾಂಪ್ರದಾಯಿಕ ವಿವಾಹ ಸಮಾರಂಭಗಳ ವೈಶಿಷ್ಟ್ಯಗಳನ್ನು ಒಂದೇ ವೇದಿಕೆಯಲ್ಲಿ ಕಣ್ತುಂಬಿಕೊಳ್ಳುವ ಅವಕಾಶ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಶುಕ್ರವಾರ ಒದಗಿ ಬಂದಿತ್ತು.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಇಲ್ಲಿನ ಆಳ್ವಾಸ್ ವಿದ್ಯಾಸಂಸ್ಥೆಯ ಪ್ರಾಂಗಣದಲ್ಲಿ ನಡೆಯುತ್ತಿರುವ 'ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ 2022'ರ 'ಏಕ ಭಾರತ ಶ್ರೇಷ್ಠ ಭಾರತ' ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದ ಅಂಗವಾಗಿ ಹರಿಯಾಣ, ಅಸ್ಸಾಂ, ತಮಿಳುನಾಡು, ಮಹಾರಾಷ್ಟ್ರ, ಗೋವಾ, ಹಿಮಾಚಲ ಪ್ರದೇಶ, ಪಂಜಾಬ್, ತೆಲಂಗಾಣ, ಪಶ್ಚಿಮ ಬಂಗಾಳ ಮೊದಲಾದ ರಾಜ್ಯಗಳ ತಂಡಗಳು ತಮ್ಮ ನೆಲದ ಮದುವೆಯ ವೈಶಿಷ್ಟ್ಯಗಳನ್ನು ಪ್ರದರ್ಶಿಸಿದವು. ಒಂದಕ್ಕಿಂತ ಒಂದು ಭಿನ್ನವಾಗಿದ್ದ ಈ ಸಂಪ್ರದಾಯಗಳು ದೇಶದ ಸಾಂಸ್ಕೃತಿಕ ವೈವಿಧ್ಯಕ್ಕೆ ಕನ್ನಡಿ ಹಿಡಿದವು.

ಸಂಪ್ರದಾಯ ಬೇರೆಯೇ ಆಗಿದ್ದರೂ ಈ ಆಚರಣೆಗಳಲ್ಲಿ ಸಂಭ್ರಮ–ಸಡಗರಗಳು ಒಂದೇ ರೀತಿ ಇದ್ದವು. ಮದುವೆ ಸಂದರ್ಭದಲ್ಲಿ ಕಳೆಗಟ್ಟುವ ರಂಗುರಂಗಿನ ಲೋಕದ ಚಿತ್ರಣವನ್ನು ಕಟ್ಟಿಕೊಟ್ಟವು. ದಿಬ್ಬಣ ಶಾಸ್ತ್ರ, ತಾಳಿ ಕಟ್ಟುವುದು ಹಾಗೂ ಧಾರೆ ಎರೆಯುವ ಶಾಸ್ತ್ರ, ಹೆಣ್ಣು ಒಪ್ಪಿಸಿಕೊಡುವ ಶಾಸ್ತ್ರಗಳಲ್ಲಿ ಸಾಮ್ಯತೆ ಇದ್ದವು.

ಕರ್ನಾಟಕದಲ್ಲೂ ಜಿಲ್ಲೆಯಿಂದ ಜಿಲ್ಲೆಗೆ ಮದುವೆ ಪದ್ಧತಿಗಳಲ್ಲಿ ಇರುವ ವೈವಿಧ್ಯಗಳನ್ನೂ ಈ ಕಾರ್ಯಕ್ರಮ ತೆರೆದಿಟ್ಟಿತು.

ಬಾಲಕಿ ಮೇಲೆ ಅತ್ಯಾಚಾರ: ಆರೋಪಿ ಬಂಧನ

ಕೊಪ್ಪಳ: ತಾಲ್ಲೂಕಿನ ಗ್ರಾಮವೊಂದರಲ್ಲಿ ಬಾಲಕಿ ಮೇಲೆ ಅತ್ಯಾಚಾರವೆಸಗಿ, ಬೆದರಿಕೆ ಒಡ್ಡಿದ್ದ ಮೈಲಪ್ಪ ಜ್ಯಾಳಾರ ಎಂಬ ಆರೋಪಿಯನ್ನು ಶುಕ್ರವಾರ ಪೊಲೀಸರು ಬಂಧಿಸಿದ್ದಾರೆ.

'ಏಳು ತಿಂಗಳ ಹಿಂದೆ ಬಾಲಕಿ ಮೇಲೆ ಅತ್ಯಾಚಾರವೆಸಗಿ, ಅದರ ವಿಡಿಯೊ ಮಾಡಿಕೊಂಡಿದ್ದ. ವಿಷಯ ತಿಳಿಸಿದರೆ, ವಿಡಿಯೊ ವೈರಲ್ ಮಾಡುವುದಾಗಿ ಬೆದರಿಸಿದ್ದ. ಗುರುವಾರ ಬಾಲಕಿಗೆ ಹೊಟ್ಟೆನೋವು ಕಾಣಿಸಿಕೊಂಡಿದೆ. ಆಸ್ಪತ್ರೆಯಲ್ಲಿ ವೈದ್ಯರು ಪರೀಕ್ಷಿಸಿದಾಗ, ಆಕೆ ಗರ್ಭಿಣಿಯಾಗಿದ್ದು ದೃಢಪಟ್ಟಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಮತಾಂತರ ನಿಷೇಧ: ಲವ್ ಜಿಹಾದ್ ವಿರುದ್ಧವೂ ಕ್ರಮ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮತಾಂತರ ನಿಷೇಧ ಕಾಯ್ದೆಯಲ್ಲಿ ಲವ್ ಜಿಹಾದ್ ಪ್ರಕರಣಗಳ ವಿರುದ್ಧವೂ ಕ್ರಮ ಕೈಗೊಳ್ಳಲು ಅವಕಾಶವಿದೆ. ಇದರಲ್ಲಿ ಯಾವುದೇ ತೊಡಕುಗಳಿದ್ದರೆ, ತಿದ್ದುಪಡಿ ಮಾಡಲಾಗುವುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

'ವಿವಾಹದ ನೆಪದಲ್ಲಿ ಯಾರನ್ನೂ ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಮತಾಂತರ ಮಾಡುವಂತಿಲ್ಲ. ಬಲವಂತದಿಂದ ಮತಾಂತರ ಮಾಡಿದರೆ ಕ್ರಮ ಕೈಗೊಳ್ಳಲಾಗುವುದು. ಲವ್ ಜಿಹಾದ್‌ಗೆ ಸಂಬಂಧಿಸಿ ರಾಜ್ಯದಲ್ಲಿ ಈಗಾಗಲೇ ಮೂರು ಪ್ರಕರಣಗಳನ್ನು ದಾಖಲಿಸಲಾಗಿದೆ' ಎಂದರು.

'ಸ್ವಯಂ ಪ್ರೇರಣೆಯಿಂದ ಮತಾಂತರಗೊಳ್ಳುವವರು ಮೊದಲು ಸರ್ಕಾರಕ್ಕೆ ತಿಳಿಸಬೇಕು. ಉತ್ತರ ಪ್ರದೇಶದಲ್ಲಿ ಈ ಕಾಯ್ದೆಗಾಗಿ ಕಾರ್ಯಪಡೆ ರಚಿಸಲಾಗಿದೆ. ಆದರೆ, ಕರ್ನಾಟಕದ ಪರಿಸ್ಥಿತಿ ವಿಭಿನ್ನವಾಗಿದ್ದು ಇಲ್ಲಿ ಕಾರ್ಯಪಡೆ ಅಗತ್ಯವಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಅವರು ಉತ್ತರಿಸಿದರು.

ಕೆಇಎ ಮೂಲಕ ಕೆ–ಸೆಟ್: ಆದೇಶ

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯನ್ನು (ಕೆ–ಸೆಟ್) ಮೈಸೂರು ವಿಶ್ವವಿದ್ಯಾಲಯದ ಬದಲಿಗೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಮೂಲಕ ನಡೆಸುವಂತೆ ಉನ್ನತ ಶಿಕ್ಷಣ ಇಲಾಖೆ ಆದೇಶಿಸಿದೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಕೆ–ಸೆಟ್ ಪರೀಕ್ಷೆಯನ್ನು ಅಕ್ರಮವಾಗಿ ನಡೆಸುತ್ತಿದ್ದು, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮೋಸ ಆಗಬಾರದು ಹಾಗೂ ಅವರಿಗೆ ಆದ್ಯತೆ ಸಿಗಬೇಕು ಎಂಬ ಉದ್ದೇಶದಿಂದ ಪಾರದರ್ಶಕತೆ ತರಬೇಕು' ಎಂದು ಸಂಸದ ಪ್ರತಾಪ ಸಿಂಹ ಯುಜಿಸಿ (ವಿಶ್ವವಿದ್ಯಾಲಯ ಧನಸಹಾಯ ಆಯೋಗ) ಅಧ್ಯಕ್ಷ ಜಗದೀಶ್ ಕುಮಾರ್ ಅವರಿಗೆ ಕೆಲ ತಿಂಗಳ ಹಿಂದೆ ಮನವಿ ಸಲ್ಲಿಸಿದರು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರಿಗೂ ಪತ್ರ ಬರೆದಿದ್ದರು.

ಮುಖ್ಯಾಂಶಗಳು

- ಪ್ರತಿಭಾವಂತರಿಗೆ ಮೋಸ ಆಗದಂತೆ ಕ್ರಮ
- ಯುಜಿಸಿಗೆ ಮನವಿ ಮಾಡಿದ್ದ ಪ್ರತಾಪ್ ಸಿಂಹ

ಮಾನ್ಯತೆ ಸಮಿತಿಯ ಶಿಫಾರಸಿನ ಆಧಾರದ ಮೇಲೆ ಕರ್ನಾಟಕ ರಾಜ್ಯದ ಪರವಾಗಿ 41 ವಿಷಯಗಳಲ್ಲಿ 3 (2020ರಿಂದ 3 ವರ್ಷದವರೆಗೆ, ವರ್ಷಕ್ಕೆ ಒಂದು ಬಾರಿಯಂತೆ) ಕೆ–ಸೆಟ್ ಪರೀಕ್ಷೆಗಳನ್ನು ನಡೆಸಲು ಯುಜಿಸಿಯು ಮೈಸೂರು ವಿಶ್ವವಿದ್ಯಾಲಯಕ್ಕೆ ಮಾನ್ಯತೆ ನೀಡಿತ್ತು. ಆದರೆ, ಮೈಸೂರು ವಿಶ್ವವಿದ್ಯಾಲಯದಲ್ಲಿ 2021ರ ಜುಲೈನಲ್ಲಿ ನಡೆದ ಕೆ–ಸೆಟ್ ಪರೀಕ್ಷೆಯಲ್ಲಿ ಅವ್ಯವಹಾರ ನಡೆದಿದೆ ಹಾಗೂ ಈ ಪ್ರಕ್ರಿಯೆಗೆ ವಿ.ವಿಯ ಕೆ–ಸೆಟ್ ಪರೀಕ್ಷೆಯ ಸಂಯೋಜಕರು ಹಾಗೂ ಇತರರು ಸಂಪೂರ್ಣ ಹೊಣೆಗಾರರು ಎಂದು ದೂರುಗಳು ಬಂದಿವೆ. ಈ ಬಗ್ಗೆ ಪ್ರತ್ಯೇಕ ತನಿಖೆಗೆ ಸಮಿತಿ ರಚಿಸಿ ಆದೇಶಿಸಲಾಗಿದೆ.


'ಅವ್ಯವಹಾರಗಳು ನಡೆದಲ್ಲಿ, ಅರ್ಹತೆ ಇರುವ ಪ್ರತಿಭಾವಂತ ಸಾವಿರಾರು ಅಭ್ಯರ್ಥಿಗಳಿಗೆ ಅನ್ಯಾಯ ವಾಗುತ್ತದೆ. ಮುಂದಿನ ಯುವ ಪೀಳಿಗೆಗೆ ಗುಣಮಟ್ಟದ ಶೈಕ್ಷಣಿಕ ವ್ಯವಸ್ಥೆ ಕಲ್ಪಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಪರೀಕ್ಷೆಯಲ್ಲಿ ಪಾರದರ್ಶಕತೆ ತರಲು ಸ್ವತಂತ್ರ ಸಂಸ್ಥೆಯೇ ನಡೆಸುವುದೇ ಸೂಕ್ತವಾಗಿರುತ್ತದೆ ಎಂಬುದನ್ನು ಮನಗಾಣಲಾಗಿದೆ. 2021ರ ಪರೀಕ್ಷೆಯಲ್ಲಿ ಅವ್ಯವಹಾರಗಳ ಹಿನ್ನೆಲೆಯಲ್ಲಿ 2022ನೇ ಸಾಲನ್ನೂ ಒಳಗೊಂಡಂತೆ ಮುಂದಿನ ಆದೇಶದವರೆಗೆ ಕೆಇಎ ಮೂಲಕ ನಡೆಸಲು ನಿರ್ಧರಿಸಲಾಗಿದೆ' ಎಂದು ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು–1) ಅಧೀನ ಕಾರ್ಯದರ್ಶಿ ಶೀತಲ್ ಎಂ.ಹಿರೇಮಠ ಡಿ.17ರಂದು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ನರೇಗಾ ಅಕ್ರಮ ಪ್ರಶ್ನಿಸಿದ್ದಕ್ಕೆ ಯುವಕ ಹತ್ಯೆ?

ಪ್ರಜಾವಾಣಿ ವಾರ್ತೆ

ಕನಕಪುರ: ತಾಲ್ಲೂಕಿನ ಸಾತನೂರು ಹೋಬಳಿಯ ಹಲಸಿನಮರದದೊಡ್ಡಿ ಗ್ರಾಮದಲ್ಲಿ ಗುರುವಾರ ಸಂಜೆ ಮೂರ್ತಿ (30) ಎಂಬುವವರ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಹತ್ಯೆ ಮಾಡಲಾಗಿದ್ದು, ನರೇಗಾ ಅಕ್ರಮ ಪ್ರಶ್ನಿಸಿದ್ದಕ್ಕೆ ಈ ಹತ್ಯೆ ನಡೆದಿದೆ ಎಂದು ಕುಟುಂಬದವರು ಆರೋಪಿಸಿದ್ದಾರೆ.

ಗ್ರಾಮದಲ್ಲಿ ನಡೆದಿರುವ ನರೇಗಾ ಕಾಮಗಾರಿಗಳ ವಿವರವನ್ನು ಮಾಹಿತಿ ಹಕ್ಕು ಕಾಯ್ದೆ ಅಡಿ ಪಡೆದುಕೊಂಡಿದ್ದ ಮೂರ್ತಿ, ಕಾಮಗಾರಿಗಳಲ್ಲಿ ಅಕ್ರಮ ನಡೆದಿರುವ ಕುರಿತು ನರೇಗಾ ಓಂಬುಡ್ಸ್‌ಮನ್‌ಗೆ ದೂರು ಸಲ್ಲಿಸಿದ್ದರು.



ಮೂರ್ತಿ

'ಅಕ್ರಮ ನಡೆಸಿದ್ದವರು ತಂಡ ಕಟ್ಟಿಕೊಂಡು ಮೂರ್ತಿ ಮೇಲೆ 2–3 ಬಾರಿ ಹಲ್ಲೆ ನಡೆಸಿದ್ದರು. ಈ ವೈಷಮ್ಯದಿಂದಲೇ ಅವರ ಹತ್ಯೆ ನಡೆದಿದೆ' ಎಂದು ಕುಟುಂಬ ದೂರಿದೆ.

ಒಬ್ಬ ವಶಕ್ಕೆ: ತಾನೇ ಹತ್ಯೆ ಮಾಡಿರುವುದಾಗಿ ಮೂರ್ತಿ ಸಂಬಂಧಿಕ ಚೇತನ್ ಎಂಬಾತ ಪೊಲೀಸರ ಮುಂದೆ ಶರಣಾಗಿದ್ದಾನೆ. ಆದರೆ, ಕುಟುಂಬ ಇದನ್ನು ನಿರಾಕರಿಸಿದ್ದು, 8–10 ಮಂದಿ ಗುಂಪು ಸೇರಿಕೊಂಡು ಈ ಹತ್ಯೆ ನಡೆಸಿದ್ದಾರೆ. ಆರೋಪಿಗಳನ್ನು ಬಂಧಿಸುವವರೆಗೂ ಶವ ತೆಗೆಯಲು ಬಿಡುವುದಿಲ್ಲ ಎಂದು ರಾತ್ರಿ ಪ್ರತಿಭಟನೆಗೆ ಮುಂದಾಗಿದ್ದರು.

ಪೊಲೀಸರು ನ್ಯಾಯಸಮ್ಮತ ತನಿಖೆ ನಡೆಸುವ ಭರವಸೆ ನೀಡಿದ ಬಳಿಕ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಿದರು. ಶುಕ್ರವಾರ ಹಲಸಿನಮರದದೊಡ್ಡಿ ಗ್ರಾಮದಲ್ಲಿ ಮೂರ್ತಿ ಅಂತ್ಯಕ್ರಿಯೆ ನಡೆಯಿತು.

₹14 ಕೋಟಿ ಹೆಚ್ಚುವರಿ ಹೊರೆ ● ಸಿ.ಎಂ ನಗರೋತ್ಥಾನ: ಮಾರ್ಗಸೂಚಿ ಉಲ್ಲಂಘಿಸಿ ₹108 ಕೋಟಿ ವೆಚ್ಚ

ಜಿಲ್ಲಾಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮುಖ್ಯಮಂತ್ರಿ ನಗರೋತ್ಥಾನ ಯೋಜನೆಯಡಿ ನೀಡಲಾದ ಅನುದಾನದ ಮೊತ್ತದ ಮೇಲೆ ಬಂದಿದ್ದ ಬಡ್ಡಿಯನ್ನು ಅನಧಿಕೃತ ಉದ್ದೇಶಗಳಿಗಾಗಿ ಬಳಸಿದ ಜಿಲ್ಲಾಧಿಕಾರಿಗಳ ವಿರುದ್ಧ ಶೀಘ್ರ ಕ್ರಮ ಕೈಗೊಂಡು, ಮುಖ್ಯ-ಕಾರ್ಯದರ್ಶಿಗೆ ವರದಿ ಸಲ್ಲಿಸುವಂತೆ ಭಾರತದ ಲೆಕ್ಕ ಪರಿಶೋಧಕರು ಮತ್ತು ಮಹಾಲೇಖಪಾಲರು (ಸಿಎಜಿ) ಸೂಚಿಸಿದ್ದಾರೆ.

ಮಹಾನಗರಪಾಲಿಕೆಗಳಲ್ಲಿ ಮುಖ್ಯ-ಮಂತ್ರಿಗಳ ನಗರೋತ್ಥಾನ ಯೋಜನೆ (ಹಂತ–3) ಮೇಲಿನ ಲೆಕ್ಕಪರಿಶೋಧನಾ ವರದಿಯನ್ನು ವಿಧಾನಮಂ-ಡಲದಲ್ಲಿ ಶುಕ್ರವಾರ ಮಂಡಿಸಲಾಯಿತು.

ಸಂಬಂಧ ಪಟ್ಟ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಕಾಮಗಾರಿ ನಡೆಸಿರುವ ಎಲ್ಲ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಬೇಕು, ಉನ್ನತ ಅಧಿಕಾರಿಗಳ ಮಂಜೂರಾತಿ ತಪ್ಪಿಸಲಿ ಕಾಮಗಾರಿ ವಿಭಜನೆ ಮಾಡಿದ ಅಧಿಕಾರಿಗಳ ವಿರುದ್ಧ ವಿಚಾರಣೆ ನಡೆಸಬೇಕು ಎಂದೂ ವರದಿ ವರದಿ ಶಿಫಾರಸು ಮಾಡಿದೆ.

ಗುತ್ತಿಗೆದಾರರ ಆಯ್ಕೆಯಲ್ಲಿ ಮಾನದಂಡವನ್ನೇ ನಿಗದಿ ಮಾಡದೇ ಅಕ್ರಮ ಎಸಗಲಾಗಿದೆ. ಇದಕ್ಕೆ ಕಾರಣ ಕರ್ತರಾದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಅಪೂರ್ಣ ರಸ್ತೆ ಕಾಮಗಾರಿ ನಡೆಸಿದ ಲೋಪಕ್ಕೆ ಕಾರಣರಾದ ಅಧಿಕಾರಿಗಳಿಂದ ₹11.36 ಲಕ್ಷ ವಸೂಲಿ ಮಾಡಬೇಕು ಎಂದು ಶಿಫಾರಸು ಮಾಡಿದೆ.

ಮುಖ್ಯಮಂತ್ರಿ ನಗರೋತ್ಥಾನ ಯೋಜನೆಯಡಿ ₹108.75 ಕೋಟಿಗಳನ್ನು ಸರ್ಕಾರದ ಮಾರ್ಗಸೂಚಿ ಉಲ್ಲಂಘಿಸಿ ವೆಚ್ಚ ಮಾಡಲಾಗಿದೆ ಎಂದು ವರದಿ ಉಲ್ಲೇಖಿದೆ.

10 ಮಹಾನಗರ ಪಾಲಿಕೆಗಳ ಪೈಕಿ ಬಳ್ಳಾರಿ, ಮೈಸೂರು, ತುಮಕೂರು ಹಾಗೂ ವಿಜಯಪುರ ಪಾಲಿಕೆಗಳ ದಾಖಲೆಗಳನ್ನು ಸಿಎಜಿ ಪರಿಶೀಲನೆಗೆ ಒಳಪಡಿಸಿದೆ. ಲಭ್ಯವಿರುವ ₹931.63 ಕೋಟಿಯಲ್ಲಿ ₹922.35 ಕೋಟಿ ವೆಚ್ಚ ಮಾಡಲಾಗಿದೆ. ನಾಲ್ಕು ಪಾಲಿಕೆಗಳಲ್ಲಿನ 277 ಪ್ಯಾಕೇಜ್‌ಗಳಲ್ಲಿ 52 ಪ್ಯಾಕೇ-ಜ್‌ಗಳನ್ನು (ಶೇ 23ರಷ್ಟು) ಪರಿಶೀಲನೆ ಮಾಡಲಾಗಿದೆ.

ಮುಖ್ಯಮಂತ್ರಿ ನಗರೋತ್ಥಾನ ಮೊದಲ ಪಟ್ಟಿಯ ಅನುಷ್ಠಾನ ಕ್ಕಾಗಿ ಸರ್ಕಾರ 2013ರಲ್ಲಿ ಮಾರ್ಗಸೂಚಿ ಹೊರಡಿಸಿತು. ಅದರಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸುವ ಮಾನದಂಡವೇ ಇರಲಿಲ್ಲ. ಹೀಗಾಗಿ, ಮಾನದಂಡವೇ ಇಲ್ಲದೇ ಕ್ರಿಯಾಯೋ-ಜನೆಗಳು ಸಿದ್ಧಗೊಂಡವು. 2014ರಲ್ಲಿ ವಿವರವಾದ ಮಾರ್ಗಸೂಚಿ ಹೊರಡಿಸ-ಲಾಯಿತಾದರೂ ಹಿಂದೆ ಸಿದ್ಧಗೊಂಡಿದ್ದ ಕ್ರಿಯಾಯೋಜನೆಯನ್ನು ಪರಿಷ್ಕರಿ-ಸುವಂತೆ ಸೂಚಿಸಲಿಲ್ಲ. ಪರಿಶೀಲನೆಗೆ ಒಳಪಡಿಸಿದ ಪಾಲಿಕೆಗಳಲ್ಲಿ ಕ್ರಿಯಾ ಯೋಜನೆಗಳಿಗೆ ನಂತರದ ನಾಲ್ಕೈದು ಬಾರಿ ಪರಿಷ್ಕರಣೆ ಮಾಡಿದವು. ಸರ್ಕಾರ ತನ್ನದೇ ಸೂಚನೆಗಳನ್ನು ಕಡೆಗಣಿಸಿ ಪರಿಷ್ಕೃತ ಯೋಜನೆಗಳಿಗೆ ಅನುಮೋದನೆ ನೀಡುವ ಪ್ರಮಾದ ಮಾಡಿತು ಎಂದು ವರದಿ ಉಲ್ಲೇಖಿಸಿದೆ.

ಪರೀಕ್ಷೆಗೆ ಗುರಿಪಡಿಸಲಾದ ಪಾಲಿಕೆಗಳಲ್ಲಿ ವಿಜಯಪುರ ಪಾಲಿಕೆಯಲ್ಲಿ ಮಾತ್ರ ಸಂಚಾರ ನಿರ್ವಹಣೆ ಕಾಮಗಾರಿ ನಡೆದಿದೆ. ಉಳಿದ ಪಾಲಿಕೆಗಳಲ್ಲಿ ಈ ಉದ್ದೇಶಕ್ಕೆ ₹269.28 ಕೋಟಿ ನಿಗದಿಪಡಿಸ-ಲಾಗಿದ್ದು, ₹108.75 ಕೋಟಿಯನ್ನು (ಶೇ 40ರಷ್ಟು) ಯೋಜನಾ ಮಾರ್ಗಸೂಚಿಗೆ ವಿರುದ್ಧವಾಗಿ ಕೈಗೊಳ್ಳಲಾದ ಯೋಜನೆಗಳಡಿ ತೆಗೆದು-ಕೊಳ್ಳಲಾಗಿದೆ. ಉದ್ದೇಶಿತ ಕಾಮಗಾರಿಗೆ ವಿರುದ್ಧವಾಗಿ ಮತ್ತೊಂದಕ್ಕೆ ಹಂಚಿಕೆ ಮಾಡಿ ವೆಚ್ಚ ಮಾಡಲಾಗಿದೆ.

ನಗರೋತ್ಥಾನ ಹಂತ 2ರಿಂದ ಹಂತ 3ಕ್ಕೆ ಹೆಚ್ಚಿನ ಬಡ್ಡಿ ದರದಲ್ಲಿ ಪಡೆದ ಸಾಲವನ್ನು ಮರುಪಾವತಿ ಮಾಡದೇ ಇರುವುದರಿಂದ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯು ₹5 ಕೋಟಿ ಬಡ್ಡಿ ಮಾಡಿತು.

ಇದಲ್ಲದೇ, ಸಾಲ ತೆಗೆದು-ಕೊಳ್ಳುವಾಗ ನಮೂದಿಸಿದ ಬಡ್ಡಿ ದರಕ್ಕಿಂತ ಹೆಚ್ಚಿದ ದರದಲ್ಲಿ ಸಾಲ ಪಡೆದಿರುವುದು, ಕಡಿಮೆ ಬಡ್ಡಿದ-ರದಲ್ಲಿ ಸಾಲ ಲಭ್ಯವಿದ್ದರೂ ಅದನ್ನು ಪಡೆಯದಿರುವುದು ಹಾಗೂ ಸಾಲ ಮರುಪಾವತಿ ವಿಳಂಬಮಾಡಿದ್ದ-ರಿಂದಾಗಿ ₹4.87 ಕೋಟಿ ಹೆಚ್ಚುವರಿ ಹೊರೆಯಾಯಿತು. ವಿಜಯನಗರ ಪಾಲಿಕೆಯು ಕಾನೂನು ಅನುಸರಿಸದೇ ಭೂ ಪರಿಹಾರ ಪಾವತಿಯಲ್ಲಿ ವಿಳಂಬ ಮಾಡಿದ್ದರಿಂದಾಗಿ ₹3.96 ಕೋಟಿ ಹೆಚ್ಚುವರಿ ಹೊರೆಯಾಯಿತು ಎಂದು ವರದಿ ವಿವರಿಸಿದೆ.

ಅನರ್ಹ ಗುತ್ತಿಗೆದಾರರಿಗೆ ಟೆಂಡರ್

ಮೈಸೂರು ಮತ್ತು ಬಳ್ಳಾರಿ ಮಹಾನಗರ ಪಾಲಿಕೆಗಳು 31 ಪ್ಯಾಕೇಜ್‌ಗಳಲ್ಲಿ ಆರು ಪ್ಯಾಕೇಜ್‌ಗಳನ್ನು ಅನರ್ಹ ಗುತ್ತಿಗೆದಾರರಿಗೆ ನೀಡಿವೆ ಎಂದು ವರದಿ ಆಕ್ಷೇಪಿಸಿದೆ.

ಬಿಡ್ ಸಾಮರ್ಥ್ಯದ ತಪ್ಪು ಲೆಕ್ಕಾಚಾರ, ನಕಲಿ ಪ್ರಮಾಣಪತ್ರಗಳ ಸಲ್ಲಿಕೆ ಬಗ್ಗೆ ಗೊತ್ತಿದ್ದರೂ ಅಂತಹ ಗುತ್ತಿಗೆದಾರರನ್ನು ತಿರ-ಸ್ಕರಿಸಿಲ್ಲ. ಟೆಂಡರ್ ದಾಖಲೆಗಳಲ್ಲಿ ನಿಗದಿಪಡಿಸಿದ ಕನಿಷ್ಠ ಅನರ್ಹತೆಯ ಮಾನದಂಡವನ್ನೇ ಅನುಸರಿಸಿಲ್ಲ ಎಂದು ವರದಿ ಹೇಳಿದೆ.

ಬಳ್ಳಾರಿ, ಮೈಸೂರು, ತುಮಕೂರು ಪಾಲಿಕೆಗಳು ಬಿಡ್ ಮಾನ್ಯತೆ ಅವಧಿ ಮುಗಿದ ಬಳಿಕ 43 ಪ್ಯಾಕೇಜ್‌ಗಳಲ್ಲಿ 18 ಪ್ಯಾಕೇಜ್‌ಗಳನ್ನು (ಶೇ 42) ಗುತ್ತಿಗೆ ನೀಡಿವೆ.

ಕಾಮಗಾರಿ ಮಾಡದಿದ್ದರೂ ₹1.4 ಕೋಟಿ

ಬಳ್ಳಾರಿ, ತುಮಕೂರು ಹಾಗೂ ವಿಜಯಪುರ ಪಾಲಿಕೆಗಳಲ್ಲಿ ಕೈಗೊಳ್ಳಲಾದ 30 ಪ್ಯಾಕೇಜ್‌ಗಳಲ್ಲಿ ಆರು ಪ್ಯಾಕೇಜ್‌ಗಳಲ್ಲಿ ಕಾಮಗಾರಿ ಮಾಡದೇ ಇದ್ದರೂ ₹1.4 ಕೋಟಿ ಹಣವನ್ನು ಗುತ್ತಿಗೆದಾರರಿಗೆ ನೀಡಲಾಗಿದೆ.

ಸಲಹೆಗಾರರಿಗೆ ಅನುಭವವೇ ಇಲ್ಲ!

ಕಾಮಗಾರಿಗಳ ಗುಣಮಟ್ಟಕ್ಕೆ ಪರಿಶೀಲನೆಗೆ ನೇಮಕ ಮಾಡಿಕೊಳ್ಳಲಾದ ಯೋಜನಾ ನಿರ್ವಹಣಾ ಸಲಹೆಗಾರರಲ್ಲಿ(ಪಿಎಂಸಿ) ಮೂವರಿಗೆ ಹಣಕಾಸಿನ ವಹಿವಾಟು, ಅನುಭವ ಹಾಗೂ ತಾಂತ್ರಿಕ ತಿಳಿವಳಿಕೆಯೇ ಇರಲಿಲ್ಲ. ಅನರ್ಹ ಸಲಹೆಗಾರರಿಗೆ ಕೆಲಸವನ್ನು ವಹಿಸಲಾಗಿದೆ. ಹೀಗಾಗಿ, ಪಿಎಂಸಿ ಸಲ್ಲಿಸಿದ ಗುಣಮಟ್ಟ ಪರಿಶೀಲನಾ ವರದಿಯಲ್ಲಿ ಅಕ್ರಮ ಗಳು ನಡೆದಿವೆ. ನಿರ್ವಹಿಸಿದ ಕಾಮಗಾರಿಗಳ ಪರಿಮಾಣದಲ್ಲಿ ವ್ಯತ್ಯಾಸ, ಪರಿಶೀಲಿಸಿದ ಕಾಮಗಾರಿಗಳ ಗುಣಮಟ್ಟವನ್ನೇ ಪ್ರಮಾಣೀಕರಿಸದಿರುವುದು, ದಾಖಲೆ ಹಾಗೂ ಲೆಕ್ಕಪತ್ರಗಳ ನಿರ್ವಹಣೆ ಸಮರ್ಪಕವಾಗಿಲ್ಲ ಎಂದು ವರದಿ ಹೇಳಿದೆ.

ಸುದ್ದಿ 2 ನಿಮಿಷ

4,244 ಅಂಗನವಾಡಿ ಕೇಂದ್ರ ಸ್ಥಾಪನೆ: ಹಾಲಪ್ಪ ಆಚಾರ್

ಬೆಳಗಾವಿ: ರಾಜ್ಯದಲ್ಲಿ ಹೊಸದಾಗಿ 4,244 ಅಂಗನವಾಡಿ ಕೇಂದ್ರಗಳನ್ನು ಆರಂಭಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್ ತಿಳಿಸಿದರು.

ವಿಧಾನಸಭೆಯಲ್ಲಿ ಶುಕ್ರವಾರ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಆನಂದ ನ್ಯಾಮೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಹೊಸ ಅಂಗನವಾಡಿ ಕೇಂದ್ರಗಳನ್ನು ಆರಂಭಿಸಲು ಕ್ರಮ ವಹಿಸಲಾಗುವುದು ಎಂದರು.

ಕಡಿಮೆ ಆದಾಯದ ಜನಸಂಖ್ಯೆ ಹೆಚ್ಚಾಗಿ ವಾಸಿಸುತ್ತಿರುವ ಮತ್ತು ಭೂರಹಿತ ಕಾರ್ಮಿಕರನ್ನು ಒಳಗೊಂಡಿರುವ ಗ್ರಾಮಾಂತರ ಪ್ರದೇಶದಲ್ಲಿ 1655 ಮತ್ತು ನಗರ ಪ್ರದೇಶಗಳಲ್ಲಿ 2589 ಅಂಗನವಾಡಿ ಕೇಂದ್ರಗಳನ್ನು ತೆರೆ-ಯಲಾಗುತ್ತದೆ. ವಿವಿಧ ಜಿಲ್ಲೆಗಳಿಂದ 3538 ಅಂಗನವಾಡಿಗಳ ಸ್ಥಾಪನೆಗೆ ಬೇಡಿಕೆ ಬಂದಿದೆ ಎಂದರು.

ಸ್ಥಳೀಯ ಶಾಲಾ ಕಟ್ಟಡ, ಸಮುದಾಯ ಭವನ, ಸಂಘ–ಸಂಸ್ಥೆಗಳ ಜಾಗಗಳಿದ್ದರೆ ಅವುಗಳನ್ನು ಬಳಸಿಕೊಂಡು, ಸ್ಥಳೀಯರನ್ನೇ ಬಳಸಿ ಅಂಗನವಾಡಿ ಆರಂಭಿಸಲಾಗು-ವುದು. ಆ ಬಳಿಕ ನೇಮಕ ಪ್ರಕ್ರಿಯೆ ನಡೆಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.



41 ತಾಲ್ಲೂಕುಗಳಲ್ಲಿ ಸಿಡಿಪಿಒ: ರಾಜ್ಯದ 41 ಹೊಸ ತಾಲ್ಲೂಕುಗಳಲ್ಲಿ ಶಿಶು ಅಭಿವೃದ್ಧಿ ಯೋಜನೆ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್ ತಿಳಿಸಿದರು.

ವಿಷ ಹೊಗೆ ಸೂಸುವ ಕೈಗಾರಿಕೆಗಳು

ಬೆಳಗಾವಿ: ಬಳ್ಳಾರಿಯ ಮುಂಡರಗಿ ಗ್ರಾಮದ ವ್ಯಾಪ್ತಿಯಲ್ಲಿರುವ ಕಾರ್ಖಾನೆಗಳು ರಾತ್ರಿ 8 ಗಂಟೆಯ ಬಳಿಕ ವಿಷಯುಕ್ತ ಹೊಗೆ ಹೊರ ಸೂಸುತ್ತಿದ್ದು, ಮನೆಗಳಲ್ಲಿ ಜನ ಮಲಗಲು ಸಾಧ್ಯವಾಗುತ್ತಿಲ್ಲ. ತುಂಬಾ ಸಮಸ್ಯೆ ಆಗಿದೆ ಎಂದು ಬಿಜೆಪಿಯ ಜಿ. ಸೋಮಶೇಖರ ರೆಡ್ಡಿ ವಿಧಾನಸಭೆಯ ಗಮನ ಸೆಳೆದರು.

ಪ್ರಶ್ನೋತ್ತರ ಅವಧಿಯಲ್ಲಿ ವಿಷಯ ಪ್ರಸ್ತಾಪಿಸಿದ ರೆಡ್ಡಿ, ಈ ಭಾಗದಲ್ಲಿ ಹೊಸ ವಸತಿ ಪ್ರದೇಶಗಳು ಬರುತ್ತಿದ್ದು, ಈ ಉದ್ಯಮಗಳನ್ನು ಜನ ವಸತಿ ಪ್ರದೇಶದಿಂದ ಹೊರಗೆ ಸಾಗಿಸಬೇಕು ಎಂದು ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಕೈಗಾರಿಕಾ ಸಚಿವ ಸಚಿವ ಮುರುಗೇಶ ನಿರಾಣಿ, ಈ ಗ್ರಾಮದ ಸಮಸ್ಯೆ ಗಮನಕ್ಕೆ ಬಂದಿದೆ. ಈಗಾಗಲೇ ಆರು ಕಾರ್ಖಾನೆಗಳಿಗೆ ನೋಟಿಸ್ ನೀಡಲಾಗಿದೆ. ಅಲ್ಲದೇ ಸಮೀಪದಲ್ಲಿರುವ ವೇಣಿ ವೀರಾಪುರದಲ್ಲಿ 650 ಎಕರೆ ಜಮೀನು ಸ್ವಾಧೀನಪಡಿಸಿಕೊಂಡಿದ್ದು, ಅಲ್ಲಿ ವರ್ಗಾವಣೆ ಆಗುವವರಿಗೆ ಅವಕಾಶ ಕೊಡಲಾಗುವುದು. ಇಲ್ಲವೇ ಮಾಲಿನ್ಯ ತಡೆಗಟ್ಟುವ ಘಟಕಗಳನ್ನು ಅಳವಡಿಸಿ-ಕೊಳ್ಳಬೇಕು. ಇವೆರೆಡೂ ಮಾಡದಿದ್ದರೆ ಮುಚ್ಚಿಸಲಾಗುವುದು ಎಂದರು.

ಯಂತ್ರಧಾರೆ ಯೋಜನೆ ರೈತರಿಗೆ

ಬೆಳಗಾವಿ: ಕೃಷಿ ಯಂತ್ರಧಾರೆ ಯೋಜನೆಯನ್ನು ರೈತ ಉತ್ಪಾದಕ ಸಂಸ್ಥೆಗಳಿಗೆ (ಎಫ್‌ಪಿಒ) ವಹಿಸಲು ಚಿಂತನೆ ನಡೆಸಲಾಗಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ತಿಳಿಸಿದರು

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಪ್ರಶ್ನೋತ್ತರ ವೇಳೆಯಲ್ಲಿ ಸದಸ್ಯ ಪಿ.ಎಂ. ಮುನಿರಾಜು ಅವರ ಪ್ರಶ್ನೆಗೆ ಉತ್ತರಿಸಿದ ಅವರು, ’ರಾಜ್ಯದಲ್ಲಿ ಪ್ರಸ್ತುತ 689 ಕೃಷಿ ಯಂತ್ರಧಾರೆ ಕೇಂದ್ರಗಳಿವೆ. ಇನ್ನೂ ಹೋಬಳಿಗೊಂದು ಯಂತ್ರಧಾರೆ ಕೇಂದ್ರ ತೆರೆಯಬೇಕಾಗಿದೆ. ಆದರೆ, ಈಗ ಬಹುತೇಕ ಕೇಂದ್ರಗಳ ಮೇಲ್ವಿಚಾರಣೆ ವಹಿಸಿಕೊಂಡಿದ್ದ ಸಂಸ್ಥೆಗಳ ಒಪ್ಪಂದದ ಅವಧಿ ಮುಗಿದಿದೆ. ಇದನ್ನು ಮುಂದುವರಿಸಲು ಸಂಸ್ಥೆಗಳು ಅಸಕ್ತಿ ವಹಿಸುತ್ತಿಲ್ಲ. ಹೀಗಾಗಿ, ಇನ್ನು ಮುಂದೆ ಈ ಕೇಂದ್ರಗಳನ್ನು ರೈತ ಉತ್ಪಾದಕ ಸಂಸ್ಥೆಗಳಿಗೆ ವಹಿಸಲು ಚಿಂತನೆ ನಡೆಸಲಾಗುತ್ತಿದೆ‘ ಎಂದು ತಿಳಿಸಿದರು.

ಉಪಸಭಾಪತಿಯಾಗಿ ಪ್ರಾಣೇಶ್ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ವಿಧಾನ ಪರಿಷತ್ ಉಪ ಸಭಾಪತಿಯಾಗಿ ಎಂ.ಕೆ. ಪ್ರಾಣೇಶ್ ಅವರು ಎರಡನೇ ಬಾರಿ ಆಯ್ಕೆಯಾದರು. ಶುಕ್ರವಾರ ನಡೆದ ಚುನಾವಣೆಯಲ್ಲಿ ಪ್ರಾಣೇಶ್ ಪರ 39 ಮತಗಳು ಮತ್ತು ವಿರುದ್ಧವಾಗಿ 26 ಮತಗಳು ಚಲಾಯಿಸಲ್ಪಟ್ಟವು.

ಜೆಡಿಎಸ್ ಸದಸ್ಯರು ತಟಸ್ಥರಾಗಿ ಉಳಿದರು. ಕಾಂಗ್ರೆಸ್ ಪಕ್ಷದಿಂದ ಅರವಿಂದ ಕುಮಾರ್ ಅರಳಿ ಅವರು ಸ್ಪರ್ಧಿಸಿದ್ದರು. ಸಭಾಪತಿ ಬಸವರಾಜ ಹೊರಟ್ಟಿ ಅವರು ಚುನಾವಣಾ ಪ್ರಕ್ರಿಯೆ ನಡೆಸಿದರು.

ಪ್ರಾಣೇಶ್ ಅವರಿಗೆ ಅಭಿನಂದನೆ ಸಲ್ಲಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಜವಾಬ್ದಾರಿಯುತ ರಾಜಕಾರಣಿಯಾದ ಎಂ.ಕೆ. ಪ್ರಾಣೇಶ್ ಅವರಿಂದ ವಿಧಾನ ಪರಿಷತ್ ಉಪಸಭಾಪತಿ ಸ್ಥಾನಕ್ಕೆ ಬೆಲೆ ಸಿಗಲಿದೆ’ ಎಂದು ಹೇಳಿದರು.

‘ಕಳೆದ ಬಾರಿ ಉಪಸಭಾಪತಿ-ಯಾಗಿ ಅತ್ಯುತ್ತಮ ಕೆಲಸ ಮಾಡಿದ್ದಾರೆ. ಪ್ರಾಣೇಶ್ ಅವರು ತಮ್ಮ ಗಟ್ಟಿ ನಿಲುವನ್ನು ಹಲವಾರು ಬಾರಿ ಪ್ರದರ್ಶಿಸಿದ್ದಾರೆ. ಆ ನಿಲುವಿನಿಂದ ಇಡೀ ಸದನವನ್ನೇ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವ ಅವಶ್ಯಕತೆ ಇದೆ’ ಎಂದರು.



ವಿಧಾನ ಪರಿಷತ್ತಿನ ಉಪಸಭಾಪತಿಯಾಗಿ ಆಯ್ಕೆಯಾದ ಎಂ.ಕೆ. ಪ್ರಾಣೇಶ್ ಅವರಿಗೆ ಜೆಡಿಎಸ್ ಸದಸ್ಯ ಭೋಜೇಗೌಡ ಅಭಿನಂದಿಸಿದರು. ಸಚಿವ ಕೋಟ ಶ್ರೀನಿವಾಸ ಪೂಜಾರಿ, ಕಾಂಗ್ರೆಸ್ ಸದಸ್ಯ ಗೋವಿಂದರಾಜ್, ಬಿಜೆಪಿ ಸದಸ್ಯ ನಾರಾಯಣಸ್ವಾಮಿ ಮತ್ತು ಪ್ರಕಾಶ್ ರಾಥೋಡ್ ಇದ್ದಾರೆ. –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಚರ್ಚೆಗೆ ಗ್ರಾಸವಾದ ಸಭಾಪತಿ ಜಾತಿ

ಬೆಳಗಾವಿ: ಉಪಸಭಾಪತಿ ಚುನಾವಣೆ ಸಂದರ್ಭದಲ್ಲಿ ಜೆಡಿಎಸ್ ಸದಸ್ಯ ಎಸ್.ಎಲ್. ಭೋಜೇಗೌಡ ಅವರು ಕಾಂಗ್ರೆಸ್ ಧೋರಣೆಯನ್ನು ಪ್ರಶ್ನಿಸಿ, ಸಭಾಪತಿ ವಿರುದ್ಧ ಏಕೆ ಸ್ಪರ್ಧಿಸಲಿಲ್ಲ ಎಂದು ಕೇಳಿದ ಪ್ರಶ್ನೆ ಚರ್ಚೆಗೆ ಗ್ರಾಸ ಒದಗಿಸಿತು.

ಪ್ರಾಣೇಶ್ ಪರ ಸಲ್ಲಿಸಿದ್ದ ಐದು ಪ್ರಸ್ತಾವಗಳನ್ನು ಮತಕ್ಕೆ ಹಾಕುವ ಮುನ್ನ ಮಾತನಾಡಿದ ಭೋಜೇಗೌಡ ಅವರು, ‘ಎರಡು ರಾಷ್ಟ್ರೀಯ ಪಕ್ಷ ಗಳು ಸೌಜನ್ಯಕ್ಕೂ ಸಂಪರ್ಕಿಸಿಲ್ಲ. ಹೀಗಾಗಿ ನಾವು ತಟಸ್ಥರಾಗಿ ಉಳಿಯುತ್ತೇವೆ. ಸಭಾಪತಿ ಚುನಾವಣೆ ವೇಳೆ ಕಾಂಗ್ರೆಸ್‌ನಿಂದ ಯಾರೂ ನಾಮಪತ್ರ ಸಲ್ಲಿಸಲಿಲ್ಲ. ಹೊರಟ್ಟಿ ಅವರು ಮೇಲ್ವರ್ಗಕ್ಕೆ ಸೇರಿದ್ದಾರೆ ಎನ್ನುವುದು ಮುಖ್ಯವಾಯಿತೇ? ಕಾಂಗ್ರೆಸ್‌ನ ದ್ವಿಮುಖ ನೀತಿ ಮತ್ತೊಮ್ಮೆ ಬಯಲಾಗಿದೆ’ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಸಭಾಪತಿ ಹುದ್ದೆ ಘನತೆಯಿಂದ ಕೂಡಿದ್ದು, ಮೇಲ್ವರ್ಗ ಅಥವಾ ಕೆಳವರ್ಗ ಎನ್ನುವುದು ಸರಿ ಅಲ್ಲ. ಭೋಜೇಗೌಡ ಅವರ ಹೇಳಿಕೆ ಉತ್ತಮ ಅಭಿರುಚಿಯಿಂದ ಕೂಡಿಲ್ಲ‘ ಎಂದರು. ಸಭಾಪತಿ ಬಸವರಾಜ ಹೊರಟ್ಟಿ ಪ್ರತಿಕ್ರಿಯಿಸಿ, ‘ಭೋಜೇಗೌಡ ನನಗೆ ಜಾತಿ ಬಣ್ಣ ಹಚ್ಚಬೇಡ. ಸದಸ್ಯನಾಗಿದ್ದ ಸಂದರ್ಭದಲ್ಲಿ ಹಲವರು ನನ್ನನ್ನು ಒಕ್ಕಲಿಗ ಎಂದೇ ಭಾವಿಸಿದ್ದರು’ ಎಂದರು. ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ‘ಕಾಂಗ್ರೆಸ್ ಧರ್ಮ, ಜಾತಿ ಮೀರಿ ನಿರ್ಣಯ ಕೈಗೊಳ್ಳುತ್ತಿದೆ. ಬಿಜೆಪಿಯಿಂದ ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದರೆ ನಮ್ಮ ಪಕ್ಷದ ಅಭ್ಯರ್ಥಿ ಸ್ಪರ್ಧಿಸಬಾರದು ಎಂದು ಹೈಕಮಾಂಡ್ ಸೂಚಿಸಿತ್ತು. ಹೊರಟ್ಟಿ ಅವರ ಹಿರಿತನ, ವ್ಯಕ್ತಿತ್ವ ಪರಿಗಣಿಸಿ ಬೆಂಬಲಿಸಿದ್ದೇವೆ‘ ಎಂದರು.

ಪಿಎಂ ಸ್ವ–ನಿಧಿ ಸಾಲದ ಮೇಲಿನ ಸ್ಟ್ಯಾಂಪ್ ಶುಲ್ಕ ಮಾಫಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಪ್ರಧಾನಮಂತ್ರಿ ಸ್ವ–ನಿಧಿ ನಿಧಿಯಡಿ ಸಾಲ ಪಡೆಯುವ ಬೀದಿ ಬದಿ ವ್ಯಾಪಾರಿಗಳು ನೀಡಬೇಕಾಗಿದ್ದ ಮುದ್ರಾಂಕ ಶುಲ್ಕ ಪಾವತಿಯನ್ನು ರದ್ದುಪಡಿಸುವ ಕರ್ನಾಟಕ ಸ್ಟಾಂಪ್ ಅಧಿನಿಯಮ 1957ಕ್ಕೆ ತಿದ್ದುಪಡಿ ತರಲು ವಿಧಾನಸಭೆಗೆ ಒಪ್ಪಿಗೆ ನೀಡಿತು.

ಕಂದಾಯ ಸಚಿವ ಆರ್.ಅಶೋಕ ಮಸೂದೆಯನ್ನು ಮಂಡಿಸಿದರು. ಸಾಲದ ಕರಾರುಗಳ ಮೇಲೆ ₹500 ಸ್ಟಾಂಪ್ ಶುಲ್ಕವನ್ನು ಪಾವತಿಸಬೇಕಾ-ಗಿತ್ತು. ಸಾರ್ವಜನಿಕ ಹಿತಾಸಕ್ತಿಯಿಂದ ಶುಲ್ಕ ಪಾವತಿ ಮಾಫಿ ಮಾಡಲಾಗಿದೆ ಎಂದು ಹೇಳಿದರು.

ಒಕ್ಕಲಿಗ ಮೀಸಲಾತಿ ಕಾವು

ಒಂದನೇ ಪುಟದಿಂದ

ಇದಕ್ಕೂ ಮುನ್ನ ಫೆಬ್ರುವರಿಯಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ನ್ಯಾ. ಚಂದ್ರಶೇಖರಯ್ಯ ನೇತೃತ್ವದಲ್ಲಿ ಮೀಸಲಾತಿ ಹೆಚ್ಚಳ ಬೇಡಿಕೆ ಕುರಿತು ಹಂತ ಹಂತವಾದ ಹೋರಾಟದ ರೂಪುರೇಷೆಯನ್ನು ರೂಪಿಸಲಾಗಿತ್ತು.

ಬೆಳಗಾವಿಯಲ್ಲಿ ಕಾಂಗ್ರೆಸ್ ಪಕ್ಷದ ಒಕ್ಕಲಿಗ ಶಾಸಕರೂ ಪ್ರತ್ಯೇಕ ಸಭೆ ನಡೆಸಿ, ಜ.23ರೊಳಗೆ ಮೀಸಲಾತಿ ಬೇಡಿಕೆ ಈಡೇರದಿದ್ದರೆ, ಒಕ್ಕಲಿಗ ಸಮುದಾಯ ಬೀದಿಗಿಳಿದು ಹೋರಾಟ ಮಾಡಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಕೇಂದ್ರ ಸರ್ಕಾರ ಒಬಿಸಿ ಪಟ್ಟಿಗೆ ಒಕ್ಕಲಿಗರನ್ನು ಸೇರಿಸಿರುವುದರಿಂದ ಅಧ್ಯಯನ ನಡೆಸುವ ಅವಶ್ಯಕತೆ ಇಲ್ಲ ಎಂದೂ ಹೇಳಿದ್ದಾರೆ.

ಧಮ್ಕಿ ಹಾಕಲ್ಲ: ಸಚಿವ ಅಶೋಕ

‘ಮೀಸಲಾತಿ ಪ್ರಮಾಣ ಹೆಚ್ಚಿಸಬೇಕು ಎಂಬುದು ಒಕ್ಕಲಿಗ ಸಮುದಾಯದ ನ್ಯಾಯಯುತ ಬೇಡಿಕೆ. ಇದನ್ನು ಶಾಂತಿಯುತವಾಗಿ ಈಡೇರಿಸಿಕೊಳ್ಳುತ್ತೇವೆ. ನಾವು ಗಲಾಟೆ ಮಾಡಲ್ಲ, ಧಮ್ಕಿ ಹಾಕುವುದಿಲ್ಲ’ ಎಂದು ಕಂದಾಯ ಸಚಿವ ಆರ್.ಅಶೋಕ ಅವರು ಮುಖ್ಯಮಂತ್ರಿ ಭೇಟಿ ನಂತರ ಸುದ್ದಿಗಾರರಿಗೆ ತಿಳಿಸಿದರು.

‘ಜನಸಂಖ್ಯೆ ಆಧಾರದಲ್ಲಿ ನಾವೂ ರಾಜ್ಯದಲ್ಲಿ ಶೇ 16ರಷ್ಟು ಇದ್ದೇವೆ. ನಮ್ಮಲ್ಲೂ ತುಂಬಾ ಬಡವರು ಇದ್ದಾರೆ. ಒಕ್ಕಲಿಗ ಸಮುದಾಯಕ್ಕೆ ಅಭದ್ರತೆ ಕಾಡಬಾರದು. ಪರಿಹಾರ ಕೊಡುವ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಮುಖ್ಯಮಂತ್ರಿಯವರು ಭರವಸೆ ನೀಡಿದ್ದಾರೆ’ ಎಂದರು. ‘ಜ. 4ರಂದು ಸಮುದಾಯದ ಸ್ವಾಮೀಜಿಗಳನ್ನು ಭೇಟಿ ಮಾಡಿ ಆಗಿರುವ ಎಲ್ಲ ಬೆಳವಣಿಗೆಗಳನ್ನು ಚರ್ಚೆ ಮಾಡುತ್ತೇವೆ’ ಎಂದೂ ಅಶೋಕ ಹೇಳಿದರು.

‘ಮೀಸಲಾತಿ ಅರ್ಥ ಕಳೆದುಕೊಳ್ಳುತ್ತಿದೆ’

ಒಂದನೇ ಪುಟದಿಂದ

‘ಅಂದು ಸಂವಿಧಾನ ಬರೆದ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ರಚನಾ ಸಮಿತಿಗೆ ಒಂದು ದೃಷ್ಟಿಕೋನ ಇತ್ತು. ಭೌಗೋಳಿಕವಾಗಿ ಯಾವ ವರ್ಗಗಳು ಮುಖ್ಯವಾಹಿನಿಗೆ ಬಂದಿರಲಿಲ್ಲವೋ, ಎಲ್ಲಿ ಅಸ್ಪೃಶ್ಯತೆ ಆಚರಣೆಯಲ್ಲಿ ಇತ್ತೋ ಆ ಸಮುದಾಯಗಳಿಗೆ ಮೀಸಲಾತಿ ಕೊಟ್ಟಿದ್ದರು. ಅದನ್ನು ಧಿಕ್ಕರಿಸಿ ಇಂದು ಎಲ್ಲಾ ವರ್ಗದವರೂ ಮೀಸಲಾತಿ ಬೇಕು ಎನ್ನುತ್ತಿ ದ್ದಾರೆ. ಈಗಾಗಲೇ ದೇಶದ ಶೇ 90ರಷ್ಟು ವರ್ಗಗಳು ಮೀಸಲಾತಿ ಅಡಿ ಬಂದಿವೆ’ ಎಂದರು. ‘ಯಾವುದೇ ರಾಜ್ಯದ ಸರ್ಕಾರ ಅಥವಾ ಮುಖ್ಯಮಂತ್ರಿಗೆ ಗೆರೆ ಹಾಕಿ ಮೀಸಲಾತಿ ಸೌಲಭ್ಯ ನೀಡಬೇಕು ಎಂಬುದು ಶೋಭೆ ತರುವುದಿಲ್ಲ. ಮೀಸಲಾತಿ ಯಾವುದಕ್ಕಾಗಿ ನೀಡಲಾಗಿತ್ತು ಎಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕು’ ಎಂದರು.

ಕನ್ನಡಿಗರಿಗೆ ಉದ್ಯೋಗ: ಖಾಸಗಿ ನಿರ್ಣಯ ಅಂಗೀಕಾರ

ಬೆಳಗಾವಿ: ರಾಜ್ಯದಲ್ಲಿನ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಎಲ್ಲ ಇಲಾಖೆಗಳಲ್ಲಿ ಹಾಗೂ ಸರ್ಕಾರೇತರ ಸಂಸ್ಥೆಗಳಲ್ಲಿನ ‘ಸಿ’ ಮತ್ತು ‘ಡಿ’ ದರ್ಜೆ ಹುದ್ದೆಗಳನ್ನು ಕನ್ನಡಿಗರಿಗೆ ಮೀಸಲಿಡಬೇಕೆಂಬ ಖಾಸಗಿ ನಿರ್ಣಯವನ್ನು ವಿಧಾನ ಪರಿಷತ್‌ನಲ್ಲಿ ಅಂಗೀರಿಸಲಾಯಿತು.

ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಮಂಡಿಸಿದ ಖಾಸಗಿ ನಿರ್ಣಯವನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ಇ–ಸ್ವತ್ತು: ದತ್ತಾಂಶ ಸಂಗ್ರಹ ಸಾಮರ್ಥ್ಯ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇ- ಸ್ವತ್ತು ವಹಿವಾಟು ಹೆಚ್ಚಾಗುವುದರಿಂದ ದತ್ತಾಂಶ ಸಂಗ್ರಹ ಸಾಮರ್ಥ್ಯವನ್ನೂ ಹೆಚ್ಚಿಸಲು ₹65 ಕೋಟಿ ವೆಚ್ಚದಲ್ಲಿ ಪ್ರಸ್ತಾವನೆ ಸಿದ್ದಪಡಿಸಿ ಹಣಕಾಸು ಇಲಾಖೆಗೆ ಸಲ್ಲಿಸಲಾಗಿದೆ ಎಂದು ಪೌರಾಡಳಿತ ಸಚಿವ ಎಂ.ಟಿ.ಬಿ.ನಾಗರಾಜ್ ತಿಳಿಸಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಯು.ಟಿ. ಖಾದರ್ ಅವರ ಪ್ರಶ್ನೆಗೆ ಉತ್ತರಿಸಿ, ‘ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇ- ಆಸ್ತಿ ತಂತ್ರಾಂಶದಲ್ಲಿನ ತಾಂತ್ರಿಕ ಸಮಸ್ಯೆಯಿಂದ 2022ರ ನವೆಂಬರ್ 5ರಿಂದ ನ.20ರವರೆಗೆ ಸಮಸ್ಯೆಯಾಗಿತ್ತು. ಬಳಿಕ ಸಮಸ್ಯೆ ಸರಿಪಡಿಸಲಾಗಿದೆ. ಇದೀಗ ದತ್ತಾಂಶ ಸಂಗ್ರಹ ಸಾಮರ್ಥ್ಯ ಹೆಚ್ಚಳಕ್ಕೆ ಕ್ರಮಕೈಗೊಳ್ಳಲಾಗಿದೆ’ ಎಂದರು.

ಈ ಸಮಸ್ಯೆಯ ಪರಿಹಾರಕ್ಕೆ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. 129 ಸ್ಥಳೀಯ ಸಂಸ್ಥೆ ವ್ಯಾಪ್ತಿಯ ಸಮಸ್ಯೆಗೂ ಪರಿಹಾರ ಸಿಗಲಿದೆ. ಇನ್ನು 20–25 ದಿನಗಳೊಳಗೆ ಈ ಸಂಬಂಧ ಆದೇಶ ಹೊರಬೀಳಲಿದೆ ಎಂದು ಸಚಿವ ಎಂ.ಟಿ.ಬಿ.ನಾಗರಾಜ್ ತಿಳಿಸಿದರು.

ಯು.ಟಿ.ಖಾದರ್ ಸಮಸ್ಯೆಯನ್ನು ಪ್ರಸ್ತಾಪಿಸಿ, ರಾಜ್ಯದ ಬಹುತೇಕ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನಿವೇಶನ, ಕಟ್ಟಡಗಳ ಆಸ್ತಿ ಹಕ್ಕಿಗೆ ಸಂಬಂಧಿಸಿದಂತೆ ಇ-ಖಾತಾ ಸರ್ವರ್ ಸ್ತಬ್ಧಗೊಂಡು ಸಮಸ್ಯೆಯಾಗಿದೆ ಎಂದರು.

ಇದಕ್ಕೆ ಧ್ವನಿಗೂಡಿಸಿದ ವಿಧಾನ-ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ‘ಸಚಿವರು ಅಧಿಕಾರಿಗಳ ಬೆನ್ನು ಬೀಳದ ಹೊರತು ಯಾವುದೇ ಕೆಲಸಗಳು ಆಗುವುದಿಲ್ಲ, ಆದೇಶವೂ ಹೊರ ಬೀಳುವುದಿಲ್ಲ. ನೀವು ಹೆಚ್ಚು ಪ್ರಯತ್ನ ಹಾಕಬೇಕು’ ಎಂದು ಹೇಳಿದರು.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್ ಹಾಗೂ ಎಂ.ಟಿ.ಬಿ ನಾಗರಾಜ್ ಮಾತನಾಡಿ ಇಬ್ಬರೂ ಸೇರಿ ಈ ಸಮಸ್ಯೆ ಪರಿಹಾರಕ್ಕೆ ಆದ್ಯತೆ ಮೇಲೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಬ್ರಾಹ್ಮಣ ನಿಗಮಕ್ಕೆ ಅತ್ಯಲ್ಪ ಅನುದಾನ: ಯು.ಬಿ. ವೆಂಕಟೇಶ್

ಬೆಳಗಾವಿ: ‘ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಗೆ ಕಳೆದ ಐದು ವರ್ಷಗಳಲ್ಲಿ ಕೇವಲ ₹31 ಕೋಟಿ ಬಿಡುಗಡೆ ಮಾಡಲಾಗಿದೆ’ ಎಂದು ಕಾಂಗ್ರೆಸ್ ಸದಸ್ಯ ಯು.ಬಿ. ವೆಂಕಟೇಶ್ ಅಸಮಾಧಾನ ವ್ಯಕ್ತಪಡಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ‘ಯಡಿಯೂರಪ್ಪ ಅವರು ಮುಖ್ಯಮಂ-ತ್ರಿಯಾಗಿದ್ದ ಸಂದರ್ಭದಲ್ಲಿ ಬಜೆಟ್‌ನಲ್ಲಿ ನಿಗಮಕ್ಕೆ ₹50 ಕೋಟಿ ನಿಗದಿಪಡಿ-ಸಿದ್ದರು. ಆದರೆ, ನಿರೀಕ್ಷಿಸಿದಷ್ಟು ಹಣ ಬಿಡುಗಡೆಯಾಗಿಲ್ಲ. 2020ರಲ್ಲಿ ಒಂದು ಪೈಸೆ ಬಿಡುಗಡೆ ಮಾಡಿಲ್ಲ. 2021ರಲ್ಲಿ ₹3ಕೋಟಿ ಬಿಡುಗಡೆ ಮಾಡಲಾಗಿದೆ‘ ಎಂದು ದೂರಿದರು.

‘ನಿಗಮದಿಂದ ಇಡೀ ರಾಜ್ಯದಲ್ಲಿ 36 ಹಸುಗಳನ್ನು ವಿತರಿಸಲಾಗಿದೆ. ಈ ರೀತಿಯಾದರೆ ಬ್ರಾಹ್ಮಣರ ಅಭಿವೃದ್ಧಿ ಸಾಧ್ಯವೇ? ನಾಮಕಾವಸ್ತೆ ಮಂಡಳಿ ಸ್ಥಾಪಿಸಲಾಗಿದೆ. ಸರ್ಕಾರ ನೀಡುತ್ತಿರುವ ಅನುದಾನ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಮಾತ್ರ ಸಾಕಾಗುತ್ತಿದೆ. ಹೆಚ್ಚಿನ ಅನುದಾನ ನೀಡಿದರೆ ನಿಮಗೆ ಬ್ರಾಹ್ಮಣರು ಆಶೀರ್ವಾದ ಮಾಡುತ್ತಾರೆ’ ಎಂದು ಧಾರ್ಮಿಕ ದತ್ತಿ, ಹಜ್ ಹಾಗೂ ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ ಅವರಿಗೆ ತಿಳಿಸಿದರು.

ಮುಖ್ಯಮಂತ್ರಿ ಜತೆ ಚರ್ಚಿಸಿ ಹೆಚ್ಚಿನ ಅನುದಾನ ನೀಡಲಾಗುವುದು ಎಂದು ಶಶಿಕಲಾ ಜೊಲ್ಲೆ ಅವರು ಭರವಸೆ ನೀಡಿದರು.

‘ಹಳೇ ವಾಹನಗಳನ್ನು ಗುಜರಿಗೆ ಹಾಕಲು ಕ್ರಮ’

ಬೆಳಗಾವಿ: ಸರ್ಕಾರಿ ಕಚೇರಿಗಳ ಮುಂದೆ 10 ವರ್ಷಕ್ಕೂ ಹೆಚ್ಚು ಅವಧಿಯಿಂದ ನಿಂತಿರುವ ವಾಹನಗಳು ತುಕ್ಕು ಹಿಡಿಯುತ್ತಿದ್ದು, ಅವುಗಳನ್ನು ವಿಲೇವಾರಿ ಮಾಡಿ ಅಥವಾ ಗುಜರಿಗೆ ಹಾಕಿ ಎಂದು ಬಿಜೆಪಿಯ ಹರ್ಷವರ್ಧನ್ ಅವರು ಒತ್ತಾಯಿಸಿದರು.

ವಿಧಾನಸಭೆಯಲ್ಲಿ ಶೂನ್ಯವೇಳೆಯಲ್ಲಿ ಮಾತನಾಡಿದ ಅವರು, ‘3 –4 ಲಕ್ಷ ಕಿ.ಮೀ ಓಡಿದ ವಾಹನಗಳನ್ನೂ ರಿಪೇರಿ ಮಾಡಿ ಓಡಿಸುತ್ತಿದಾರೆ. ಇವುಗಳಿಂದ ಅಪಘಾತವೂ ಆಗಬಹುದು’ ಎಂದು ಆತಂಕ ವ್ಯಕ್ತಪಡಿಸಿದರು.

ಇದಕ್ಕೆ ಧ್ವನಿಗೂಡಿಸಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ‘ಸರ್ಕಾರಿ ಕಚೇರಿಗಳು, ಶಾಸಕರ ಭವನ ಸೇರಿ ಬಹುತೇಕ ಎಲ್ಲ ಜಿಲ್ಲೆಗಳಲ್ಲೂ ಸರ್ಕಾರಿ ವಾಹನಗಳು ನಿಂತಿವೆ. ಇವು ತುಕ್ಕು ಹಿಡಿದಿವೆ. ಇದಕ್ಕೆ ಮುಕ್ತಿ ಕಾಣಿಸಬೇಕು’ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಜೆ.ಸಿ.ಮಾಧುಸ್ವಾಮಿ, ‘ಸ್ಕ್ರ್ಯಾಪ್‌ಗೆ ಹಾಕಲು ವ್ಯವಸ್ಥೆ ಮಾಡಲಾಗುವುದು. ಆದರೆ, ಪೊಲೀಸ್ ಠಾಣೆ ಬಳಿ ಇರುವ ವಾಹನಗಳನ್ನು ಹರಾಜು ಹಾಕಲು ಸಾಧ್ಯವಿಲ್ಲ. ಇದಕ್ಕೆ ನ್ಯಾಯಾಲಯದ ಒಪ್ಪಿಗೆ ಬೇಕು. ನಿಂತಲ್ಲೇ ಕೆಲವರು ಬಿಡಿ ಭಾಗಗಳನ್ನು ಬಿಚ್ಚಿಕೊಂಡು ಹೋಗುತ್ತಾರೆ’ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

‘ಪ್ರತಿಭಟನೆಗೆ 3 ಲಕ್ಷ ಜನ’

ಮೈಸೂರು: ‘ಕುರುಬ ಸಮಾಜವನ್ನು ಪ್ರವರ್ಗ ‘2ಎ’ಯಿಂದ ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಒತ್ತಾಯಿಸಿ ಬೆಳಗಾವಿಯ ಸುವರ್ಣ ವಿಧಾನಸೌಧದ ಬಳಿಯ ಕೊಂಡಸ್‌ಕೊಪ್ಪದಲ್ಲಿ ಇದೇ 27ರಂದು ನಡೆಸಲಿರುವ ಪ್ರತಿಭಟ-ನೆಯಲ್ಲಿ 3 ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಲಿದ್ದಾರೆ’ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ. ಸುಬ್ರಹ್ಮಣ್ಯ ತಿಳಿಸಿದರು.

‘ರಾಜ್ಯ ಸರ್ಕಾರವು, ಕುಲಶಾಸ್ತ್ರೀಯ ಅಧ್ಯಯನ ವರದಿಯನ್ನು ಪರಿಶಿಷ್ಟ ಮತ್ತು ಬುಡಕಟ್ಟು ಇಲಾಖೆಯ ನಿರ್ದೇಶಕರಿಂದ ಪಡೆದು, ಸಚಿವ ಸಂಪುಟದಲ್ಲಿ ಅನುಮೋದನೆ ನೀಡಿ ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎನ್ನುವುದು ನಮ್ಮ ಆಗ್ರಹವಾಗಿದ’ ಎಂದರು.



ಕರಾಟೆ ಬೆಳಗಾವಿಯ ಸುವರ್ಣ ಸೌಧದ ಎದುರು ಸಮಾಜ ಕಲ್ಯಾಣ ಇಲಾಖೆ ಆಯೋಜಿಸಿದ್ದ ಓಬವ್ವ ಆತ್ಮರಕ್ಷಣಾ ಕಲೆ ಕರಾಟೆ ಪ್ರದರ್ಶನವನ್ನು ‘ಕ್ರೈಸ್’ ವಸತಿ ಶಾಲೆಯ ವಿದ್ಯಾರ್ಥಿನಿಯರು ಪ್ರದರ್ಶಿಸಿದರು.

ಮಾನವ-ವನ್ಯಜೀವಿ ಸಂಘರ್ಷ ● ನಿರ್ಧಾರ ಕೈಗೊಳ್ಳುವುದು ಕಷ್ಟವಾಗುತ್ತಿದೆ: ಅಧಿಕಾರಿಗಳು

ವನ್ಯಜೀವಿ ವಿಭಾಗಕ್ಕೆ ಪೂರ್ಣ ಪ್ರಮಾಣದ ಮುಖ್ಯಸ್ಥರಿಲ್ಲ

● ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಒಂದೆಡೆ ಮಾನವ-ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಿದ್ದರೆ, ಇನ್ನೊಂದೆಡೆ ವನ್ಯಜೀವಿ ಸಂರಕ್ಷಣೆಯಲ್ಲಿ ಅತ್ಯುನ್ನತ ಹುದ್ದೆಯಾಗಿರುವ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಹಾಗೂ ಮುಖ್ಯ ವನ್ಯಜೀವಿ ಪರಿಪಾಲಕರ (ಪಿಸಿಸಿಎಫ್) ಹುದ್ದೆ ಪ್ರಭಾರ ಉಸ್ತುವಾರಿಯಲ್ಲಿದೆ.

ಪಿಸಿಸಿಎಫ್ ಆಗಿದ್ದ ವಿಜಯ ಕುಮಾರ್ ಗೋಗಿ ಅವರು ನ.30ರಂದು ನಿವೃತ್ತಿಯಾಗಿದ್ದು, ಆ ಸಂದರ್ಭದಲ್ಲಿ ಅಭಿವೃದ್ಧಿ ವಿಭಾಗದ ಪಿಸಿಸಿಎಫ್ ಅವರಿಗೆ ಈ ಹುದ್ದೆಯನ್ನೂ ಹೆಚ್ಚುವರಿಯಾಗಿ ವಹಿಸಲಾಗಿದೆ.

ಕಾಡಾನೆ, ಚಿರತೆ, ಕರಡಿ, ಹುಲಿ ಸೇರಿ ವನ್ಯಜೀವಿಗಳ ಸಂಘರ್ಷದ ಘಟನೆಗಳು ನಿತ್ಯವೂ ವರದಿಯಾ-ಗುತ್ತಿದ್ದು, ಈ ಸಂದರ್ಭದಲ್ಲಿ ವನ್ಯಜೀವಿ ವಿಭಾಗಕ್ಕೆ ಪೂರ್ಣ ಪ್ರಮಾಣದ ಮುಖ್ಯಸ್ಥರು ಇಲ್ಲದಿದ್ದರೆ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳುವುದು ಕಷ್ಟ ಎಂದು ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ಹೇಳುತ್ತಾರೆ.

ಉಮೇಶ್ ಕತ್ತಿ ನಿಧನದ ಬಳಿಕ ಅರಣ್ಯ ಖಾತೆ ಮುಖ್ಯಮಂತ್ರಿ ಅವರ ಬಳಿಯೇ ಉಳಿದುಕೊಂಡಿದೆ. ಇನ್ನೊಂದೆಡೆ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ಆನೆ ಯೋಜನೆ) ಹುದ್ದೆಯನ್ನೂ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ.

ಹಲವು ಜಿಲ್ಲೆಗಳಲ್ಲಿ ವನ್ಯಜೀವಿಗಳಿಂದ ಬೆಳೆಹಾನಿ ಪ್ರಕರಣಗಳು ವರದಿಯಾಗುತ್ತಲೇ ಇವೆ. ಗುರುವಾರ ಉತ್ತರ ಕನ್ನಡ ಜಿಲ್ಲೆಯ ಜಗಲಪೇಟ್ ಬಳಿ ಚಿರತೆಯ ಶವ ಅನುಮಾನಾಸ್ಪದ ರೀತಿಯಲ್ಲಿ ಸಿಕ್ಕಿದ್ದರೆ, ಹಿಂದಿನ ವಾರ ಇದೇ ಜಿಲ್ಲೆಯ ಬರ್ಚಿ ಬಳಿ ಹುಲಿಯ ಶವ ದೊರೆತಿತ್ತು. ಹುಲಿಯ ಕಾಲು ಹಾಗೂ ತಲೆಯ ಭಾಗಗಳನ್ನು ದುಷ್ಕರ್ಮಿಗಳು ಕದ್ದೊಯ್ದಿರುವ ಪ್ರಕರಣ ವರದಿಯಾಗಿದೆ. ಕೆಲವೇ ದಿನಗಳ ಹಿಂದೆ ಬಿಳಿಗಿರಿ ರಂಗನಾಥಸ್ವಾಮಿ ದೇವಾಲಯ(ಬಿಆರ್‌ಟಿ) ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ಹುಲಿಯೊಂದು ಮೃತಪಟ್ಟಿತ್ತು.

ಎರಡು ವಾರಗಳ ಹಿಂದಷ್ಟೇ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ಅಪಘಾತದಲ್ಲಿ ಆನೆಯೊಂದು ಮೃತಪಟ್ಟಿದೆ. ಕಾಂಗ್ರೆಸ್ ಮುಖಂಡ ಎಸ್.ಎಸ್. ಮಲ್ಲಿಕಾರ್ಜುನ ಅವರ ತೋಟದ ಮನೆಯಲ್ಲಿ ವನ್ಯಜೀವಿಗಳು ಪತ್ತೆಯಾದರೆ, ಹಾಸನದಲ್ಲಿ ವನ್ಯಜೀವಿ ಅಂಗಾಂಗಗಳನ್ನು ಮಾರುತ್ತಿದ್ದವರನ್ನು ಪೊಲೀಸರು ಬಂಧಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯಲ್ಲಿ ಚಿರತೆಯೊಂದು ಉರುಳಿಗೆ ಸಿಲುಕಿ ಎರಡು ವಾರಗಳ ಹಿಂದೆ ಮೃತಪಟ್ಟಿದೆ. ಬೆಂಗಳೂರು ಸುತ್ತಮುತ್ತ ಚಿರತೆ ಹಾವಳಿ ಹೆಚ್ಚಾಗಿದೆ. ವನ್ಯಜೀವಿ ಮತ್ತು ಮಾನವ ನಡುವಿನ ಸಂಘರ್ಷ ತಾರಕದಲ್ಲಿರುವ ಸಂದರ್ಭದಲ್ಲಿ ವನ್ಯಜೀವಿ ವಿಭಾಗಕ್ಕೆ ಪೂರ್ಣ ಪ್ರಮಾಣದ ಮುಖ್ಯಸ್ಥರೇ ಇಲ್ಲದಿದ್ದರೆ, ನಿಭಾಯಿಸುವುದು ಕಷ್ಟ ಎಂದು ಹೆಸರು ಬಹಿರಂಗಪಡಿಸಲು ಇಚ್ಚಿಸದ ಇಲಾಖೆ ಹಿರಿಯ ಅಧಿಕಾರಿ-ಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಈ ಬಗ್ಗೆ ಪ್ರತಿಕ್ರಿಯೆಗೆ ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೆದ್ ಅಖ್ತರ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಅವರು ಸಂಪರ್ಕಕ್ಕೆ ಬರಲಿಲ್ಲ.

ಹಾಸನ ವೃತ್ತವೂ ಪ್ರಭಾರ

ಅತಿ ಹೆಚ್ಚು ಕಾಡಾನೆ ಹಾವಳಿ ಇರುವ ಹಾಸನ ಜಿಲ್ಲೆಗೆ ಪೂರ್ಣ ಪ್ರಮಾಣದ ಅರಣ್ಯ ಸಂರಕ್ಷಣಾಧಿಕಾರಿಗಳೇ ಇಲ್ಲ.

ಹಾಸನ ವೃತ್ತವು ತುಮಕೂರು ವಿಭಾಗವನ್ನೂ ಒಳಗೊಂಡಿದ್ದು, ಅಲ್ಲಿ ಚಿರತೆ, ಕರಡಿ ಹಾವಳಿ ಮಿತಿಮೀರಿದೆ.

ಚಿಕ್ಕಮಗಳೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿಯೇ ಹಾಸನ ವೃತ್ತವನ್ನು ಹೆಚ್ಚುವರಿಯಾಗಿ ನಿಭಾಯಿಸುತ್ತಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆಯಲ್ಲಿ ಕಾಡಾನೆ ಹಾವಳಿ ವಿಪರೀತವಾಗಿದ್ದು, ಶಾಸಕರ ವಿರುದ್ಧವೇ ಜನ ಆಕ್ರೋಶ ವ್ಯಕ್ತಪಡಿಸಿದ್ದರು.

ಮೈಸೂರು ವಿವಿ ಕುಲಪತಿ: ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ವಿಶ್ವವಿದ್ಯಾ-ಲಯ ಕುಲಪತಿಯ ನೇಮಕಾತಿ ಪ್ರಕ್ರಿಯೆಗಳಿಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಮೈಸೂರು ವಿಶ್ವವಿದ್ಯಾಲ-ಯದ ಪ್ರಭಾರಿ ಕುಲಪತಿ ಪ್ರೊ.ಎಚ್. ರಾಜಶೇಖರ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲೆ ಅಕ್ಕಮಹಾದೇವಿ ಹಿರೇಮಠ ಅವರು, ‘ರಾಜಶೇಖರ್ ಪ್ರಸ್ತುತ ಪ್ರಭಾರ ಕುಲಪತಿಯಾಗಿದ್ದು ಈ ಹುದ್ದೆಗೆ ಅಗತ್ಯವಾದ ಎಲ್ಲ ಅರ್ಹತೆಗಳನ್ನೂ ಹೊಂದಿದ್ದಾರೆ. ಅವರ ವಿರುದ್ಧ ಯಾವುದೇ ವಿಚಾರಣೆ ನಡೆದಿಲ್ಲ ಅಥವಾ ಬಾಕಿ ಇಲ್ಲ.

ಕುಲಪತಿ ನೇಮಕಕ್ಕೆ ರಚಿಸಲಾಗಿದ್ದ ಶೋಧನಾ ಸಮಿತಿಗೆ ಅವರು ಅರ್ಜಿ ಸಲ್ಲಿಸಿದ್ದರು. ಆದರೆ, ಸಮಿತಿಯು ಅರ್ಜಿದಾರರ ಹೆಸರನ್ನು ಪರಿಗಣಿಸದೆ ಇತರೆ ಮೂವರ ಹೆಸರುಗಳನ್ನು ಸರ್ಕಾರಕ್ಕೆ ಶಿಫಾರಸು ಮಾಡಿದೆ. ಆದ್ದರಿಂದ, ಕುಲಪತಿ ನೇಮಕಾತಿ ಪ್ರಕ್ರಿಯೆಗೆ ತಡೆ ನೀಡಬೇಕು’ ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ನೇಮಕಾತಿ ಪ್ರಕ್ರಿಯೆಗೆ ಮಧ್ಯಂತರ ತಡೆ ನೀಡಿದ್ದು, ಪ್ರತಿವಾದಿಗಳಾದ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಮೈಸೂರು ವಿ.ವಿ ರಿಜಿಸ್ಟ್ರಾರ್ ಹಾಗೂ ಶೋಧನಾ ಸಮಿತಿಯ ಅಧ್ಯಕ್ಷರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

ಕೋವಿಡ್ ಮುನ್ನೆಚ್ಚರಿಕೆ ವಹಿಸಲು ರಾಜ್ಯಗಳಿಗೆ ಕೇಂದ್ರ ಸರ್ಕಾರದ ನಿರ್ದೇಶನ

ಹಬ್ಬದ ಋತು: ಮಾಸ್ಕ್ ಧರಿಸಲು ಸೂಚನೆ

ನವದೆಹಲಿ: ಕೋವಿಡ್ ಪ್ರಕರಣಗಳು ವರದಿಯಾಗುತ್ತಿರುವ ಕಾರಣ, ಹಬ್ಬದ ಋತುವಿನ ಹಿನ್ನೆಲೆಯಲ್ಲಿ ಜನಸಂದಣಿ ತಪ್ಪಿಸಬೇಕು, ಒಳಾಂಗಣದ ಕಾರ್ಯಕ್ರಮಗಳು ಹಾಗೂ ಜನನಿಬಿಡ ಸ್ಥಳಗಳಲ್ಲಿ ಮಾಸ್ಕ್ ಧರಿಸಬೇಕು, ಸಾರ್ವಜನಿಕ ಸಭೆ, ಸಮಾರಂಭ ನಡೆಯುವ ಸ್ಥಳಗಳಲ್ಲಿ ಸಾಕಷ್ಟು ಗಾಳಿಯಾಡುವಂತೆ ಖಚಿತಪಡಿಸಿಕೊಳ್ಳುವಂತೆ ಕೇಂದ್ರ ಸರ್ಕಾರವು ಶುಕ್ರವಾರ ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿದೆ.

ಈ ಸಂಬಂಧ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿರುವ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು, ಜಿಲ್ಲಾವಾರು 'ಇನ್‌ಫ್ಲುಯೆಂಜಾ ರೀತಿಯ ಅನಾರೋಗ್ಯ ಮತ್ತು ತೀವ್ರತರ ಉಸಿರಾಟದ ಪ್ರಕರಣಗಳ ನಿಯಮಿತ ಮೇಲ್ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಸೂಚಿಸಿದ್ದಾರೆ.

ಈ ಪ್ರಕರಣಗಳನ್ನು ಕೋವಿಡ್–19 ಪರೀಕ್ಷೆಗೆ ಸಹ ಪರಿಗಣಿಸಬೇಕು ಎಂದೂ ಭೂಷಣ್ ಹೇಳಿದ್ದಾರೆ.

'ಹಬ್ಬಗಳು ಮತ್ತು ಹೊಸ ವರ್ಷದ ಆಚರಣೆಗಳನ್ನು ಪರಿಗಣಿಸಿ, ಪರೀಕ್ಷೆ, ಪತ್ತೆ, ಚಿಕಿತ್ಸೆ–ಲಸಿಕೆ ಅನುಸರಣೆಯ ಮೇಲೆ ಗಮನ ಹರಿಸಬೇಕು. ಕೋವಿಡ್ ಹರಡುವಿಕೆಯ ಅಪಾಯವನ್ನು ಕಡಿಮೆ ಮಾಡಲು ಅಗತ್ಯವಾದ ಸಾರ್ವಜನಿಕ ಆರೋಗ್ಯ ಕ್ರಮಗಳನ್ನು ಮತ್ತು ಇತರ ವ್ಯವಸ್ಥೆಗಳನ್ನು ಅನುಸರಿಸಬೇಕು. ಈ ನಿಟ್ಟಿನಲ್ಲಿ ಮಾಸ್ಕ್ ಬಳಕೆ, ಕೈ ತೊಳೆಯುವಿಕೆ, ನೈರ್ಮಲ್ಯ ಮತ್ತು ದೈಹಿಕ ಅಂತರವನ್ನು ಕಾಪಾಡುವುದು ಅಗತ್ಯವಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಎಲ್ಲ ಜಿಲ್ಲೆಗಳಲ್ಲೂ ಸಾಕಷ್ಟು ಪರೀಕ್ಷೆಗಳನ್ನು ಮಾಡಬೇಕು. ಆರ್‌ಟಿ-ಪಿಸಿಆರ್, ಆ್ಯಂಟಿಜೆನ್ ಪರೀಕ್ಷೆಗಳನ್ನು ನಡೆಸಬೇಕು' ಎಂದು ಸೂಚಿಸಿದ್ದಾರೆ.

'ಭಾರತದಲ್ಲಿ ಕೆಲವು ತಿಂಗಳುಗಳಿಂದ ನಿರಂತರವಾಗಿ ಕೋವಿಡ್ ಪ್ರಕರಣಗಳು ಇಳಿಕೆಯಾಗುತ್ತಿವೆ. ಪ್ರಸ್ತುತ ದೇಶದಾದ್ಯಂತ ಪ್ರತಿದಿನ 153 ಹೊಸ ಪ್ರಕರಣಗಳು ವರದಿಯಾಗುತ್ತಿವೆ' ಎಂದೂ ಭೂಷಣ್ ತಿಳಿಸಿದ್ದಾರೆ.

ಈ ಮಧ್ಯೆ ಆರೋಗ್ಯ ಸಚಿವಾಲಯವು, ಚೀನಾ ಮತ್ತು ಇತರ ದೇಶಗಳಿಂದ ಹೆಚ್ಚಿನ ಕೋವಿಡ್ ಪ್ರಕರಣಗಳು ವರದಿಯಾಗುತ್ತಿರುವ ಕಾರಣ, ಅಲ್ಲಿಂದ ಬರುವ ಪ್ರಯಾಣಿಕರಿಗೆ ಪ್ರಯಾಣದ 72 ಗಂಟೆಗಳಿಗೂ ಮೊದಲು ನಡೆಸಿದ ಆರ್‌ಟಿ-ಪಿಸಿಆರ್ ಪರೀಕ್ಷೆಯ ವರದಿ ಅಥವಾ ಸಂಪೂರ್ಣ ಕೋವಿಡ್ ವ್ಯಾಕ್ಸಿನ್ ದೃಢೀಕರಣ ಪತ್ರ ಒದಗಿಸುವಂತೆ ಕೋರಲು ಚಿಂತನೆ ನಡೆಸುತ್ತಿದೆ. ಆದರೆ, ಜಾಗತಿಕ ಪರಿಸ್ಥಿತಿಯನ್ನು ಅವಲೋಕಿಸಿ, ಈ ಸಂಬಂಧ ಮುಂದಿನ ವಾರ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ ಎನ್ನಲಾಗಿದೆ.

ಮೂಗಿನ ಮೂಲಕ ಹಾಕುವ ಲಸಿಕೆಗೆ ಅನುಮೋದನೆ

ನವದೆಹಲಿ (ಪಿಟಿಐ): ಭಾರತ್ ಬಯೋಟೆಕ್‌ನ ಉತ್ಪಾದನೆಯಾದ, ಮೂಗಿನ ಮೂಲಕ ಹಾಕುವ ಕೋವಿಡ್ ಲಸಿಕೆಯನ್ನು 18 ವರ್ಷ ಮೇಲ್ಪಟ್ಟವರಿಗೆ ಬೂಸ್ಟರ್ ಡೋಸ್ ಆಗಿ ನೀಡುವುದಕ್ಕೆ ಕೇಂದ್ರ ಆರೋಗ್ಯ ಸಚಿವಾಲಯ ಶುಕ್ರವಾರ ಅನುಮೋದನೆ ನೀಡಿದೆ.

ಈ ಲಸಿಕೆಯನ್ನು, ಮುನ್ನೆಚ್ಚರಿಕೆ 3ನೇ ಡೋಸ್ ಆಗಿ ನೀಡುವಂತೆ ಸೂಚಿಸಿದೆ. ರಾಷ್ಟ್ರೀಯ ಲಸಿಕೆ ಕಾರ್ಯಕ್ರಮದ ಮೂಲಕ ಶೀಘ್ರವೇ ಈ ಲಸಿಕೆ ಲಭ್ಯವಾಗುವಂತೆ ಮಾಡಲಾಗುತ್ತದೆ ಎಂದು ಮೂಲಗಳು ಹೇಳಿವೆ. ಈ ಲಸಿಕೆ ಸದ್ಯ ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯ ಇದೆ. ಚೀನಾ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಚಿವಾಲಯವು, ಮೂಗಿನ ಮೂಲಕ ಹಾಕುವ ಲಸಿಕೆಗೆ ಅನುಮೋದನೆ ನೀಡಿದೆ.

18 ವರ್ಷ ಹಾಗೂ ಮೇಲ್ಪಟ್ಟ ವಯೋಮಾನದವರಿಗೆ ತುರ್ತು ಸಂದರ್ಭದಲ್ಲಿ ನಿರ್ಬಂಧಿತ ಬಳಕೆಗಾಗಿ ಈ ಲಸಿಕೆಗೆ ಭಾರತೀಯ ಔಷಧ ಮಹಾನಿಯಂತ್ರಕರು (ಡಿಸಿಜಿಐ) ಕಳೆದ ನವೆಂಬರ್‌ನಲ್ಲಿ ಅನುಮೋದನೆ ನೀಡಿದ್ದರು.

'ಎಕ್ಸ್‌ಬಿಬಿ, ಬಿಎಫ್‌.7: ಸಂಖ್ಯೆ ಹೆಚ್ಚಳ ಸಾಧ್ಯತೆ ಕಡಿಮೆ'



ನವದೆಹಲಿ (ಪಿಟಿಐ): 'ಭಾರತದಲ್ಲಿ ಒಮಿಕ್ರಾನ್ ಉಪತಳಿಗಳಾದ ಎಕ್ಸ್‌ಬಿಬಿ ಹಾಗೂ ಬಿಎಫ್‌.7 ಸೋಂಕಿನ ಕೆಲ ಪ್ರಕರಣಗಳು ವರದಿಯಾಗಿವೆ. ಆದರೆ, ಈ ಉಪತಳಿಗಳಿಂದಾಗಿ ಪ್ರಕರಣಗಳ ಸಂಖ್ಯೆಯಲ್ಲಿ ಭಾರಿ ಹೆಚ್ಚಳ ಕಂಡುಬರುವ ಸಾಧ್ಯತೆ ಕಡಿಮೆ' ಎಂದು ಖ್ಯಾತ ವೈರಾಣುತಜ್ಞೆ ಗಗನದೀಪ್ ಕಾಂಗ್ ಶುಕ್ರವಾರ ಹೇಳಿದ್ದಾರೆ.

ಚೀನಾ ಹಾಗೂ ಇತರ ಕೆಲ ದೇಶಗಳಲ್ಲಿ ಒಮಿಕ್ರಾನ್‌ನ ಉಪತಳಿ ಬಿಎಫ್‌.7 ಸೋಂಕಿನ ಪ್ರಕರಣಗಳ ಸಂಖ್ಯೆಯಲ್ಲಿ ಭಾರಿ ಏರಿಕೆ ಕಂಡುಬರುತ್ತಿರುವ ಹಿನ್ನೆಲೆಯಲ್ಲಿ, ಕಾಂಗ್ ಅವರು ಈ ಹೇಳಿಕೆ ನೀಡಿದ್ದಾರೆ.

'ಎಕ್ಸ್‌ಬಿಬಿ, ಬಿಎಫ್‌.7 ಕೂಡ ಒಮಿಕ್ರಾನ್‌ನ ಇತರ ಉಪತಳಿಗಳಂತೆ ವರ್ತಿಸುತ್ತವೆ. ವ್ಯಕ್ತಿಯಲ್ಲಿರುವ ರೋಗನಿರೋಧಕ ಶಕ್ತಿಯಿಂದ ಪಾರಾಗಿ, ಸೋಂಕು ಹರಡುವ ಶಕ್ತಿ ಹೊಂದಿವೆ. ಆದರೆ, ಇವು ಜೀವಕ್ಕೆ ಕುತ್ತು ತರುವಷ್ಟು ತೀವ್ರಸ್ವರೂಪದಲ್ಲಿ ಸೋಂಕು ಉಂಟು ಮಾಡುವುದಿಲ್ಲ' ಎಂದು ಟ್ವೀಟ್ ಮಾಡಿದ್ದಾರೆ. ಅವರು ವೆಲ್ಲೂರಿನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿನ ಉದರ ಮತ್ತು ಕರುಳು ವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕಿಯಾಗಿದ್ದಾರೆ.

'ಸದ್ಯ ಭಾರತದಲ್ಲಿ ಆತಂಕ ಪಡುವ ಪರಿಸ್ಥಿತಿ ಇಲ್ಲ. ಆದರೆ, ಈ ವೈರಸ್‌ನ ವರ್ತನೆಯಲ್ಲಿ ಏನಾದರೂ ಬದಲಾವಣೆ ಆಗುತ್ತಿರುವ ಕುರಿತು ಸಿಗುವ ಸೂಚನೆಗಳ ಮೇಲೆ ನಿಗಾ ಇಡುವುದು ಮುಖ್ಯ' ಎಂದೂ ಹೇಳಿದ್ದಾರೆ.

'ಬಿಎಫ್‌.7 ಉಪತಳಿ : ಭಾರತ ಆತಂಕ ಪಡಬೇಕಿಲ್ಲ'

ಹೈದರಾಬಾದ್ (ಪಿಟಿಐ): ಕೊರೊನಾ ವೈರಸ್‌ನ ರೂಪಾಂತರಿ ಬಿಎಫ್‌.7, ಒಮಿಕ್ರಾನ್‌ನ ಉಪತಳಿಯಾಗಿದೆ. ಹಾಗಾಗಿ, ಈ ಉಪತಳಿಯ ಸೋಂಕಿನ ತೀವ್ರತೆ ಬಗ್ಗೆ ಭಾರತ ಆತಂಕ ಪಡುವ ಅಗತ್ಯ ಇಲ್ಲ ಎಂದು ಹಿರಿಯ ವಿಜ್ಞಾನಿ ರಾಕೇಶ್ ಮಿಶ್ರಾ ಶುಕ್ರವಾರ ಹೇಳಿದ್ದಾರೆ.

ಬೆಂಗಳೂರಿನಲ್ಲಿರುವ ಟಾಟಾ 'ಇನ್‌ಸ್ಟಿಟ್ಯೂಟ್ ಫಾರ್ ಜಿನೆಟಿಕ್ಸ್ ಅಂಡ್ ಸೊಸೈಟಿ (ಟಿಐಜಿಎಸ್) ನಿರ್ದೇಶಕರಾಗಿರುವ ಮಿಶ್ರಾ ಅವರು ಪಿಟಿಐ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಈ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

'ಭಾರತವು ಕೊರೊನಾ ವೈರಸ್ ಸೋಂಕಿನ ವಿವಿಧ ಅಲೆ ಎದುರಿಸಿದೆ. ಚೀನಾ ಇಂಥ ಅಲೆಗಳನ್ನು ಎದುರಿಸಿಲ್ಲ. ಇದೇ ಕಾರಣಕ್ಕೆ ಈಗ ಆ ದೇಶದಲ್ಲಿ ಕೋವಿಡ್–19ನ ಪ್ರಕರಣಗಳು ಹೆಚ್ಚುತ್ತಿವೆ' ಎಂದಿದ್ದಾರೆ.

'ಬಿಎಫ್‌.7 ಎಂಬುದು ಒಮಿಕ್ರಾನ್‌ನ ಉಪತಳಿ. ಹಾಗಾಗಿ, ಕೆಲ ಸಣ್ಣ ಬದಲಾವಣೆಗಳ ಹೊರತಾಗಿ, ಈ ವೈರಸ್‌ಗೂ ಒಮಿಕ್ರಾನ್‌ಗೂ ಅಂಥ ವ್ಯತ್ಯಾಸ ಇಲ್ಲ. ಒಮಿಕ್ರಾನ್‌ನಿಂದಾಗಿ ಕಂಡುಬಂದ ಅಲೆಯನ್ನು ಭಾರತ ಈಗಾಗಲೇ ಎದುರಿಸಿರುವ ಕಾರಣ, ಈ ಉಪತಳಿ ಕುರಿತು ಚಿಂತಿಸಬೇಕಾಗಿಲ್ಲ' ಎಂದರು

'ಚೀನಾ ಪ್ರಜೆಗಳು ನೈಸರ್ಗಿಕವಾಗಿ ಕಂಡುಬರುವ ಸೋಂಕಿಗೆ ಒಳಗಾಗಿಲ್ಲ. ಹಿರಿಯ ನಾಗರಿಕರಿಗೆ ಲಸಿಕೆ ನೀಡಿಲ್ಲ ಎಂದಿದ್ದಾರೆ.

ಗಡಿ: ಮುಂದಿನ ವಾರ ನಿರ್ಣಯ



ನಾಗ್ಪುರ: 'ಕರ್ನಾಟಕದೊಂದಿಗಿನ ಗಡಿ ಸಮಸ್ಯೆ ಕುರಿತಂತೆ ಮಹಾರಾಷ್ಟ್ರ ಸರ್ಕಾರವು ಮುಂದಿನ ವಾರ ನಿರ್ಣಯವೊಂದನ್ನು ಅಂಗೀಕರಿಸಲಿದ್ದು, ಅದು ಕರ್ನಾಟಕ ಸರ್ಕಾರದ ನಿರ್ಣಯಕ್ಕಿಂತಲೂ 10 ಪಟ್ಟು ಹೆಚ್ಚು ಪರಿಣಾಮಕಾರಿಯಾಗಿರಲಿದೆ' ಎಂದು ಮಹಾರಾಷ್ಟ್ರದ ಗಡಿ ಉಸ್ತುವಾರಿ ಸಚಿವ ಹಾಗೂ ಅಬಕಾರಿ ಸಚಿವ ಶಂಭುರಾಜ್ ದೇಸಾಯಿ ಶುಕ್ರವಾರ ಹೇಳಿದ್ದಾರೆ.

ಇಲ್ಲಿನ ಶಾಸಕರ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸೋಮವಾರ ರಾಜ್ಯ ವಿಧಾನಮಂಡಲದಲ್ಲಿ ವಿವರವಾದ ನಿರ್ಣಯ ಅಂಗೀಕರಿಸಲಾಗುವುದು. ಮಹಾರಾಷ್ಟ್ರ ಮತ್ತು ಕರ್ನಾಟಕದ ಮುಖ್ಯಮಂತ್ರಿಗಳು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಚರ್ಚೆ ನಡೆಸಿದ ಬಳಿಕವೂ, ಕರ್ನಾಟಕದ ಮುಖ್ಯಮಂತ್ರಿ ಅವರು ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಗೌರವಿಸಿಲ್ಲ ಎಂಬುದನ್ನು ಹೇಳಲು ಬಯಸುತ್ತೇನೆ' ಎಂದು ತಿಳಿಸಿದ್ದಾರೆ.

'ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ ಮತ್ತು ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಮಾತುಕತೆಯ ಮೂಲಕ ಸಮಸ್ಯೆಯನ್ನು ಬಗೆಹರಿಸಲು ಬಯಸುತ್ತಾರೆ. ಸೋಮವಾರ ಅಂಗೀಕರಿಸಲಾಗುವ ನಿರ್ಣಯವು ಮಹಾರಾಷ್ಟ್ರದ ಪರವಾಗಿ ಹೆಚ್ಚು ಪರಿಣಾಮಕಾರಿಯಾಗಿ ಮತ್ತು ಮರಾಠಿ ಜನರ ಹಿತಾಸಕ್ತಿಯನ್ನು ಕಾಪಾಡುವಂತಿರಲಿದೆ' ಎಂದು ಹೇಳಿದ್ದಾರೆ.

'ನಿರ್ಣಯವನ್ನು ಅಂಗೀಕರಿಸಿದ ಬಳಿಕ, ಮಹಾರಾಷ್ಟ್ರದ ನಾಯಕರನ್ನು ಕರ್ನಾಟಕಕ್ಕೆ ಪ್ರವೇಶಿಸದಂತೆ ತಡೆದಿರುವ ಬಗ್ಗೆ ನಮ್ಮ ತೀವ್ರ ಅಸಮಾಧಾನವನ್ನು ನಾವು ಕೇಂದ್ರ ಗೃಹ ಸಚಿವರ ಗಮನಕ್ಕೆ ತರುತ್ತೇವೆ' ಎಂದೂ ದೇಸಾಯಿ ಹೇಳಿದ್ದಾರೆ.

ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಕರ್ನಾಟಕ ಸರ್ಕಾರವು, ಮಹಾರಾಷ್ಟ್ರದ ಗಡಿಯಲ್ಲಿ ರಾಜ್ಯದ ಹಿತಾಸಕ್ತಿ ಕಾಪಾಡಲು ಮತ್ತು ಆ ರಾಜ್ಯಕ್ಕೆ ಒಂದಿಂಚೂ ಭೂಮಿ ಬಿಟ್ಟುಕೊಡದಂತೆ ಗುರುವಾರ, ಸರ್ವಾನುಮತದಿಂದ ನಿರ್ಣಯವನ್ನು ಅಂಗೀಕರಿಸಿದೆ.

ಮಹಾರಾಷ್ಟ್ರವು ಹುಟ್ಟುಹಾಕಿರುವ ಗಡಿ ವಿವಾದವನ್ನು ಖಂಡಿಸಿ ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಡಿಸಿದ ನಿರ್ಣಯವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಗಿದೆ.

ಅಫ್ತಾಬ್ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಶ್ರದ್ಧಾ ವಾಲ್ಕರ್ ಹತ್ಯೆ ಆರೋಪಿ ಅಫ್ತಾಬ್ ಅಮೀನ್ ಪೂನಾವಾಲಾ ಅವರ ನ್ಯಾಯಾಂಗ ಬಂಧನವನ್ನು 14 ದಿನಗಳ ವರೆಗೆ ವಿಸ್ತರಿಸಿ ನ್ಯಾಯಾಲಯ ಶುಕ್ರವಾರ ಆದೇಶಿಸಿದೆ.

ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ವಿಜಯಶ್ರೀ ರಾಥೋರ್ ಅವರು, ಅಫ್ತಾಬ್ ಅವರ ನ್ಯಾಯಾಂಗ ಬಂಧನವನ್ನು ಜನವರಿ 6ರವರೆಗೆ ವಿಸ್ತರಿಸಿ ಆದೇಶ ಹೊರಡಿಸಿದ್ದಾರೆ.

ಪ್ರಿಯತಮೆ ಶ್ರದ್ಧಾ ಅವರನ್ನು ಉಸಿರುಗಟ್ಟಿಸಿ ಹತ್ಯೆ ಮಾಡಿ ದೇಹವನ್ನು ತುಂಡು ತುಂಡಾಗಿ ಕತ್ತರಿಸಿ ಕ್ರೌರ್ಯ ಮೆರೆದಿದ್ದ ಆರೋಪದಡಿ ಬಂಧಿಸಲಾಗಿತ್ತು.

ಹಿರಿಯ ನಟ ಸತ್ಯನಾರಾಯಣ ನಿಧನ



ಹೈದರಾಬಾದ್ (ಪಿಟಿಐ): ಟಾಲಿವುಡ್‌ನ ಹಿರಿಯ ನಾಯಕ ನಟ, ಖಳನಾಯಕ ನಟ ಹಾಗೂ ಪೋಷಕ ಪಾತ್ರಗಳಲ್ಲಿ ತಮ್ಮದೇ ಛಾಪು ಮೂಡಿಸಿದ್ದ ಖ್ಯಾತ ಹಿರಿಯ ನಟ ಕೈಕಾಲ ಸತ್ಯನಾರಾಯಣ (87) ಅವರು ಶುಕ್ರವಾರ ನಿಧನರಾಗಿದ್ದಾರೆ. ಸತ್ಯನಾರಾಯಣ ಅವರು ವಯೋಸಹಜ ಖಾಯಿಲೆಯಿಂದ ಬಳಲುತ್ತಿದ್ದರು ಎಂದು ತಿಳಿಸಲಾಗಿದೆ.

ಆರು ದಶಕಗಳ ಕಾಲ ಸಿನಿಮಾರಂಗದಲ್ಲಿ ಸೇವೆ ಸಲ್ಲಿಸಿರುವ ಸತ್ಯನಾರಾಯಣ ಅವರು ಸುಮಾರು 700ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದಾರೆ. ತೆಲುಗು ದೇಶಂ ಪಾರ್ಟಿಯಿಂದ (ಟಿಡಿಪಿ) ರಾಜಕೀಯ ಪ್ರವೇಶಿಸಿ ಸಂಸದರಾಗಿಯೂ ಕಾರ್ಯ ನಿರ್ವಹಿಸಿದ್ದರು. ಇವರ ನಿಧನಕ್ಕೆ ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್, ಆಂಧ್ರ ಪ್ರದೇಶ ಮುಖ್ಯಮಂತ್ರಿ ವೈ.ಎಸ್.ಜಗನ್ ಮೋಹನ್ ರೆಡ್ಡಿ, ಟಿಡಿಪಿ ಮುಖ್ಯಸ್ಥ ಎನ್.ಚಂದ್ರಬಾಬು ನಾಯ್ಡು, ಎಂಎಲ್‌ಎ ಎನ್.ಬಾಲಕೃಷ್ಣ, ಸಿನಿ ಕ್ಷೇತ್ರದ ದಿಗ್ಗಜರು, ಇತರ ನಾಯಕರು ಸಂತಾಪ ಸೂಚಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ ಹೆಚ್ಚಳ • 88.21 ಲಕ್ಷ ಪ್ರಕರಣ ದಾಖಲಿಸಿದ ಕ್ಯಾಮೆರಾಗಳು

11 ತಿಂಗಳಿನಲ್ಲಿ 96.27 ಲಕ್ಷ ಪ್ರಕರಣ, ₹174 ಕೋಟಿ ದಂಡ

ನಗರದಲ್ಲಿ ವಾಹನಗಳ ನೋಂದಣಿ ಸಂಖ್ಯೆ ಹೆಚ್ಚಳದ ಜೊತೆಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡುವವರ ಸಂಖ್ಯೆಯಲ್ಲೂ ಏರಿಕೆ ಕಂಡುಬರುತ್ತಿದೆ. ಕಳೆದ ವರ್ಷಗಳಿಗೆ ಹೋಲಿಸಿದರೆ 2022ರಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಸಂಖ್ಯೆ ಹಾಗೂ ದಂಡದ ಪ್ರಮಾಣ ಹೆಚ್ಚಳವಾಗಿದೆ. ನಗರದಲ್ಲಿ ಅಳವಡಿಸಿರುವ ಕ್ಯಾಮೆರಾಗಳ ಮೂಲಕವೇ ಶೇ 90ರಷ್ಟು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಎಎನ್‌ಪಿಆರ್ (ಸ್ವಯಂಪ್ರೇರಿತ ನೋಂದಣಿ ಸಂಖ್ಯೆ ಗುರುತಿಸುವ) ಕ್ಯಾಮೆರಾ ಮೂಲಕ ರಸ್ತೆಯಲ್ಲಿ ವಾಹನಗಳನ್ನು ಪತ್ತೆ ಮಾಡಿ ಪೊಲೀಸರು ದಂಡ ಸಂಗ್ರಹಿಸುತ್ತಿದ್ದಾರೆ. 2022ರ ಜನವರಿಯಿಂದ ನವೆಂಬರ್‌ವರೆಗಿನ ಸಂಚಾರ ನಿಯಮ ಉಲ್ಲಂಘನೆ, ದಂಡ ಸಂಗ್ರಹ ಸೇರಿದಂತೆ ಹಲವು ಮಾಹಿತಿಯನ್ನು ಪೊಲೀಸರು ಬಿಡುಗಡೆ ಮಾಡಿದ್ದಾರೆ. ಅದರ ಅಂಕಿ–ಅಂಶ ಇಲ್ಲಿವೆ...

- ₹154.67 ಕೋಟಿ ಸಂಪರ್ಕರಹಿತವಾಗಿ ಕ್ಯಾಮೆರಾ ಮೂಲಕ ವಿಧಿಸಿದ ದಂಡ
- ₹15.83 ಕೋಟಿ ಸಿಬ್ಬಂದಿ ವಿಧಿಸಿದ ದಂಡ
- ₹1.76 ಲಕ್ಷ ಕರ್ನಾಟಕ ಪೊಲೀಸ್ ಕಾಯ್ದೆಯಡಿ ವಿಧಿಸಿದ ದಂಡ
- ₹22.63 ಲಕ್ಷ ಟೋಯಿಂಗ್‌ಗೆ ವಿಧಿಸಿದ ದಂಡ

88.21 ಲಕ್ಷ ಸಂಪರ್ಕರಹಿತವಾಗಿ ಕ್ಯಾಮೆರಾ ಮೂಲಕ ದಾಖಲಿಸಿದ ಪ್ರಕರಣ

7.89 ಲಕ್ಷ ಸಿಬ್ಬಂದಿ ದಾಖಲಿಸಿದ ಪ್ರಕರಣ

2,772 ಕರ್ನಾಟಕ ಪೊಲೀಸ್ ಕಾಯ್ದೆ ಪ್ರಕರಣ


3,334 ಟೋಯಿಂಗ್ ಪ್ರಕರಣ

1.04 ಕೋಟಿ ಬೆಂಗಳೂರಿನಲ್ಲಿ ನೋಂದಣಿಯಾದ ಒಟ್ಟು ವಾಹನಗಳು

69.31 ಲಕ್ಷ ದ್ವಿಚಕ್ರ ವಾಹನಗಳು | 21.97 ಲಕ್ಷ ಕಾರುಗಳು | 2.54 ಲಕ್ಷ ಟ್ಯಾಕ್ಸಿಗಳು | 2.92 ಲಕ್ಷ ಆಟೊರಿಕ್ಷಾಗಳು



ಎಎನ್‌ಪಿಆರ್ (ಸ್ವಯಂಪ್ರೇರಿತ ವಾಹನ ಸಂಖ್ಯೆ ಗುರುತಿಸುವ) ಕ್ಯಾಮೆರಾ ಮಾಹಿತಿ ಆಧರಿಸಿ ವಾಹನಗಳನ್ನು ತಡೆದು ದಂಡ ಸಂಗ್ರಹಿಸಿದ ಸಂಚಾರ ಪೊಲೀಸರು (ಸಂಗ್ರಹ ಚಿತ್ರ)



ಯಾವ ಉಲ್ಲಂಘನೆಗೆ ಎಷ್ಟು ಪ್ರಕರಣ	
ಸಿಗ್ನಲ್ ಜಂಪ್	3.82 ಲಕ್ಷ
ತಪ್ಪು ನಿಲುಗಡೆ	10.38 ಲಕ್ಷ
ದೋಷಪೂರಿತ ನೋಂದಣಿ ಸಂಖ್ಯೆ	3.68 ಲಕ್ಷ
ನಿರ್ಬಂಧಿತ ರಸ್ತೆಯಲ್ಲಿ ಸಂಚಾರ	4.75 ಲಕ್ಷ
ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ	1.40 ಲಕ್ಷ
ತ್ರಿಬಲ್ ರೈಡಿಂಗ್	1.49 ಲಕ್ಷ
ಚಾಲನೆ ವೇಳೆ ಮೊಬೈಲ್ ಬಳಕೆ	1.48 ಲಕ್ಷ
ಹೆಲ್ಮೆಟ್ ರಹಿತ ಸವಾರ	40.26 ಲಕ್ಷ
ಹೆಲ್ಮೆಟ್ ರಹಿತ ಹಿಂಬದಿ ಸವಾರ	24.70 ಲಕ್ಷ
ನಿರ್ಲಕ್ಷ್ಯ ಹಾಗೂ ಅತಿ ವೇಗದ ಚಾಲನೆ	58,495
ಪಾನಮತ್ತ ಚಾಲನೆ	26,017
ವ್ಹೀಲೀ	85
ಡಿ.ಎಲ್ ರಹಿತ ಚಾಲನೆ	24,847

ವಿಭಾಗವಾರು ಅಪಘಾತ ಮಾಹಿತಿ

	ಅಪಘಾತ	ಸಾವು	ಗಾಯಾಳು
ಪೂರ್ವ	1,347	257	1,155
ಪಶ್ಚಿಮ	1,477	299	1,208
ಉತ್ತರ	642	158	561

ವರ್ಷವಾರು ವಿವರ

	2020	2021
ಅಪಘಾತ	3,236	3,211
ಗಾಯಾಳು	2,760	2,828
ಸಾವು	647	651

ಅಪಘಾತ ವಿವರ: 3,466 ಒಟ್ಟು ಅಪಘಾತ | 714 ಮೃತಪಟ್ಟವರ ಸಂಖ್ಯೆ | 2,924 ಗಾಯಗೊಂಡವರ ಸಂಖ್ಯೆ

ಸುದ್ದಿ 2 ನಿಮಿಷ

ವಸತಿಗೃಹದಲ್ಲಿ ಲೈಂಗಿಕ ದೌರ್ಜನ್ಯ: ಆರೋಪಿ ಬಂಧನ

ಬೆಂಗಳೂರು: ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಯುವತಿಯನ್ನು ವಸತಿಗೃಹವೊಂದಕ್ಕೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಶಿವರೆಡ್ಡಿ ಎಂಬುವರನ್ನು ಕಾಡುಗೋಡಿ ಪೊಲೀಸರು ಬಂಧಿಸಿದ್ದಾರೆ.

‘ಕೇರಳದ ಯುವತಿಯೊಬ್ಬರು ಇತ್ತೀಚೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತಮಿಳುನಾಡಿನ ಶಿವರೆಡ್ಡಿಯನ್ನು ಬಂಧಿಸಲಾಗಿದೆ. ಸದ್ಯ ಈತ ನ್ಯಾಯಾಂಗ ಬಂಧನದಲ್ಲಿದ್ದಾನೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಡತನ ಕುಟುಂಬದ ಯುವತಿ, ಕೆಲಸ ಹುಡುಕಿಕೊಂಡು ಬಸ್ಸಿನಲ್ಲಿ ನಗರಕ್ಕೆ ಬಂದು ಮೆಜೆಸ್ಟಿಕ್ ನಿಲ್ದಾಣದಲ್ಲಿ ಇಳಿದಿದ್ದರು. ಅದೇ ನಿಲ್ದಾಣದಲ್ಲಿ ಯುವತಿಯನ್ನು ಆರೋಪಿ ಪರಿಚಯ ಮಾಡಿಕೊಂಡಿದ್ದ. ಕೆಲಸ ಪಡೆಯಲು ಸಹಾಯ ಮಾಡುವುದಾಗಿ ಹೇಳಿದ್ದ. ನಂತರ, ಯುವತಿಯನ್ನು ಕರೆದುಕೊಂಡು ಕಾಡುಗೋಡಿ ಬಳಿಯ ವಸತಿಗೃಹವೊಂದಕ್ಕೆ ಹೋಗಿದ್ದ. ಅಲ್ಲಿಯೇ ಕೊಠಡಿಯಲ್ಲಿ ಯುವತಿಯನ್ನು ಇರಿಸಿದ್ದ. ಅದೇ ಕೊಠಡಿಯಲ್ಲಿ ತಾನೂ ಉಳಿದುಕೊಂಡಿದ್ದ.’

‘ಕೆಲಸ ಕೊಡಿಸುವುದಾಗಿ ಹೇಳಿ ಯುವತಿಯನ್ನು ಹಲವೆಡೆ ಸುತ್ತಾಡಿಸುತ್ತಿದ್ದ. ಕೊಠಡಿಯಲ್ಲಿದ್ದ ವೇಳೆ ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ. ಅತ್ಯಾಚಾರಕ್ಕೂ ಯತ್ನಿಸಿದ್ದ. ಕಿರುಕುಳದಿಂದ ಬೇಸತ್ತ ಯುವತಿ ಠಾಣೆಗೆ ಬಂದು ದೂರು ನೀಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆರೋಪಿ ಶಿವರೆಡ್ಡಿ, ವಸತಿಗೃಹದಲ್ಲಿ ಕೆಲ ತಿಂಗಳು ಕೆಲಸ ಮಾಡಿದ್ದ. ಅಲ್ಲಿಯ ಸಿಬ್ಬಂದಿ ಪರಿಚಯಸ್ಥರಿದ್ದರು. ಅದೇ ಕಾರಣಕ್ಕೆ ಯುವತಿಯನ್ನು ವಸತಿಗೃಹಕ್ಕೆ ಕರೆದೊಯ್ದು ಕೃತ್ಯ ಎಸಗಿದ್ದ’ ಎಂದೂ ಹೇಳಿವೆ.

ಸರಗಳವು: ಧಾರವಾಡದಲ್ಲಿ ಸೆರೆಸಿಕ್ಕ ಇರಾನಿ ಸದಸ್ಯ ಜೈಲಿಗೆ

ಬೆಂಗಳೂರು: ಸರಗಳವು ಪ್ರಕರಣದಲ್ಲಿ ಜಾಮೀನು ಪಡೆದು ತಲೆಮರೆಸಿಕೊಂಡಿದ್ದ ಇರಾನಿ ತಂಡದ ಸದಸ್ಯ ಅಬುಜರ್ ಅಲಿಯನ್ನು (26) ಬನಶಂಕರಿ ಠಾಣೆ ಪೊಲೀಸರು ಧಾರವಾಡದಲ್ಲಿ ಬಂಧಿಸಿ ನಗರಕ್ಕೆ ಕರೆತಂದಿದ್ದು, ಸದ್ಯ ಈತ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದ್ದಾನೆ.

‘ಬೆಂಗಳೂರಿನ 36 ಕಡೆ ಮಹಿಳೆಯರ ಚಿನ್ನದ ಸರಗಳವು ಮಾಡಿದ್ದ ಅಬುಜರ್‌ನನ್ನು 2019ರಲ್ಲಿ ಬಂಧಿಸಲಾಗಿದೆ. ಕೆಲ ದಿನ ಜೈಲಿನಲ್ಲಿದ್ದ ಈತ, ಜಾಮೀನು ಮೇಲೆ ಹೊರಬಂದಿದ್ದ. ಇದಾದ ನಂತರ ಮೂರು ವರ್ಷಗಳಿಂದ ತಲೆಮರೆಸಿಕೊಂಡಿದ್ದ. ನ್ಯಾಯಾಲಯದ ವಿಚಾರಣೆಗೂ ಹಾಜರಾಗಿರಲಿಲ್ಲ. ಹೀಗಾಗಿ, ಈತನ ಬಂಧನಕ್ಕೆ ವಾರೆಂಟ್ ಜಾರಿಯಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಧಾರವಾಡ ಟೋಲ್‌ನಾಕಾ ಬಳಿಯ ಇರಾನಿ ಕಾಲೊನಿಯಲ್ಲಿ ನೆಲೆಸಿದ್ದ ಅಬುಜರ್ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಧಾರವಾಡಕ್ಕೆ ಹೋಗಿದ್ದ ವಿಶೇಷ ತಂಡ, ಅಬುಜರ್‌ನನ್ನು ಬಂಧಿಸಿ ನಗರಕ್ಕೆ ಕರೆತಂದು ನ್ಯಾಯಾಲಯಕ್ಕೆ ಹಾಜರುಪಡಿಸಿತು. ವಿಚಾರಣೆ ನಡೆಸಿದ ನ್ಯಾಯಾಲಯ, ಈತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ’ ಎಂದು ತಿಳಿಸಿದರು.

ಪಿಯು ವಿದ್ಯಾರ್ಥಿಗಳ ಬೆದರಿಸಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀನಿವಾಸನಗರದಲ್ಲಿ ಪಿಯು ವಿದ್ಯಾರ್ಥಿಗಳನ್ನು ಅಡ್ಡಗಟ್ಟಿ ಚಾಕು ತೋರಿಸಿ ಕೊಲೆ ಬೆದರಿಕೆಯೊಡ್ಡಿ ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ಸಂಪಿಗೆಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಪಿಯು ವಿದ್ಯಾರ್ಥಿಯೊಬ್ಬರು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕೃತ್ಯ ಎಸಗಿರುವ ಇಬ್ಬರ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮೂವರು ವಿದ್ಯಾರ್ಥಿಗಳು ಡಿ. 19ರಂದು ಸಂಜೆ ಶ್ರೀನಿವಾಸಪುರದ ವೆಂಕಟೇಶ್ವರ ಕಲ್ಯಾಣ ಮಂಟಪ ಸಮೀಪದಲ್ಲಿ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಅವರನ್ನು ಹಿಂಬಾಲಿಸಿಕೊಂಡು ಮತ್ತೊಂದು ಬೈಕ್‌ನಲ್ಲಿ ಬಂದಿದ್ದ ಆರೋಪಿಗಳು, ಮಾರ್ಗಮಧ್ಯೆ ಅಡ್ಡಗಟ್ಟಿದ್ದರು. ಚಾಕು ತೋರಿಸಿ ವಿದ್ಯಾರ್ಥಿಗಳನ್ನು ಬೆದರಿಸಿದ್ದರು. ಮೂರು ಮೊಬೈಲ್, ₹1,000 ನಗದು ಹಾಗೂ ಚಿನ್ನದ ಎರಡು ಕಿವಿಯೋಲೆ ಸುಲಿಗೆ ಮಾಡಿ ಪರಾರಿಯಾಗಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಒಂಬತ್ತು ಆರೋಪಿಗಳು, ಎರಡು ಕಂಪನಿ ವಿರುದ್ಧ ದೋಷಾರೋಪ

ಪಿಎಸಿಎಲ್ ಜಮೀನು ಪರಭಾರೆ: ಆರೋಪ ಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸಿಎಲ್ (ಪರ್ಲ್ ಅಗ್ರೊ ಕಾರ್ಪೋರೇಶನ್ ಸಂಸ್ಥೆ) ಜಮೀನು ಪರಭಾರೆ ಪ್ರಕರಣದ ತನಿಖೆ ಪೂರ್ಣಗೊಳಿಸಿರುವ ಬೆಂಗಳೂರು ಗ್ರಾಮಾಂತರ ಪೊಲೀಸರು, ಎರಡು ಕಂಪನಿ ಹಾಗೂ ಒಂಬತ್ತು ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

‘1996ರಲ್ಲಿ ಆರಂಭವಾಗಿದ್ದ ಪಿಎಸಿಎಲ್ ಕಂಪನಿ, ಲಾಭದ ಆಮಿಷವೊಡ್ಡಿ ದೇಶದ ಹಲವು ರಾಜ್ಯಗಳಲ್ಲಿ ಸುಮಾರು ₹ 5 ಕೋಟಿ ಜನರಿಂದ ಹಣ ಪಾವತಿಸಿಕೊಂಡು ವಂಚಿಸಿತ್ತು. ಇದೇ ಹಣದಲ್ಲಿ ದೇಶದ ಹಲವೆಡೆ ಜಮೀನು ಖರೀದಿ ಮಾಡಿತ್ತು. ವಂಚನೆ ಸಂಬಂಧ ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ನೇಮಿಸಿದ್ದ ಸಮಿತಿ, ಕಂಪನಿ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಆದೇಶ ಹೊರಡಿಸಿತ್ತು. ಆದರೆ, ಸುಪ್ರೀಂಕೋರ್ಟ್ ಆದೇಶವಿದ್ದರೂ ಕೆಲವರು ಆಸ್ತಿಯನ್ನು ಪರಭಾರೆ ಮಾಡಿದ್ದರು. ಇದೇ ಪ್ರಕರಣಕ್ಕೆ ಸಂಬಂಧಪಟ್ಟಂತೆ ಬೆಂಗಳೂರು ಗ್ರಾಮಾಂತರ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆಸ್ತಿ ಪರಭಾರೆ ಮಾಡಿದ್ದ ಆರೋಪಿಗಳಾದ ಮಂಜುನಾಥ್, ಆಯಷ್ ತಾಪ, ಚಂದ್ರಮೋಹನ್, ಶ್ರೀನಿವಾಸ್, ಅನಿಲ್ ಕುಮಾರ್, ಪ್ರವೀಣ್ ಕುಮಾರ್, ಪೃಥ್ವಿ ಸೇರಿ ಒಂಬತ್ತು ಆರೋಪಿಗಳನ್ನು ಬಂಧಿಸಲಾಗಿತ್ತು. ಇದೀಗ, ಇವರೆಲ್ಲರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.’

‘ಪ್ರಕರಣದಲ್ಲಿ ಎಂ.ಎಸ್. ವುಡ್ಸ್ ವಿಲ್ಲಾ ಪ್ರಾಜೆಕ್ಟ್ ಕಂಪನಿ ಮತ್ತು ಎಂ.ಎಸ್.ಮೆಗಾಸ್ಟ್ರಕ್ಚರ್ಸ್ ಇನ್ಫ್ರಾಕಾನ್ ಕಂಪನಿ ಪಾತ್ರವಿರುವುದು ಪುರಾವೆಗಳಿಂದ ಗೊತ್ತಾಗಿದೆ. ಎರಡೂ ಕಂಪನಿಗಳನ್ನು ಆರೋಪಿಗಳನ್ನಾಗಿ ಮಾಡಿ, ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

₹15 ಕೋಟಿ ಮೌಲ್ಯದ ಆಸ್ತಿ: ‘ಜನರನ್ನು ವಂಚಿಸಿ ಗಳಿಸಿದ್ದ ಹಣದಲ್ಲಿ ಪಿಎಸಿಎಲ್ ಕಂಪನಿಯು ಆನೇಕಲ್ ಹಾಗೂ ಹೆಬ್ಬಗೋಡಿ ಬಳಿ ₹ 15 ಕೋಟಿ ಮೌಲ್ಯದ ಜಮೀನು ಖರೀದಿಸಿತ್ತು. ಇದೇ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು. ಇದರ ನಡುವೆಯೇ ಆರೋಪಿಗಳು, ಜಮೀನು ಪರಭಾರೆ ಮಾಡಿದ್ದರು’ ಎಂದು ಮೂಲಗಳು ಹೇಳಿವೆ.

ಅಮಾನತಾಗಿದ್ದ ಇನ್‌ಸ್ಪೆಕ್ಟರ್: ‘ಆಂತರಿಕ ಭದ್ರತಾ ವಿಭಾಗದ ಇನ್‌ಸ್ಪೆಕ್ಟರ್ ಬಿ.ಕೆ.ಕಿಶೋರ್ ಕುಮಾರ್ ಅವರ ಸಹೋದರ ಸಹ ಪ್ರಕರಣದಲ್ಲಿ ಭಾಗಿಯಾಗಿರುವುದು ತನಿಖೆಯಿಂದ ಗೊತ್ತಾಗಿತ್ತು. ಸಹೋದರನಿಗೆ ಸಹಕರಿಸಿದ್ದ ಆರೋಪದಡಿ ಕಿಶೋರ್ ಕುಮಾರ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿತ್ತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ಗೋವಾದಿಂದ ಡ್ರಗ್ಸ್ ತಂದು ಮಾರಾಟ

ಬೆಂಗಳೂರು: ಗೋವಾದಿಂದ ಡ್ರಗ್ಸ್ ತಂದು ನಗರದಲ್ಲಿ ಮಾರುತ್ತಿದ್ದ ಆರೋಪಿ ಅಗ್ಬು ಚಿಕೆ ಅಂಥೋನಿ ಎಂಬುವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ನೈಜೀರಿಯಾದ ಅಗ್ಬು, ವ್ಯಾಪಾರ ವೀಸಾದಡಿ ನಗರಕ್ಕೆ ಬಂದು ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ. ಈತನಿಂದ ₹ 25 ಲಕ್ಷ ಮೌಲ್ಯದ ಎಂಡಿಎಂಎ, ಮೊಬೈಲ್ ಹಾಗೂ ತೂಕದ ಯಂತ್ರ ಜಪ್ತಿ ಮಾಡಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಎಲೆಕ್ಟ್ರಾನಿಕ್ ಸಿಟಿ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ಸುತ್ತಾಡುತ್ತಿದ್ದ ಆರೋಪಿ, ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಬಂಧಿಸಲಾಯಿತು’ ಎಂದರು.

‘ಗೋವಾದಲ್ಲಿ ನೆಲೆಸಿರುವ ಆಫ್ರಿಕಾ ಪೆಡ್ಲರ್ ಜೊತೆ ಒಡನಾಟ ಹೊಂದಿದ್ದ ಅಗ್ಬು, ಆತನಿಂದ ಡ್ರಗ್ಸ್ ಖರೀದಿಸುತ್ತಿದ್ದ. ಅದನ್ನು ಪಾರ್ಸೆಲ್ ಮೂಲಕ ನಗರಕ್ಕೆ ತರಿಸುತ್ತಿದ್ದ. ನಂತರ, ಚಿಕ್ಕ ಪೊಟ್ಟಣಗಳಲ್ಲಿ ಡ್ರಗ್ಸ್ ತುಂಬಿ ಮಾರುತ್ತಿದ್ದ. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಕಂಪನಿ ಉದ್ಯೋಗಿಗಳು ಹಾಗೂ ಇತರರು, ಆರೋಪಿ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು.’



ಸಿಸಿಬಿ ಪೊಲೀಸರು ಆರೋಪಿಯಿಂದ ಜಪ್ತಿ ಮಾಡಿರುವ ಡ್ರಗ್ಸ್ ಹಾಗೂ ತೂಕದ ಯಂತ್ರ

‘ಆರೋಪಿ ಅಗ್ಬು ವಿರುದ್ಧ ಕೆ.ಜಿ.ಹಳ್ಳಿ ಠಾಣೆಯಲ್ಲಿ ಇದೇ ನವೆಂಬರ್‌ನಲ್ಲಿ ಪ್ರಕರಣ ದಾಖಲಾಗಿತ್ತು. ಇದಾದ ನಂತರವೂ ಆರೋಪಿ ಡ್ರಗ್ಸ್ ಮಾರಾಟ ಮುಂದುವರಿಸಿದ್ದ’ ಎಂದು ಪೊಲೀಸರು ಮಾಹಿತಿ ನೀಡಿದರು.

ಸರ್ಕಾರಿ ಕಾಮಗಾರಿ ಗುತ್ತಿಗೆ ಆಮಿಷ: ₹ 22.72 ಲಕ್ಷ ವಂಚನೆ

ಬೆಂಗಳೂರು: ಸರ್ಕಾರಿ ಕಾಮಗಾರಿಗಳ ಗುತ್ತಿಗೆ ಹಾಗೂ ಕಡಿಮೆ ಬೆಲೆಗೆ ಚಿನ್ನ ಕೊಡಿಸುವ ಆಮಿಷವೊಡ್ಡಿ ಸಿವಿಲ್ ಗುತ್ತಿಗೆದಾರರೊಬ್ಬರಿಂದ ₹ 22.72 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಯಲಹಂಕ ನಿವಾಸಿಯಾಗಿರುವ 30 ವರ್ಷದ ಗುತ್ತಿಗೆದಾರರೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ಸೈಯದ್ ರೆಹಮತ್ ಉಲ್ಲಾ, ಸೈಯದ್ ಖಾದರ್ ಹಾಗೂ ಸೈಯದ್ ಹುಸೇನ್ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರರಿಗೆ ಕೆಲ ವರ್ಷಗಳ ಹಿಂದೆಯಷ್ಟೇ ಆರೋಪಿ ರೆಹಮತ್ ಉಲ್ಲಾ ಪರಿಚಯವಾಗಿತ್ತು. ‘ರಾಜ್ಯ ಸರ್ಕಾರದ ಸಚಿವರು ಹಾಗೂ ಹಿರಿಯ ಅಧಿಕಾರಿಗಳು ನನಗೆ ಪರಿಚಯ. ಅವರಿಗೆ ಹೇಳಿ ಕಾಮಗಾರಿ ಗುತ್ತಿಗೆ ಕೊಡಿಸುತ್ತೇನೆ’ ಎಂದು ಆರೋಪಿ ಆಮಿಷವೊಡ್ಡಿದ್ದ. ನಂತರ, ₹ 4 ಲಕ್ಷ ಪಡೆದುಕೊಂಡಿದ್ದ. ಇದಾದ ಬಳಿಕ ಆರೋಪಿ ಯಾವುದೇ ಕಾಮಗಾರಿ ಕೊಡಿಸಿರಲಿಲ್ಲ.’

‘ಆರೋಪಿ ವರ್ತನೆಯನ್ನು ದೂರುದಾರ ಪ್ರಶ್ನಿಸಿದ್ದರು. ಸದ್ಯದಲ್ಲೇ ಕಾಮಗಾರಿ ಕೊಡಿಸುವುದಾಗಿ ಪುನಃ ಹೇಳಿದ್ದ ಆರೋಪಿ, ‘ದುಬೈನಲ್ಲಿರುವ ಸಂಬಂಧಿಕರೊಬ್ಬರ ಬಳಿ ಚಿನ್ನವಿದೆ. ಅದನ್ನು ಕಡಿಮೆ ಬೆಲೆಗೆ ಕೊಡಿಸುತ್ತೇನೆ’ ಎಂದಿದ್ದ. ಅದನ್ನೂ ನಂಬಿದ್ದ ದೂರುದಾರ, ₹ 22.72 ಲಕ್ಷ ನೀಡಿದ್ದ. ಹಣ ಪಡೆದಿದ್ದ ಆರೋಪಿಗಳು, ಯಾವುದೇ ಚಿನ್ನಾಭರಣ ಕೊಟ್ಟಿರಲಿಲ್ಲ. ಈ ಬಗ್ಗೆ ವಿಚಾರಿಸಿದಾಗ ಆರೋಪಿಗಳು ಕೊಲೆ ಬೆದರಿಕೆಯೊಡ್ಡಿದ್ದರಿಂದ ದೂರುದಾರರು ಆರೋಪಿಸಿದ್ದಾರೆ’ ಎಂದರು.

ರಸ್ತೆ ಬದಿಯ ಮರಗಳ ಬುಡಕ್ಕೆ ಡಾಂಬರು

ರಾಜರಾಜೇಶ್ವರಿನಗರ: ಉಲ್ಲಾಳು ವಾರ್ಡ್‌ನ ನಾಗದೇವನಹಳ್ಳಿ ಹಾಗೂ ಡಿ.ದೇವರಾಜು ಅರಸು ಬಡಾವಣೆಯಲ್ಲಿ ಮುಖ್ಯರಸ್ತೆ ಹಾಗೂ ಅಡ್ಡ ರಸ್ತೆಗಳಿಗೆ ಡಾಂಬರೀಕರಣ ಮಾಡಲಾಗುತ್ತಿದ್ದು ಅಲ್ಲಿ ಮರಗಳ ಬುಡಕ್ಕೆ ಡಾಂಬರು ಹಾಕಲಾಗಿದೆ. ಇದಕ್ಕೆ ಪರಿಸರ ಪ್ರೇಮಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ರಸ್ತೆಯ ಪಕ್ಕದಲ್ಲಿ, ಪಾದಚಾರಿ ಮಾರ್ಗದ ಪಕ್ಕದಲ್ಲಿರುವ ಹತ್ತಾರು ಮರಗಳ ಬುಡಗಳಿಗೆ ಡಾಂಬರು ಸುರಿದು ಮರಗಳ ನಾಶಕ್ಕೆ ಕಾರಣ ಆಗುತ್ತಿರುವುದು ಎಷ್ಟು ಸರಿ ಎಂದು ನಾಗದೇವನಹಳ್ಳಿ ನಿವಾಸಿ ಆರ್. ಮಂಗಳಾ ಅವರು ಆಕ್ರೋಶ ವ್ಯಕ್ತಪಡಿಸಿದರು.



ನಾಗದೇವನಹಳ್ಳಿ, ಡಿ.ದೇವರಾಜು ಅರಸು ಬಡಾವಣೆಯಲ್ಲಿ ಮರಗಳ ಬುಡಕ್ಕೆ ಡಾಂಬರು ಹಾಕಲಾಗಿದೆ

ಹತ್ತಾರು ವರ್ಷಗಳಿಂದ ಬೆಳೆಸಿರುವ ಮರಗಳ ಬುಡಕ್ಕೆ ಮತ್ತು ವರ್ಷದ ಹಿಂದೆ ನೆಟ್ಟಿರುವ ಮರಗಳ ಸುತ್ತಲೂ ನೀರು ಬೇರು ಸೇರದಂತೆ ಮಾಡಲಾಗಿದೆ. ಮರಗಳ ಬೆಳವಣಿಗೆಗೆ ನೀರು ಮತ್ತು ಪೋಷಕಾಂಶ ಅಗತ್ಯ. ಹೊಸದಾಗಿ ಬೆಳೆಯುತ್ತಿರುವ ಬೇರುಗಳು ಆಳವಾಗಿ ನೆಲದಾಳಕ್ಕೆ ಹೋಗುವುದಿಲ್ಲ ಎಂದರು.

‘ರಸ್ತೆ, ಪಾದಚಾರಿ ಮಾರ್ಗದಲ್ಲಿರುವ ಮರಗಳ ಬುಡಕ್ಕೆ ಡಾಂಬರು, ಕಾಂಕ್ರೀಟ್ ಹಾಕುವಂತಿಲ್ಲ. ಈ ಬಗ್ಗೆ ಗುತ್ತಿಗೆದಾರರಿಗೆ ಖಡಕ್ ಎಚ್ಚರಿಕೆ ನೀಡುತ್ತೇನೆ. ಮರಗಳ ಬುಡಕ್ಕೆ ಹಾಕಿರುವ ಡಾಂಬರು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಬಿಬಿಎಂಪಿ ಕಾರ್ಯಪಾಲಕ (ಕಾಮಗಾರಿ) ಎಂಜಿನಿಯರ್ ಬಿ.ರಾಜಣ್ಣ ತಿಳಿಸಿದರು.



ಜಾಗೃತಿ ರ್‍ಯಾಂಬೊ ಸರ್ಕಸ್ ಕಲಾವಿದರು ಅನಿಲ್ ಕುಂಬ್ಳೆ ವೃತ್ತದಲ್ಲಿ ಶುಕ್ರವಾರ ಕ್ರಿಸ್‌ಮಸ್ ಸಂದೇಶ ಸಾರುವ ಜತೆಗೆ ಕೋವಿಡ್ ಬಗ್ಗೆ ಜಾಗೃತಿ ಮೂಡಿಸಿದರು –ಪ್ರಜಾವಾಣಿ ಚಿತ್ರ/ಮರಿಯಾ ಎಸ್. ಮಟ್ಟತಿಲ್

ಲೈಂಗಿಕ ಕಿರುಕುಳ: ಪ್ರಾಂಶುಪಾಲ ಸೆರೆ

ಪ್ರಜಾವಾಣಿ ವಾರ್ತೆ



ಗಾಳೆಪ್ಪ ಪೂಜಾರಿ

ಯಾದಗಿರಿ: ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಮೋಟ್ನಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ಗಾಳೆಪ್ಪ ಪೂಜಾರಿ (40) ಎಂಬ ಆರೋಪಿಯನ್ನು ಪೋಕ್ಸೊ ಪ್ರಕರಣದಡಿ ಮಹಿಳಾ ಠಾಣೆಯ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಬ್ಯಾಂಕ್ ಲೂಟಿ: ಬಂಧನ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ತಾಲ್ಲೂಕಿನ ಹೊಸಹಳ್ಳಿ ಗ್ರಾಮದಲ್ಲಿ ನ. 25ರಂದು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಬಾಗಿಲನ್ನು ಕತ್ತರಿಸಿ ಸುಮಾರು ₹3.50 ಕೋಟಿ ಮೌಲ್ಯದ 12 ಕೆ.ಜಿ. ಚಿನ್ನಾಭರಣ, ₹14 ಲಕ್ಷ ನಗದು ದೋಚಿದ್ದ ಪ್ರಕರಣದಲ್ಲಿ ಶಾಮೀಲಾಗಿದ್ದ ಕೆಲ ಆರೋಪಿಗಳನ್ನು ಉತ್ತರ ಪ್ರದೇಶದಲ್ಲಿ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಹೊಸಹಳ್ಳಿ ಸುತ್ತಮುತ್ತಲಿನ ಪ್ರದೇಶದ ಕೆಲ ಸಿಸಿ ಟಿವಿಗಳಲ್ಲಿ ಸೆರೆಯಾಗಿದ್ದ ಟ್ರಕ್‌ನ ಚಲನವಲನ ದೃಶ್ಯಾವಳಿಗಳ ಆಧಾರದ ಮೇಲೆ ಆರೋಪಿಗಳ ಬೆನ್ನುಹತ್ತಿದ್ದ ಪೊಲೀಸರ ತಂಡ ಉತ್ತರ ಪ್ರದೇಶದ ಇಬ್ಬರು ಟ್ರಕ್ ಚಾಲಕರನ್ನು ಬಂಧಿಸಿದ್ದಾರೆ. ಉತ್ತರ ಪ್ರದೇಶದ ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದ್ದು, ಶನಿವಾರ ಅಥವಾ ಭಾನುವಾರ ನಗರದ ನ್ಯಾಯಾಲಯಕ್ಕೆ ಆರೋಪಿಗಳನ್ನು ಹಾಜರುಪಡಿಸಿ ಪೊಲೀಸ್ ಕಸ್ಟಡಿಗೆ ಪಡೆದು ವಿಚಾರ ನಡೆಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ದಲಿತ ಸಂಘಟನೆಗಳ ಒಕ್ಕೂಟದಿಂದ ನಿರ್ಧಾರ

26ಕ್ಕೆ ‘ಸುವರ್ಣ ಸೌಧ ಚಲೊ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂ ಪರಭಾರೆ ನಿಷೇಧ ಕಾಯ್ದೆಯ (ಪಿಟಿಸಿಎಲ್) ಸಮಗ್ರ ತಿದ್ದುಪಡಿ ಮಸೂದೆಯನ್ನು ಬೆಳಗಾವಿಯಲ್ಲಿ ನಡೆಯುತ್ತಿರುವ ಅಧಿವೇಶನದಲ್ಲಿ ಅಂಗೀಕರಿಸುವಂತೆ ದಲಿತ ಸಂಘಟನೆಯ ಒಕ್ಕೂಟ ಆಗ್ರಹಿಸಿದ್ದು, ಈ ಸಂಬಂಧ ಇದೇ 26ರಂದು ಸುವರ್ಣ ಸೌಧ ಚಲೊ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಎಂ. ವೆಂಕಟಸ್ವಾಮಿ, ‘ಪರಿಶಿಷ್ಟ ಜಾತಿ ಮತ್ತು ಪಂಗಡದವರ ಭೂಮಿ ಬಲಾಢ್ಯರ ಪಾಲಾಗುವುದನ್ನು ತಪ್ಪಿಸಲು, ಡಿ. ದೇವರಾಜ ಅರಸು ಮತ್ತು ಬಿ. ಬಸವಲಿಂಗಪ್ಪ ಅವರ ದಲಿತ ಪರ ಕಾಳಜಿಯಿಂದಾಗಿ ಈ ಕಾಯ್ದೆ 1978ರಲ್ಲಿ ಜಾರಿಗೆ ಬಂದಿತ್ತು. ಈ ಕಾಯ್ದೆಯಡಿ ಸಲ್ಲಿಕೆಯಾಗುವ ಅರ್ಜಿಗಳನ್ನು ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿ ನ್ಯಾಯಾಲಯಗಳು ತಿರಸ್ಕರಿಸುತ್ತಿವೆ. ನ್ಯಾಯಾಲಯಗಳು ಅದೇ ರೀತಿ ತೀರ್ಪುಗಳನ್ನು ನೀಡುತ್ತಿವೆ. ಇದರಿಂದಾಗಿ ದಲಿತರು ಭೂಮಿ ವಂಚಿತರಾಗುತ್ತಿದ್ದಾರೆ. ಆದ್ದರಿಂದ ತಿದ್ದುಪಡಿ ಮಸೂದೆ ಅಂಗೀಕರಿಸುವಂತೆ ಆಗ್ರಹಿಸಿ ಹೋರಾಟ ನಡೆಸಲಾಗುತ್ತಿದೆ’ ಎಂದು ಹೇಳಿದರು.

‘ಗ್ರಾಮ ಸೇವಕರಾಗಿ ಸೇವೆ ನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ತೋಟಿ, ತಳವಾರ, ನೀರಗಂಟಿ ಮುಂತಾದ ಜಾತಿಯ ಸುಮಾರು 12 ಸಾವಿರ ನೌಕರರನ್ನು ಕಾಯಂಗೊಳಿಸಿ, ಸರ್ಕಾರ ಆದೇಶ ಹೊರಡಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದ ಅಭಿವೃದ್ಧಿಗಾಗಿ ಮೀಸಲಿಟ್ಟಿರುವ ಹಣ ದುರ್ಬಳಕೆಯಾಗುತ್ತಿದೆ. ಸರ್ಕಾರ ಪ್ರಸ್ತುತ ಹಣಕಾಸು ವರ್ಷದಲ್ಲಿ ಹಂಚಿಕೆ ಮಾಡಿದ್ದ ಹಣದಲ್ಲಿ ಶೇ 34 ರಷ್ಟು ಅನುದಾನ ಮಾತ್ರ ವಿನಿಯೋಗವಾಗಿದೆ. ಆದ್ದರಿಂದ ಅನುದಾನದ ದುರ್ಬಳಕೆಯನ್ನು ತಡೆಯಬೇಕು’ ಎಂದು ಆಗ್ರಹಿಸಿದರು.

ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಸಭೆ • ವಿಶೇಷ ತಂಡ ರಚನೆಗೆ ಸೂಚನೆ

ಡ್ರಗ್ಸ್ ಪಾರ್ಟಿಗಳ ಗುಮಾನಿ: ಸಿಸಿಬಿ ನಿಗಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷವನ್ನು ಸ್ವಾಗತಿಸಲು ನಗರದ ಹಲವೆಡೆ ಸಿದ್ಧತೆ ನಡೆಯುತ್ತಿದ್ದು, ಇದೇ ಸಂದರ್ಭದಲ್ಲೇ ಡ್ರಗ್ಸ್ ಪಾರ್ಟಿಗಳನ್ನು ಆಯೋಜಿಸಲು ಕೆಲವರು ತಯಾರಿ ಮಾಡಿಕೊಳ್ಳುತ್ತಿರುವ ಮಾಹಿತಿ ಸಿಸಿಬಿಗೆ ಲಭ್ಯವಾಗಿದೆ.

ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಎಂ.ಜಿ.ರಸ್ತೆ, ಇಂದಿರಾನಗರ, ಕೋರಮಂಗಲ, ವೈಟ್‌ಫೀಲ್ಡ್, ಬಾಣಸವಾಡಿ, ದೇವನಹಳ್ಳಿ ಹಾಗೂ ಇತರೆಡೆ ಹೊಸ ವರ್ಷಾಚರಣೆ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮಗಳ ಜೊತೆಯಲ್ಲೇ ಡ್ರಗ್ಸ್ ಪಾರ್ಟಿಗಳು ನಡೆಯುವ ಬಗ್ಗೆ ಸಿಸಿಬಿ ಮಾಹಿತಿ ಕಲೆಹಾಕಿರುವುದಾಗಿ ಗೊತ್ತಾಗಿದೆ.

ಶುಕ್ರವಾರ ಸಿಸಿಬಿ ಹಿರಿಯ ಅಧಿಕಾರಿಗಳ ಸಭೆ ನಡೆಸಿದ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ, ‘ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು. ಇಂದಿನಿಂದಲೇ ವಿಶೇಷ ತಂಡಗಳನ್ನು ರಚಿಸಿ, ಕಾರ್ಯಾಚರಣೆಗೆ ಇಳಿಸಬೇಕು’ ಎಂದು ಸೂಚಿಸಿದ್ದಾರೆ.

‘ಕೆಲ ಪೆಡ್ಲರ್‌ಗಳು ನಿಗದಿತ ಸ್ಥಳಗಳಲ್ಲಿ ಯುವಜನತೆಯನ್ನು ಸೇರಿಸಿ ಡ್ರಗ್ಸ್ ಪಾರ್ಟಿ ಮಾಡಿಸುವ ಹಾಗೂ ಇದರ ಮೂಲಕ ಅಕ್ರಮವಾಗಿ ಹಣ ಸಂಪಾದಿಸುವ ಸಾಧ್ಯತೆ ಇರುತ್ತದೆ. ಇಂಥ ಸ್ಥಳಗಳ ಬಗ್ಗೆ ಇಂದಿನಿಂದಲೇ ಮಾಹಿತಿ ಕಲೆಹಾಕಬೇಕು. ಅನುಮಾನ ಬಂದವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಬೇಕು. ಹೊಸ ವರ್ಷಾಚರಣೆ ನೆಪದಲ್ಲಿ ಡ್ರಗ್ಸ್ ಮಾರಾಟವಾಗದಂತೆ ಕಟ್ಟೆಚ್ಚರ ವಹಿಸಬೇಕು’ ಎಂದಿದ್ದಾರೆ.

‘ಬ್ರಿಗೇಡ್ ರಸ್ತೆ, ಚರ್ಚ್‌ಸ್ಟ್ರೀಟ್, ಎಂ.ಜಿ.ರಸ್ತೆ ಹಾಗೂ ಸುತ್ತಮುತ್ತ 31 ಪಬ್, 26 ಬಾರ್, 13 ಕ್ಲಬ್ ಹಾಗೂ 71 ಹೋಟೆಲ್‌ಗಳಿವೆ. ಅಲ್ಲೆಲ್ಲ ಹೆಚ್ಚಿನ ಸಿಬ್ಬಂದಿಯನ್ನು ಗಸ್ತು ತಿರುಗಿಸಬೇಕು. ಮಹಿಳೆಯರಿಗೆ ಯಾವುದೇ ತೊಂದರೆಯಾಗದಂತೆ ಭದ್ರತೆ ಒದಗಿಸಬೇಕು’ ಎಂದೂ ತಿಳಿಸಿದ್ದಾರೆ.

ಗೋವಿಂದರಾಜ ನಗರದಲ್ಲಿ ಗಾಂಜಾ: ಇಬ್ಬರ ಬಂಧನ

ಬೆಂಗಳೂರು: ಗೋವಿಂದರಾಜನಗರ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಮಾರುತ್ತಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಮಹಾಲಕ್ಷ್ಮಿ ಬಡಾವಣೆಯ ಸಂಪತ್‌ಕುಮಾರ್ ಅಲಿಯಾಸ್ ಶಂಬಣ್ಣ (53) ಹಾಗೂ ಕಲಬುರಗಿ ತಾಲ್ಲೂಕಿನ ನಂದೂರಿನ ರಾಜ್‌ಕುಮಾರ್ ಅಲಿಯಾಸ್ ರಾಜು (36) ಬಂಧಿತರು. ಇವರಿಂದ ₹ 1.50 ಲಕ್ಷ ಮೌಲ್ಯದ ಗಾಂಜಾ ಹಾಗೂ ₹ 1,500 ನಗದು ಜಪ್ತಿ ಮಾಡಲಾಗಿದ್ದು, ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಪಟ್ಟೇಗಾರಪಾಳ್ಯ ಮುಖ್ಯರಸ್ತೆಯ ದೊಡ್ಡ ಮೋರಿ ಬಳಿ ಡಿ. 21ರಂದು ಸುತ್ತಾಡುತ್ತಿದ್ದ ಆರೋಪಿಗಳು, ಚಿಕ್ಕ ಪೊಟ್ಟಣಗಳಲ್ಲಿ ಗಾಂಜಾ ತುಂಬಿ ಮಾರುತ್ತಿದ್ದರು. ಮಾಹಿತಿ ಬರುತ್ತಿದ್ದಂತೆ ಇಬ್ಬರನ್ನೂ ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡರು’ ಎಂದರು.

‘ಮಹಾರಾಷ್ಟ್ರದ ಪುಣೆಯಿಂದ ಗಾಂಜಾ ತಂದಿದ್ದ ಆರೋಪಿಗಳು, ಅದನ್ನೇ ಪೊಟ್ಟಣಗಳಲ್ಲಿ ತುಂಬಿ ನಗರದಲ್ಲಿ ಮಾರುತ್ತಿದ್ದರು. ಬಂದ ಹಣವನ್ನು ಹಂಚಿಕೊಂಡು ಐಷಾರಾಮಿ ಜೀವನಕ್ಕೆ ಖರ್ಚು ಮಾಡುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

ಬಿಎಂಟಿಸಿ, ಮೆಟ್ರೊದಲ್ಲಿ ಮಾಸ್ಕ್ ಕಡ್ಡಾಯ

ಬೆಂಗಳೂರು: ಬಸ್‌ಗಳಲ್ಲೂ ಮಾಸ್ಕ್ ಧರಿಸುವುದನ್ನು ಬಿಎಂಟಿಸಿ ಕಡ್ಡಾಯಗೊಳಿಸಿದ್ದು, ಈ ಕುರಿತು ಸುತ್ತೋಲೆ ಹೊರಡಿಸಿದೆ.

ಚಾಲನಾ ಸಿಬ್ಬಂದಿ ಒಳಗೊಂಡಂತೆ ಎಲ್ಲಾ ಸಿಬ್ಬಂದಿ ಮತ್ತು ಅಧಿಕಾರಿಗಳ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು, ಅಂತರ ಕಾಪಾಡಿಕೊಳ್ಳಬೇಕು. ಬಸ್‌ನಲ್ಲಿ ಬರುವ ಪ್ರಯಾಣಿಕರು ಕೂಡ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಧರಿಸದಿದ್ದರೆ ಚಾಲನಾ ಸಿಬ್ಬಂದಿ ಮಾಸ್ಕ್ ಕಡ್ಡಾಯದ ಬಗ್ಗೆ ತಿಳಿಸಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಶೀತಜ್ವರ, ಉಸಿರಾಟದ ತೊಂದರೆ ಸೇರಿ ಕೋವಿಡ್ ಲಕ್ಷಣಗಳಿದ್ದರೆ ಸೋಂಕು ಪರೀಕ್ಷೆಗೆ ಒಳಗಾಗಬೇಕು. ವರದಿ ಬರುವ ತನಕ ಮನೆಯಲ್ಲೇ ಪ್ರತ್ಯೇಕವಾಗಿ ಇರಬೇಕು. ಮೊದಲ ಮತ್ತು ಎರಡನೇ ಡೋಸ್ ಪಡೆದವರು ಕಡ್ಡಾಯವಾಗಿ ಮೂರನೇ ಡೋಸ್ ಪಡೆಯಬೇಕು ಎಂದು ಸೂಚಿಸಿದೆ. ಬಿಎಂಟಿಸಿಯ 5 ಸಾವಿರ ಬಸ್‌ಗಳಲ್ಲಿ ನಿತ್ಯ 28 ಲಕ್ಷದಿಂದ 30 ಲಕ್ಷ ಜನ ಪ್ರಯಾಣಿಸುತ್ತಿದ್ದಾರೆ.

ಮೆಟ್ರೊದಲ್ಲೂ ಕಡ್ಡಾಯ: ಮೆಟ್ರೊ ರೈಲಿನಲ್ಲಿ ಈಗಾಗಲೇ ಮಾಸ್ಕ್ ಧರಿಸಿ ಪ್ರಯಾಣಿಸಲು ಸೂಚಿಸಲಾಗಿತ್ತು. ಕೋವಿಡ್ ನಾಲ್ಕನೇ ಅಲೆ ಭೀತಿ ಇರುವುದರಿಂದ ಮಾಸ್ಕ್ ಕಡ್ಡಾಯಗೊಳಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮೆಟ್ರೊದಲ್ಲಿ ನಿತ್ಯ 5 ಲಕ್ಷದಿಂದ 5.50 ಲಕ್ಷ ಜನ ಪ್ರಯಾಣಿಸುತ್ತಿದ್ದಾರೆ. ವಿಶೇಷ ಸಂದರ್ಭಗಳಲ್ಲಿ ಸಂಖ್ಯೆ ಹೆಚ್ಚಾಗಲಿದ್ದು, ಮುನ್ನೆಚ್ಚರಿಕೆ ವಹಿಲಾಗಿದೆ ಎಂದರು.

ಕೆಎಸ್‌ಆರ್‌ಟಿಸಿ ಬಸ್‌ನಲ್ಲೂ ಮಾಸ್ಕ್ ಕಡ್ಡಾಯಗೊಳಿಸುವ ಚಿಂತನೆ ಇದೆ. ಈ ಬಗ್ಗೆ ಇನ್ನೂ ಆದೇಶ ಹೊರಡಿಸಿಲ್ಲ. ಮಾಸ್ಕ್ ಧರಿಸಲು ಚಾಲನಾ ಸಿಬ್ಬಂದಿಗೆ ಸೂಚನೆ ನೀಡಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದರು.

ಬೂಸ್ಟರ್ ಡೋಸ್ ಪಡೆಯಲು ಮನವಿ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಬೂಸ್ಟರ್ ಡೋಸ್ ಪಡೆಯಬೇಕಿರುವ ನಾಗರಿಕರನ್ನು ಸಂಪರ್ಕಿಸಿ ಲಸಿಕೆ ಪಡೆಯಲು ಮನವಿ ಮಾಡಲಾಗುತ್ತದೆ' ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

'ಬೂಸ್ಟರ್ ಡೋಸ್‌ಗೆ ಸಂಬಂಧಿಸಿದಂತೆ ಬಿಬಿಎಂಪಿ ಬಳಿ ಕೋವಿಶೀಲ್ಡ್ ವ್ಯಾಕ್ಸಿನ್ ಲಭ್ಯವಿಲ್ಲ. ಕೋವ್ಯಾಕ್ಸಿನ್ ಲಭ್ಯವಿದೆ. ಇದನ್ನು ಜನವರಿ ಅಂತ್ಯದವರೆಗೂ ಬಳಸಬಹುದಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 8 ಲಕ್ಷದಿಂದ 9 ಲಕ್ಷ ಜನ ಮಾತ್ರ ಕೋವ್ಯಾಕ್ಸಿನ್ ಪಡೆದಿದ್ದು, ನಮಗೆ ಕೋವಿಶೀಲ್ಡ್ ವ್ಯಾಕ್ಸಿನ್ ಅಗತ್ಯವಿದೆ. ಅದನ್ನು ಪೂರೈಸಲು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ನಮ್ಮಲ್ಲಿರುವ ಕೋವ್ಯಾಕ್ಸಿನ್ ಅನ್ನು ಇತರೆ ಜಿಲ್ಲೆಗಳಿಗೆ ಕಳುಹಿಸಲಾಗುತ್ತದೆ' ಎಂದರು.

'ಬಿಬಿಎಂಪಿ ವ್ಯಾಪ್ತಿಯ ಆಸ್ಪತ್ರೆಗಳಲ್ಲಿರುವ ಬೆಡ್, ಐಸಿಯು, ಆಕ್ಸಿಜನ್ ವ್ಯವಸ್ಥೆಗಳ ಬಗ್ಗೆ ಎಲ್ಲ ರೀತಿಯ ಮಾಹಿತಿಯನ್ನು ಸಂಗ್ರಹಿಸಲಾಗಿದ್ದು, ಎಲ್ಲ ರೀತಿಯಲ್ಲೂ ಸಜ್ಜಾಗಲು ಸೂಚಿಸಲಾಗಿದೆ' ಎಂದು ಹೇಳಿದರು.

'ಸರ್ಕಾರ ನೀಡುವ ಎಲ್ಲ ಸೂಚನೆಗಳನ್ನು ಬಿಬಿಎಂಪಿ ಪಾಲಿಸುತ್ತದೆ' ಎಂದರು.

ಕೋವಿನ್ ಪೋರ್ಟಲ್ ಮೂಲಕ ಮುನ್ನೆಚ್ಚರಿಕೆ ಡೋಸ್ ಕಾಯ್ದಿರಿಸುತ್ತಿರುವ ಜನರು

ಕೋವಿಡ್ ಲಸಿಕೆಗೆ ಮತ್ತೆ ಬೇಡಿಕೆ

• ವರುಣ ಹೆಗಡೆ

ಅಂಕಿ-ಅಂಶಗಳು

1.12 ಕೋಟಿ ಈವರೆಗೆ ಮೊದಲ ಡೋಸ್ ಪಡೆದವರು

1.09 ಕೋಟಿ ಎರಡನೇ ಡೋಸ್ ಪಡೆದವರು

16.17 ಲಕ್ಷ ಮೂರನೇ ಡೋಸ್ ಪಡೆದವರು

115 ಸರ್ಕಾರಿ ಲಸಿಕಾ ಕೇಂದ್ರಗಳು

50 ಖಾಸಗಿ ಲಸಿಕಾ ಕೇಂದ್ರಗಳು



ಪ್ರಜಾವಾಣಿ ವಿಶೇಷ

ಬೆಂಗಳೂರು: ಸರ್ಕಾರವು ಕೋವಿಡ್ ಮುನ್ನೆಚ್ಚರಿಕಾ ಕ್ರಮಗಳನ್ನು ಜಾರಿ ಮಾಡುತ್ತಿರುವ ಬೆನ್ನಲ್ಲಿಯೇ ನಗರದಲ್ಲಿ ಲಸಿಕೆಯ ಮುನ್ನೆಚ್ಚರಿಕೆ ಡೋಸ್‌ಗೆ ಬೇಡಿಕೆ ಹೆಚ್ಚಲಾರಂಭಿಸಿದೆ. ಕೋವಿನ್ ಪೋರ್ಟಲ್ ಮೂಲಕ ಲಸಿಕೆ ಕಾಯ್ದಿರಿಸುವವರ ಸಂಖ್ಯೆ ಹೆಚ್ಚಳವಾಗಿದೆ.

ಚೀನಾ ಸೇರಿ ಕೆಲವೆಡೆ ಕೋವಿಡ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಇಲ್ಲಿಯೂ ರೂಪಾಂತರಿ ವೈರಾಣು ಕಾಣಿಸಿಕೊಳ್ಳುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ವೈದ್ಯಕೀಯ ತಜ್ಞರು, ಮುನ್ನೆಚ್ಚರಿಕೆ ಡೋಸ್‌ಗೆ ಶಿಫಾರಸು ಮಾಡಿದ್ದಾರೆ. ಸರ್ಕಾರವೂ ಈ ಬಗ್ಗೆ ಮಾರ್ಗಸೂಚಿ ಹೊರಡಿಸಿದೆ. ನಗರದಲ್ಲಿ ಒಂದು ಕೋಟಿಗೂ ಅಧಿಕ ಮಂದಿ ಎರಡು ಡೋಸ್ ಲಸಿಕೆ ಪಡೆದಿದ್ದರೂ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆಯ ಕಾರಣ ಬಹುತೇಕರು ಮತ್ತೊಂದು ಡೋಸ್ ಲಸಿಕೆ ಪಡೆದಿರಲಿಲ್ಲ. ಈಗ ಮುನ್ನೆಚ್ಚರಿಕಾ ಕ್ರಮವಾಗಿ ಅವಧಿ ಮುಗಿದವರು ಲಸಿಕೆ ಪಡೆದುಕೊಳ್ಳಲು ಆಸಕ್ತಿ ತೋರುತ್ತಿದ್ದಾರೆ.

ನಗರದಲ್ಲಿ 2021ರ ಜ.16ರಿಂದ ಕೋವಿಡ್ ಲಸಿಕೆ ವಿತರಣೆ ಪ್ರಾರಂಭವಾಗಿದೆ. 2022ರ ಜ.10ರಿಂದ ಮೂರನೇ ಡೋಸ್ ವಿತರಿಸಲಾಗುತ್ತಿದೆ. ಎರಡು ಡೋಸ್ ಲಸಿಕೆ ಪಡೆದು ಆರು ತಿಂಗಳಾದವರಿಗೆ ಮುನ್ನೆಚ್ಚರಿಕೆ ಡೋಸ್ ಲಸಿಕೆ ನೀಡಲಾಗುತ್ತಿದೆ. 60 ವರ್ಷಗಳು ಮೇಲ್ಪಟ್ಟವರು, 15ರಿಂದ 18 ವರ್ಷದೊಳಗಿನವರು, ಆರೋಗ್ಯ ಕಾರ್ಯಕರ್ತರು ಹಾಗೂ ಕೋವಿಡ್ ಯೋಧರಿಗೆ ಸರ್ಕಾರಿ ಕೇಂದ್ರಗಳಲ್ಲಿ ಉಚಿತವಾಗಿ ಒದಗಿಸಲಾಗುತ್ತಿದೆ. 18ರಿಂದ 59 ವರ್ಷದವರಿಗೆ ಖಾಸಗಿ ಕೇಂದ್ರಗಳಲ್ಲಿ ಮಾತ್ರ ಮುನ್ನೆಚ್ಚರಿಕೆ ಡೋಸ್‌ಗಳನ್ನು ವಿತರಿಸಲಾಗುತ್ತಿದೆ.

ದರ ನಿಗದಿ: ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್‌ಗಳನ್ನು ಲಸಿಕೆ ತಯಾರಿಕಾ ಕಂಪನಿಗಳು ₹225ಕ್ಕೆ ಖಾಸಗಿ ಆಸ್ಪತ್ರೆಗಳಿಗೆ ಒದಗಿಸುತ್ತಿವೆ. ಸೇವಾ ಶುಲ್ಕ ಸಹಿತ ಒಂದು ಡೋಸ್ ಲಸಿಕೆಗೆ ಆಸ್ಪತ್ರೆಗಳು ₹386 ಪಡೆಯುತ್ತಿವೆ. ಮುನ್ನೆಚ್ಚರಿಕೆ ಡೋಸ್‌ಗೆ ಜನರು ನಿರಾಸಕ್ತಿ ತಾಳಿದ್ದರಿಂದ ಬಹುತೇಕ ಖಾಸಗಿ ಕೇಂದ್ರಗಳಲ್ಲಿ ಲಸಿಕೆಯ ದಾಸ್ತಾನು ಹಾಗೆಯೇ ಉಳಿದಿತ್ತು. ಇದರಿಂದಾಗಿ ಲಸಿಕೆ ವ್ಯರ್ಥವಾಗುವ ಆತಂಕ ಇತ್ತು. ಈಗ ಬೇಡಿಕೆ ಬಂದಿರುವುದರಿಂದ ಲಸಿಕೆ ವ್ಯರ್ಥವಾಗುವುದು ತಪ್ಪಿದೆ.

ಪ್ರಕ್ರಿಯಾ ಆಸ್ಪತ್ರೆ, ಅಪೋಲೊ ಕ್ಲಿನಿಕ್, ನಾರಾಯಣ ಹೃದಯಾಲಯ, ಕೊಲಂಬಿಯಾ ಏಷ್ಯಾ ಆಸ್ಪತ್ರೆ, ಸುಗುಣಾ, ಮಣಿಪಾಲ್, ಫೋರ್ಟಿಸ್ ಸೇರಿ ಪ್ರಮುಖ ಖಾಸಗಿ ಆಸ್ಪತ್ರೆಗಳಲ್ಲಿ ಮುನ್ನೆಚ್ಚರಿಕೆ ಡೋಸ್ ಕಾಯ್ದಿರಿಸುವವರ ಸಂಖ್ಯೆ ಹೆಚ್ಚಳವಾಗುತ್ತಿದ್ದು, ಕೋವಿನ್ ಪೋರ್ಟಲ್‌ನಲ್ಲಿ ಇದೇ 27ರವರೆಗೂ ಬಹುತೇಕ ಸ್ಲಾಟ್‌ಗಳು ಕಾಯ್ದಿರಿಸಲ್ಪಟ್ಟಿವೆ. ಕೆಲ ಆಸ್ಪತ್ರೆಗಳು ಸ್ಲಾಟ್‌ಗಳ ಸಂಖ್ಯೆಯನ್ನು 100ರಿಂದ 500ಕ್ಕೆ ಹೆಚ್ಚಿಸಿವೆ. ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಲಸಿಕೆಗೆ ಬೇಡಿಕೆ ಹೆಚ್ಚಳವಾಗಿದ್ದು, ಗುರುತಿಸಲಾದ ವರ್ಗದವರಿಗೆ ನೀಡಲಾಗುತ್ತಿದೆ.

> **ಕೋವಿಡ್ ಎದುರಿಸಲು ಲಸಿಕೆ ಸಹಕಾರಿ. ಈಗ ಜನರು ಮುನ್ನೆಚ್ಚರಿಕೆ ಡೋಸ್ ಪಡೆಯಲು ಆಸಕ್ತಿ ತೋರುತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಲಸಿಕೆಯ ದಾಸ್ತಾನು ಇದೆ**
> **ಡಾ. ಗೋವಿಂದಯ್ಯ ಯತೀಶ್,** ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಧ್ಯಕ್ಷ

> **ಅವಧಿ ಮುಗಿದರೂ ಬಹುತೇಕರು ಮುನ್ನೆಚ್ಚರಿಕೆ ಡೋಸ್ ಪಡೆದಿರಲಿಲ್ಲ. ಈಗ ಮುನ್ನೆಚ್ಚರಿಕೆ ಡೋಸ್ ಬಗ್ಗೆ ವಿಚಾರಿಸಲಾರಂಭಿಸಿದ್ದಾರೆ**
> **ಡಾ.ಟಿ.ಎಸ್. ರಂಗನಾಥ್,** ವಿಕ್ಟೋರಿಯಾ ಆಸ್ಪತ್ರೆಯ ಲಸಿಕೆ ವಿಭಾಗದ ನೋಡಲ್ ಅಧಿಕಾರಿ

ಕೋವಿಡ್: 27ಕ್ಕೆ ಆಸ್ಪತ್ರೆಗಳಲ್ಲಿ ಸಿದ್ಧತಾ ತಾಲೀಮು

ಪ್ರಜಾವಾಣಿ ವಾರ್ತೆ

ಬೆಂಗಳೂರ: 'ವೈದ್ಯಕೀಯ ಆಮ್ಲಜನಕ ಘಟಕ, ಆಕ್ಸಿಜನ್ ಜನರೇಟರ್ ಒಳಗೊಂಡಂತೆ ಕೋವಿಡ್ ಉಪಕರಣಗಳು, ಸಿಬ್ಬಂದಿ ಸೇರಿ ಅಗತ್ಯ ವ್ಯವಸ್ಥೆಯ ಬಗ್ಗೆ ಇದೇ 27ರಂದು ಆಸ್ಪತ್ರೆಗಳಲ್ಲಿ ಕೋವಿಡ್ ಸಿದ್ಧತಾ ತಾಲೀಮು ನಡೆಸಲಾಗುವುದು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ ಅವರು ಶುಕ್ರವಾರ ನಡೆಸಿದ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಪಾಲ್ಗೊಂಡ ಅವರು, ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

'ಜಗತ್ತಿನಲ್ಲಿ ಹೊಸದಾಗಿ ವರದಿಯಾಗುತ್ತಿರುವ ಕೋವಿಡ್ ಪ್ರಕರಣಗಳಲ್ಲಿ ಶೇ 80ರಷ್ಟು ಪ್ರಕರಣಗಳು ಚೀನಾ, ಜಪಾನ್, ತೈವಾನ್, ಅಮೆರಿಕ ಸೇರಿ 10 ರಾಷ್ಟ್ರಗಳಲ್ಲಿ ವರದಿಯಾಗುತ್ತಿವೆ. ದೇಶದಲ್ಲಿ ಸಕ್ರಿಯ ಪ್ರಕರಣಗಳ ಪ್ರಮಾಣ ಶೇ 0.03 ರಷ್ಟು ಮಾತ್ರ ಇದೆ. ದೇಶದಲ್ಲಿ ಎರಡು ಡೋಸ್ ಲಸಿಕೆ ನೀಡಿರುವುದು ಮುಖ್ಯ ಕಾರಣ' ಎಂದು ಡಾ.ಕೆ. ಸುಧಾಕರ್ ಹೇಳಿದರು.

'ಕೇಂದ್ರ ಸರ್ಕಾರವು ರಾಜ್ಯ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದೆ. ಕೋವಿಡ್ ರೂಪಾಂತರಿ ಬಿಎಫ್07ಆರ್ ವೈರಾಣು ಒಬ್ಬ ವ್ಯಕ್ತಿಯಿಂದ 17-18 ಜನಕ್ಕೆ ಹರಡುವ ಸಾಮರ್ಥ್ಯ ಹೊಂದಿದೆ. ಆದ್ದರಿಂದ ಪರೀಕ್ಷೆ, ಕಣ್ಗಾವಲು ಹೆಚ್ಚಿಸಲು ಕೇಂದ್ರ ಆರೋಗ್ಯ ಸಚಿವಾಲಯ ಸೂಚಿಸಿದೆ. ರಾಜ್ಯದಲ್ಲಿ 10 ಲಕ್ಷ ಡೋಸ್‌ಗಳಷ್ಟು ಲಸಿಕೆಯಿದ್ದು, ಜನರು ಸ್ವಯಂ ಪ್ರೇರಿತರಾಗಿ ಲಸಿಕೆ ತೆಗೆದುಕೊಳ್ಳಬೇಕು' ಎಂದರು.

'ಕೋವಿಡ್ ಪ್ರಕರಣಗಳ ಮಾದರಿಗಳನ್ನು ವೈರಾಣು ವಂಶವಾಹಿ ಸಂರಚನಾ ವಿಶ್ಲೇಷಣೆಗೆ (ಜೀನೋಮ್ ಸೀಕ್ವೆನ್ಸಿಂಗ್) ಕಳುಹಿಸಲಾಗುತ್ತಿದೆ. ಏರ್ ಸುವಿಧಾ ಮೂಲಕ 72 ಗಂಟೆಗಳ ಒಳಗಡೆ ಅಂತರರಾಷ್ಟ್ರೀಯ ಪ್ರಯಾಣಿಕರು ಆರ್‌ಟಿ-ಪಿಸಿಆರ್ ಪರೀಕ್ಷೆಯ ನೆಗೆಟಿವ್ ಪ್ರಮಾಣಪತ್ರವನ್ನು ಅಪ್‌ಲೋಡ್ ಮಾಡಬೇಕು ಎಂಬ ಸಲಹೆಯನ್ನು ಕೇಂದ್ರ ಸರ್ಕಾರಕ್ಕೆ ನೀಡಲಾಗಿದೆ' ಎಂದು ಹೇಳಿದರು.

ಗಡಿ ಸಮಸ್ಯೆ: ಮಧ್ಯಸ್ಥಿಕೆಗೆ ಪ್ರಧಾನಿಗೆ ಮನವಿ

ಬೆಳಗಾವಿ: ಕರ್ನಾಟಕ– ಮಹಾರಾಷ್ಟ್ರದ ಗಡಿ ವಿವಾದ ಬಗೆಹರಿಸಲು ಮಧ್ಯಸ್ಥಿಕೆ ವಹಿಸಬೇಕು ಎಂದು ಕೋರಿ ಮಹಾರಾಷ್ಟ್ರ ಗಡಿ ಸಲಹಾ ಸಮಿತಿ ಅಧ್ಯಕ್ಷ, ಸಂಸದ ಧೈರ್ಯಶೀಲ ಮಾನೆ ಅವರು ಪ್ರಧಾನಿ ಮೋದಿ ಅವರಿಗೆ ಮನವಿ ಮಾಡಿದ್ದಾರೆ.

ಶುಕ್ರವಾರ ನವದೆಹಲಿಯಲ್ಲಿ ಪ್ರಧಾನಿಯನ್ನು ಖುದ್ದು ಭೇಟಿ ಮಾಡಿದ ಅವರು, ಲಿಖಿತ ಮನವಿ ಕೂಡ ಸಲ್ಲಿಸಿದ್ದಾರೆ.

'ಬೊಮ್ಮಾಯಿ ಅವರು ಸಭೆಯ ನಿಯಮ ಉಲ್ಲಂಘಿಸಿದ್ದಾರೆ. ಕೇಂದ್ರ ಗೃಹಮಂತ್ರಿಗಳ ಸೂಚನೆ ಧಿಕ್ಕರಿಸಿದ್ದಾರೆ' ಎಂದೂ ಪತ್ರದಲ್ಲಿ ಹೇಳಿದ್ದಾರೆ.

ಕೈಗಾರಿಕೆಗೆ ₹ 2 ಕೋಟಿ ಪ್ರೋತ್ಸಾಹಧನ ಮೀಸಲು

ಬೆಂಗಳೂರು: 'ಪರಿಸರ ನಿಯಮ ಪಾಲಿಸಿದ ಕೈಗಾರಿಕೆಗಳಿಗೆ ಪ್ರೋತ್ಸಾಹಧನ ನೀಡಲು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿರ್ಧರಿಸಿದೆ' ಎಂದು ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷ ಶಾಂತ್ ಎ. ತಿಮ್ಮಯ್ಯ ಹೇಳಿದರು.

ಚೇಂಬರ್ ಆಫ್ ಇಂಡಸ್ಟ್ರಿ ಅಂಡ್ ಕಾಮರ್ಸ್ (ಬಿಸಿಐಸಿ) ಆಯೋಜಿಸಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

'ಗ್ರೀನ್‌ಕೊ ರೇಟಿಂಗ್ ಪ್ರಮಾಣಪತ್ರ ಪಡೆದುಕೊಳ್ಳುವ ಕೈಗಾರಿಕೆಗಳಿಗೆ ಒಂದು ಬಾರಿಯ ನಗದು ಬಹುಮಾನವಾಗಿ ₹ 50 ಸಾವಿರದಿಂದ ₹ 10 ಲಕ್ಷದ ತನಕ ಪ್ರೋತ್ಸಾಹಧನ ನೀಡಲಾಗುವುದು. ಈ ಬಹುಮಾನ ಕೈಗಾರಿಕೆ ಪಡೆದುಕೊಂಡ ರೇಟಿಂಗ್ ಮತ್ತು ಅದರ ಗಾತ್ರ ಆಧರಿಸಿರುತ್ತದೆ. ಇದಕ್ಕಾಗಿ ಮುಂದಿನ ಹಣಕಾಸು ವರ್ಷದಲ್ಲಿ ₹ 2 ಕೋಟಿ ಮೀಸಲಿಡಲಾಗಿದೆ' ಎಂದು ಮಾಹಿತಿ ನೀಡಿದರು.

'ನೀತಿ ರೂಪಿಸುವವರು ಮತ್ತು ಕೈಗಾರಿಕೆ ನಡುವೆ ನಂಬಿಕೆ ಕೊರತೆಯಿದೆ. ಪರಸ್ಪರ ಅವಲಂಬಿತ ಆಗಿರುವುದರಿಂದ ಉತ್ಪಾದನೆ ಮತ್ತು ಪರಿಸರ ಮಾಲಿನ್ಯಗಳು ಒಂದೇ ನಾಣ್ಯದ ಎರಡು ಮುಖ ಎಂದು ಅರ್ಥಮಾಡಿಕೊಳ್ಳ' ಎಂದರು.

'ನಾನು ಅಧ್ಯಕ್ಷನಾದ ಮೇಲೆ 14 ಜಿಲ್ಲೆಗಳಿಗೆ ಭೇಟಿ ನೀಡಿದ್ದೇನೆ. ಕೈಗಾರಿಕಾ ಕ್ಷೇತ್ರಗಳೊಂದಿಗೆ ನಿರ್ದಿಷ್ಟವಾಗಿ ಸಭೆ ಕೈಗೊಂಡು ಅವರಿಗೆ ಪರಿಸರ ನಿಯಂತ್ರಣ ಕುರಿತಂತೆ ಅವರ ಪಾತ್ರ ಮತ್ತು ಜವಾಬ್ದಾರಿ ಕುರಿತು ಶಿಕ್ಷಣ ನೀಡುವ ಪ್ರಯತ್ನ ನಡೆಸಲಾಗಿದೆ' ಎಂದರು.

ಬಿಸಿಐಸಿಯ ಅಧ್ಯಕ್ಷ ಡಾ.ಎಲ್. ರವೀಂದ್ರನ್ ಮಾತನಾಡಿ, 'ಪ್ರತಿದಿನ ರಾಜ್ಯದಲ್ಲಿ ಅಪಾರ ಪ್ರಮಾಣದ ಕೈಗಾರಿಕಾ ತ್ಯಾಜ್ಯ, ಮುನಿಸಿಪಲ್ ಘನತ್ಯಾಜ್ಯ, ಜೈವಿಕ-ವೈದ್ಯಕೀಯ ತ್ಯಾಜ್ಯ, ಪ್ಲಾಸ್ಟಿಕ್ ತ್ಯಾಜ್ಯ ಮತ್ತು ಇ-ತ್ಯಾಜ್ಯಗಳು ಸೃಷ್ಟಿಯಾಗುತ್ತಿವೆ. ಈ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಕೆಎಸ್‌ಪಿಸಿಬಿಯ ಪ್ರಯತ್ನಗಳು ಶ್ಲಾಘನೀಯ' ಎಂದರು.

ಬಿಬಿಎಂಪಿ ವ್ಯಾಪ್ತಿಯ 1,434 ಕಿ.ಮೀ. ರಸ್ತೆ ಸಮೀಕ್ಷೆ

ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ರಸ್ತೆಗಳ ಸ್ಥಿತಿ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಮುಖ ರಸ್ತೆಗಳ ಸ್ಥಿತಿ ಹಾಗೂ ಅವ್ಯವಸ್ಥೆಗಳನ್ನು ಕೃತಕ ಬುದ್ಧಿಮತ್ತೆಯ (ಎಐ) ತಂತ್ರಜ್ಞಾನದೊಂದಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ದಾಖಲು ಮಾಡುವ ಯೋಜನೆಯನ್ನು ಬಿಬಿಎಂಪಿ ನಗರದಲ್ಲಿ ಜಾರಿಗೆ ತರುತ್ತಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳ ಸ್ಥಿತಿಯನ್ನು 'ಆಟೊಮೇಡೆಟ್ ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಸಿಸ್ಟಮ್' ಮೂಲಕ ಸಮೀಕ್ಷೆ ಮಾಡಲಾಗುತ್ತದೆ. 1,434 ಕಿ.ಮೀ. ರಸ್ತೆಯ ಸರ್ವೆ ನಡೆಸಲು ಉದ್ದೇಶಿಸಲಾಗಿದೆ.

ರಸ್ತೆಯ ಸ್ಥಿತಿ, ಬಿರುಕು, ಗುಂಡಿ, ಹಾಳಾಗಿರುವುದು, ಉಬ್ಬು-ತಗ್ಗುಗಳನ್ನು ಕಂಪ್ಯೂಟರ್ ನೋಟದಲ್ಲಿ ದಾಖಲಿಸಲಾಗುತ್ತದೆ. ಈ ಸರ್ವೆಯಲ್ಲಿ ರಸ್ತೆ ದೀಪ, ಸೂಚನಾ ಫಲಕ, ಮೈಲಿಗಲ್ಲು ಸ್ಥಿತಿಯನ್ನು ಚಿತ್ರ ಹಾಗೂ ವಿಡಿಯೊ ರೂಪದಲ್ಲಿ ದಾಖಲಾಗುತ್ತವೆ.

ಈ ಸರ್ವೆ ಎರಡು ಮಾದರಿಯಲ್ಲಿ ನಡೆಯಲಿದ್ದು, ಮೊದಲನೆಯದ್ದು 'ಕಂಪ್ಯಾರಿಸನ್'. ಅಂದರೆ, ರಸ್ತೆಯ ಮಾಸ್ಟರ್ ವಿಡಿಯೊವನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ಅದನ್ನು ನಿತ್ಯದ ವಿಡಿಯೊಗಳೊಂದಿಗೆ ಹೋಲಿಕೆ ಮಾಡಿ ಯಾವುದಾದರೂ ಲೋಪವಾಗಿದ್ದರೆ ಅದನ್ನು ಸರಿಪಡಿಸಲಾಗುತ್ತದೆ. ಎರಡನೆಯದ್ದು, 'ಐಡೆಂಟಿಫಿಕೇಷನ್'; ಇದಕ್ಕೆ ವಿಡಿಯೊದ ಅಗತ್ಯವಿಲ್ಲ. ರಸ್ತೆ ಗುಂಡಿಗಳು ಸೇರಿ ರಸ್ತೆ ತಡೆಗೋಡೆಗಳು, ರಸ್ತೆ ದೀಪಗಳು, ಸೋಲಾರ್ ದೀಪಗಳು ಹಾಳಾಗಿದ್ದರೆ ಅವುಗಳನ್ನು ಗುರುತಿಸುವುದು.



'ಆಟೊಮೇಡೆಟ್ ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಸಿಸ್ಟಮ್' ಮೂಲಕ ಸಮೀಕ್ಷೆ ನಡೆಸುವ ವಾಹನ

ಪ್ರಾಯೋಗಿಕವಾಗಿ 145 ಕಿ.ಮೀ. ರಸ್ತೆಯಲ್ಲಿ ಈ ವ್ಯವಸ್ಥೆಯಡಿ ಸರ್ವೆ ನಡೆಸಲಾಗಿತ್ತು. ಅದು ಉತ್ತಮ ಫಲಿತಾಂಶ ನೀಡಿದ ಹಿನ್ನೆಲೆಯಲ್ಲಿ ಪ್ರಥಮ ಹಂತದಲ್ಲಿ ಮುಖ್ಯ ಮತ್ತು ಉಪ ಮುಖ್ಯ ರಸ್ತೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ನಂತರ ಎಲ್ಲ ರಸ್ತೆಗಳಿಗೂ ಈ ಯೋಜನೆ ವಿಸ್ತರಿಸುವ ಉದ್ದೇಶವಿದೆ ಎಂದು ಬಿಬಿಎಂಪಿ ಟ್ರಾಫಿಕ್ ಎಂಜಿನಿಯರ್ ಕೋಶದ (ಟಿಇಸಿ) ಎಂಜಿನಿಯರ್‌ಗಳು ತಿಳಿಸಿದರು.

₹88 ಲಕ್ಷ ವೆಚ್ಚದ 'ಆಟೊಮೇಡೆಟ್ ಆರ್ಟಿಫಿಷಿಯಲ್ ಇಂಟಲಿಜೆನ್ಸ್ ಸಿಸ್ಟಮ್' ಮೂಲಕ ಸಮೀಕ್ಷೆ ನಡೆಸಲು ಡಿ.23ರಂದು ಟೆಂಡರ್ ಆಹ್ವಾನಿಸಲಾಗಿದೆ.

ಬಸ್ ಬೇ: ನಗರದಲ್ಲಿ ಬಸ್ ಬೇ ನಿರ್ಮಾಣ ಹಾಗೂ ಅದರ ಸುತ್ತಮುತ್ತಲಿನ ಸೌಲಭ್ಯಗಳನ್ನೂ ಒದಗಿಸಲೂ ಬಿಬಿಎಂಪಿ ಮುಂದಾಗಿದೆ. ನಗರ ಹಲವು ಕಡೆ ಬಸ್ ಬೇಗಳನ್ನು ನಿರ್ಮಿಸಲು ಯೋಜಿಸಲಾಗಿದೆ. ಆರು ತಿಂಗಳಲ್ಲಿ ಈ ಯೋಜನೆಯನ್ನು ಮುಗಿಸುವ ಗಡುವು ನೀಡಲಾಗಿದೆ. ಸುಮಾರು ₹9.5 ಕೋಟಿ ವೆಚ್ಚ ಮಾಡಲು ನಿರ್ಧರಿಸಲಾಗಿದೆ.

25ರಂದು ವೈದ್ಯಕೀಯ ತಪಾಸಣೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಮಲ್ಲಸಂದ್ರದ ಏಕತಾ ಭವನದಲ್ಲಿ (ಬಿಜೆಪಿ ಕಾರ್ಯಾಲಯ) ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಪ್ರಯುಕ್ತ ರಾಮಯ್ಯ ವೈದ್ಯಕೀಯ ಕಾಲೇಜು ಮತ್ತು ನಾರಾಯಣ ನೇತ್ರಾಲಯದ ಆಶ್ರಯದಲ್ಲಿ ದಾಸರಹಳ್ಳಿ ಬಿಜೆಪಿ ಮಂಡಲ ಅಧ್ಯಕ್ಷ ಎನ್. ಲೋಕೇಶ್ ನೇತೃತ್ವದಲ್ಲಿ ಡಿ.25ರಂದು ಬೆಳಿಗ್ಗೆ 9ರಿಂದ 3ರ ತನಕ ವೈದ್ಯಕೀಯ ತಪಾಸಣೆ ಶಿಬಿರ ನಡೆಯಲಿದೆ.

ಶಿಬಿರವನ್ನು ಸಂಸದ ಡಿ.ವಿ. ಸದಾನಂದಗೌಡ ಹಾಗೂ ಮಾಜಿ ಶಾಸಕ ಎಸ್.ಮುನಿರಾಜು ಉದ್ಘಾಟಿಸಲಿದ್ದಾರೆ. ಶಿಬಿರದಲ್ಲಿ ಹತ್ತಕ್ಕೂ ಹೆಚ್ಚು ವಿವಿಧ ರೋಗಗಳ ತಪಾಸಣೆ, ಚಿಕಿತ್ಸೆ ನೀಡಲಾಗುತ್ತಿದ್ದು, ಕಣ್ಣಿನ ದೋಷವುಳ್ಳವರಿಗೆ ಸ್ಥಳದಲ್ಲಿ ಕನ್ನಡಕ ವಿತರಿಸಲಾಗುವುದು. ವೈದ್ಯರ ಸಲಹೆ ಮೇರೆಗೆ ಅಗತ್ಯವಿದ್ದರೆ ಶಸ್ತ್ರಚಿಕಿತ್ಸೆ ಮಾಡಿಸಿ ಅದರ ಸಂಪೂರ್ಣ ವೆಚ್ಚ ನಾವೇ ಭರಿಸುತ್ತೇವೆ ಎಂದು ಲೋಕೇಶ್ ತಿಳಿಸಿದರು.

ಚಿತ್ರಾವಳಿ



ಸರ್ಕಾರಿ ಮಾದರಿ ಕೈಗಾರಿಕಾ ತರಬೇತಿ ಸಂಸ್ಥೆಯು ನಗರದಲ್ಲಿ ಗುರುವಾರ ಹಮ್ಮಿಕೊಂಡ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿಗಳು ವಿಜ್ಞಾನದ ಮಾದರಿಗಳ ಬಗ್ಗೆ ಮಾಹಿತಿ ನೀಡಿದರು – ಪ್ರಜಾವಾಣಿ ಚಿತ್ರ



ಸಂಗೀತನಾದ ಟ್ರಸ್ಟ್ ನಗರದಲ್ಲಿ ಗುರುವಾರ ಆಯೋಜಿಸಿದ 12ನೇ ವಾರ್ಷಿಕ ಸಾಂಸ್ಕೃತಿಕ ಉತ್ಸವದಲ್ಲಿ ಕಲಾವಿದರು ಗಾಯನ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ



ಬೆಂಗಳೂರಿನ ಮೆಡಿಕಲ್ ಕಾಲೇಜ್ ಮತ್ತು ಸಂಶೋಧನಾ ವಿಭಾಗಕ್ಕೆ ಹೇಗಾಯ್ ಈಜೋನ್ ಫಾರ್ಮಾದಿಂದ ವೆಂಟಿಲೇಟರ್ ಮತ್ತು ಮಾಸ್ಕ್ ಅನ್ನು ಸಂಸ್ಥೆಯ ಮುಖ್ಯಸ್ಥೆ ಸುಜಿತ ಸ್ಟೇನಿ ಅವರು ಕಾಲೇಜಿನ ನಿರ್ದೇಶಕ ಮತ್ತು ಡೀನ್ ಕೆ. ರವಿ ಅವರಿಗೆ ಸೋಮವಾರ ಹಸ್ತಾಂತರಿಸಿದರು

ವೈದ್ಯರ ನಿರ್ಲಕ್ಷ್ಯ ಆರೋಪ: ಆಕ್ರೋಶ

ರಾಮನಗರ: ಆಂಬುಲೆನ್ಸ್ ಸಿಬ್ಬಂದಿ ವಿರುದ್ಧ ಕುಟುಂಬದ ಸದಸ್ಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ರಾಮನಗರ: ಅಪಘಾತದಿಂದ ತೀವ್ರವಾಗಿ ಗಾಯಗೊಂಡ ವ್ಯಕ್ತಿಗೆ ವೈದ್ಯರು ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡದೆ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಆರೋಪಿಸಿ ರೋಗಿಯ ಕುಟುಂಬಸ್ಥರು ಇಲ್ಲಿನ ಜಿಲ್ಲಾಸ್ಪತ್ರೆ ಆವರಣದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ಮಾಯಗಾನಹಳ್ಳಿ ಬಳಿ ಶುಕ್ರವಾರ ಕೇತೋಹಳ್ಳಿ ಗ್ರಾಮದ ರೇಣುಕಪ್ಪ (58) ಎಂಬುವರಿಗೆ ಕಾರು ಡಿಕ್ಕಿಯಾಗಿ ಅಪಘಾತ ಸಂಭವಿಸಿತ್ತು. ರಕ್ತದ ಮಡುವಿನಲ್ಲಿ ಬಿದ್ದಿದ್ದ ರೇಣುಕಪ್ಪ ಅವರನ್ನು ಆಸ್ಪತ್ರೆಗೆ ದಾಖಲಿಸಲು ಸ್ಥಳೀಯರು 108 ಆ್ಯಂಬುಲೆನ್ಸ್‌ಗೆ ಕರೆ ಮಾಡಿದ್ದರು. ಸ್ಥಳಕ್ಕೆ ಧಾವಿಸಿದ ಆಂಬುಲೆನ್ಸ್ ಸಿಬ್ಬಂದಿ, ವ್ಯಕ್ತಿ ಈಗಾಗಲೇ ಮೃತಪಟ್ಟಿದ್ದಾರೆ ಎನ್ನುವ ಕಾರಣಕ್ಕೆ ಆಸ್ಪತ್ರೆಗೆ ಕೊಂಡೊಯ್ಯಲಿಲ್ಲ ಎಂದು ಕುಟುಂಬ ಆರೋಪಿಸಿದೆ.



ಶವವನ್ನು ಶವಾಗಾರದಿಂದ ಜಿಲ್ಲಾಸ್ಪತ್ರೆ ಮುಂಭಾಗಕ್ಕೆ ತಂದ ಸಂಬಂಧಿಕರು

ನಂತರ ಕುಟುಂಬಸ್ಥರು ಖಾಸಗಿ ಆ್ಯಂಬುಲೆನ್ಸ್‌ನಲ್ಲಿ ರೇಣುಕಪ್ಪನನ್ನು ಜಿಲ್ಲಾಸ್ಪತ್ರೆಗೆ ಕರೆತಂದಿದ್ದಾರೆ. ನಂತರವೂ ಸುಮಾರು ಒಂದೂವರೆ ಗಂಟೆ ಅವರಿಗೆ ಚಿಕಿತ್ಸೆ ನೀಡದೆ ವೈದ್ಯರು ನಿರ್ಲಕ್ಷ್ಯ ತೋರಿಸಿದ್ದಾರೆ. ರೋಗಿ ಬದುಕಿದ್ದರೂ ಚಿಕಿತ್ಸೆ ನೀಡುತ್ತಿಲ್ಲ ಎಂದು ಸಂಬಂಧಿಕರು ದೂರಿದರು.

ಜನರ ಕೂಗಾಟ ಹೆಚ್ಚಾದ ಬಳಿಕ ವೈದ್ಯರು ರೇಣುಕಪ್ಪ ಅವರ ತಪಾಸಣೆ ನಡೆಸಿ, ಈಗಾಗಲೇ ಮೃತಪಟ್ಟಿರುವುದಾಗಿ ಘೋಷಿಸಿದರು. ಮರಣೋತ್ತರ ಪರೀಕ್ಷೆಗಾಗಿ ಶವವನ್ನು ಆಸ್ಪತ್ರೆ ಸಿಬ್ಬಂದಿ ಶವಾಗಾರಕ್ಕೆ ಸಾಗಿಸಿದರು.

ವೈದ್ಯರು ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡದ ಕಾರಣದಿಂದಲೇ ಸಾವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಸಂಬಂಧಿಕರು, ಶವವನ್ನು ಜಿಲ್ಲಾಸ್ಪತ್ರೆ ಮುಂಭಾಗಕ್ಕೆ ತಂದು ಪ್ರತಿಭಟಿಸಿದರು.

ಸ್ಥಳಕ್ಕೆ ಜಿಲ್ಲಾಧಿಕಾರಿ, ಜಿ.ಪಂ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬರಬೇಕು ಎಂದು ಪ್ರತಿಭಟನಕಾರರು ಪಟ್ಟು ಹಿಡಿದರು. ಪೊಲೀಸರು ಕುಟುಂಬದವನ್ನು ಮನವೊಲಿಸಿ ಶವವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದರು.

> **ಆಸ್ಪತ್ರೆಗೆ ತಂದಾಗಲೇ ರೋಗಿ ಮೃತಪಟ್ಟಿದ್ದರು. ಆಂಬುಲೆನ್ಸ್ ಸಿಬ್ಬಂದಿ ಸ್ಥಳಕ್ಕೆ ತೆರಳಿ ರೋಗಿಯನ್ನು ಕರೆತರದೇ ವಾಪಸ್ ಬಂದಿದ್ದರೆ ಅವರ ವಿರುದ್ಧ ಕ್ರಮ ಜರುಗಿಸಲಾಗುವುದು**
> **ಡಾ. ಜಿ.ಎಲ್. ಪದ್ಮಾ,** ಜಿಲ್ಲಾ ಶಸ್ತ್ರಚಿಕಿತ್ಸಕಿ

ಆನೇಕಲ್: ಆಟೊ ಚಾಲಕ ಅಪಹರಣ ದೂರು ದಾಖಲು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಆನೇಕಲ್: ತಾಲ್ಲೂಕಿನ ಹಾರಗದ್ದೆ ಬಳಿ ಆನ್‌ಲೈನ್ ಮೂಲಕ ಬಾಡಿಗೆಗೆ ಬುಕ್ ಮಾಡಿದ್ದ ಆಟೊ ಮತ್ತು ಅದರ ಚಾಲಕ ನಾಪತ್ತೆಯಾಗಿರುವ ಸಂಬಂಧ ಜಿಗಣಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೌರೇನಹಳ್ಳಿಯ ಮೌಲಾ (27) ನಾಪತ್ತೆಯಾಗಿರುವ ಆಟೊ ಚಾಲಕ.

ಗುರುವಾರ ಸಂಜೆ 7ಗಂಟೆಗೆ ವ್ಯಕ್ತಿಯೊಬ್ಬರು ಅವರ ಆಟೊವನ್ನು ಆನ್‌ಲೈನ್ ಮೂಲಕ ಬುಕ್ ಮಾಡಿದ್ದಾರೆ. ಹಾರಗದ್ದೆಯಿಂದ ಬೆಂಗಳೂರಿಗೆ ಬಾಡಿಗೆ ಇದೆ ಎಂದು ಮನೆಯವರಿಗೆ ಹೇಳಿ ಮೌಲಾ ಹೋಗಿದ್ದಾರೆ. ರಾತ್ರಿ 12ಕ್ಕೆ ಮನೆಗೆ ಕರೆ ಮಾಡಿದ ಅವರು, ಆಟೊ ಅಪಘಾತಕ್ಕೀಡಾಗಿದ್ದು ತಕ್ಷಣ ₹ 1 ಲಕ್ಷ ಕಳುಹಿಸಿ ಕೊಡಿ ಎಂದು ಹೇಳಿದ್ದಾರೆ. ಗಾಬರಿಗೊಂಡ ಕುಟುಂಬದವರು ಘಟನೆ ಬಗ್ಗೆ ವಿಚಾರಿಸಿದಾಗ ಹೆಬ್ಬಾಳದ ಆಸ್ಪತ್ರೆಯಲ್ಲಿದ್ದು ಕೂಡಲೇ ಹಣ ಕಳುಹಿಸಿ ಎಂದಷ್ಟೇ ತಿಳಿಸಿದ್ದಾರೆ.

ಕುಟುಂಬದವರು ಹಣ ಹೊಂದಿಸಿ ಮೌಲಾ ಅವರ ಬ್ಯಾಂಕ್ ಖಾತೆಗೆ ಜಮೆ ಮಾಡಿದ್ದಾರೆ. ರಾತ್ರಿ ಮತ್ತೆ ಕರೆ ಮಾಡಿದಾಗ ಅವರ ಮೊಬೈಲ್ ಸ್ವಿಚ್‌ಆಫ್ ಆಗಿತ್ತು. ಭಯಗೊಂಡ ಕುಟುಂಬದವರು ಶುಕ್ರವಾರ ಬೆಳಿಗ್ಗೆ ಬೆಂಗಳೂರಿನ ಆಸ್ಪತ್ರೆಗಳನ್ನು ಸುತ್ತಾಡಿದರೂ ಮಾಹಿತಿ ದೊರೆಕಿಲ್ಲ. ಆತಂಕಗೊಂಡ ಅವರ ಪತ್ನಿ ಗನಿಬೇಗ್ ಜಿಗಣಿ ಪೊಲೀಸರಿಗೆ ದೂರು ನೀಡಿದ್ದಾರೆ.

ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಬನ್ನೇರುಘಟ್ಟ ಠಾಣೆ ವ್ಯಾಪ್ತಿಯಲ್ಲೂ ವಾರದ ಹಿಂದೆ ಇದೇ ಮಾದರಿಯ ಎರಡು ಪ್ರಕರಣ ದಾಖಲಾಗಿವೆ.

ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷ: ನವಣೆ, ಸಾಮೆಗೆ ಮೌಲ್ಯವರ್ಧನೆ

ಕುಕ್ಕೀಸ್, ಬಿಸ್ಕತ್ ರೂಪ ಪಡೆದ ಸಿರಿಧಾನ್ಯ

• ಆದಿತ್ಯ ಕೆ.ಎ.

ಬೆಂಗಳೂರು: ಸಿರಿಧಾನ್ಯಗಳ ಮಹತ್ವ, ಅವುಗಳ ಬಳಕೆಯ ಪ್ರಯೋಜನ ತಿಳಿಸಲು 2023 ಅನ್ನು 'ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷ'ವೆಂದು ಘೋಷಿಸಲಾಗಿದ್ದು, ಇದರ ಭಾಗವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 'ಮೌಲ್ಯವರ್ಧನಾ ಕೇಂದ್ರ' ಸಿರಿಧಾನ್ಯಗಳನ್ನೇ ಬಳಸಿ ಎರಡು ಪದಾರ್ಥ ಅಭಿವೃದ್ಧಿಗೊಳಿಸಿ ಮಾರುಕಟ್ಟೆಗೆ ಪರಿಚಯಿಸಿದೆ.

ನವಣೆ ಬಳಸಿ ಗ್ಲುಟಿನ್ ಮುಕ್ತ 'ಕುಕ್ಕೀಸ್' ಹಾಗೂ ಸಾಮೆ ಬಳಸಿ ಕಡಿಮೆ ಕೊಬ್ಬಿನ ಅಂಶವುಳ್ಳ 'ಬಿಸ್ಕತ್' ಅಭಿವೃದ್ಧಿ ಪಡಿಸಲಾಗಿದೆ.

ವಿಶ್ವವಿದ್ಯಾಲಯದ 'ಬೇಕರಿ ತರಬೇತಿ ಹಾಗೂ ಮೌಲ್ಯವರ್ಧನ ಕೇಂದ್ರ'ದಲ್ಲಿ ವರ್ಷವಿಡೀ ಸಿರಿಧಾನ್ಯಗಳಾದ ರಾಗಿ, ಸಜ್ಜೆ, ನವಣೆ, ಬುರುಗ, ಸಾಮೆ, ಹಾರಕ, ಊದಲು ಹಾಗೂ ಕೊರಲೆ ಬಳಸಿ ಬೇರೆ ಪದಾರ್ಥ ತಯಾರಿಸಲು ತಜ್ಞರು ಸಿದ್ಧತೆ ನಡೆಸಿದ್ದಾರೆ. ಈ ವಿಶೇಷ ವರ್ಷಾಚರಣೆಯನ್ನೇ ಬಳಸಿಕೊಂಡು ಸಿರಿಧಾನ್ಯಕ್ಕೆ ಆಕರ್ಷಣೆ ತರಲು, ಸಿರಿಧಾನ್ಯ ಬಳಕೆ ಹೆಚ್ಚಿಸಲು ಕೃಷಿ ವಿವಿಯು ಮುಂದಾಗಿದೆ.




ಸಿರಿಧಾನ್ಯದ ಕುಕ್ಕೀಸ್



ಸಿರಿಧಾನ್ಯದ ಬಿಸ್ಕತ್

ಸಿರಿಧಾನ್ಯಗಳ ಜತೆಗೆ ಶುಂಠಿ ಹಾಗೂ ಚಕ್ಕೆಗಳನ್ನು ಬಳಸಿ ಆರೋಗ್ಯಕರ, ಪೌಷ್ಟಿಕ ಹಾಗೂ ಔಷಧೀಯ ಗುಣವುಳ್ಳ ಇನ್ನಷ್ಟು ಪದಾರ್ಥ, ಪೇಯ ತಯಾರಿಸುವ ಪ್ರಕ್ರಿಯೆ ನಡೆಯುತ್ತಿದೆ. ಮುಂದಿನ ಎರಡು ತಿಂಗಳಲ್ಲಿ ಈ ಪದಾರ್ಥಗಳೂ ಜನರಿಗೆ ಲಭ್ಯವಾಗಲಿವೆ ಎನ್ನುತ್ತಾರೆ ವಿವಿ ತಜ್ಞರು.

ವಿಶೇಷತೆ ಏನು?: 'ಬೇಕರಿ ಪದಾರ್ಥಗಳಲ್ಲಿ ಮೈದಾ ಬಳಕೆ ಸಾಮಾನ್ಯ. ಮೈದಾ ಹಾಗೂ ಗೋಧಿ ಕೆಲವರ ದೇಹಕ್ಕೆ ರುಚಿಸುವುದಿಲ್ಲ. ಮೈದಾ ಹಾಕಿದ ಪದಾರ್ಥ ಸೇವಿಸಿದರೆ ಕೆಲವರ ಆರೋಗ್ಯದಲ್ಲೂ ವ್ಯತ್ಯಯವಾಗಲಿದೆ. ನಾವು ಪೂರ್ಣ ಪ್ರಮಾಣದಲ್ಲಿ ಮೈದಾ ರಹಿತ ಪದಾರ್ಥ ತಯಾರಿಸಿದ್ದೇವೆ. ರುಚಿಗೇನೂ ಕೊರತೆಯಾಗಿಲ್ಲ. ಆರೋಗ್ಯಕ್ಕೂ ಪೂರಕ. ಶಕ್ತಿ, ಪ್ರೊಟೀನ್ ಸಹ ಸಿಗಲಿದೆ' ಎಂದು 'ಪ್ರಜಾವಾಣಿ'ಗೆ ಕೇಂದ್ರದ ಸಹಾಯಕ ಪ್ರಾಧ್ಯಾಪಕಿ ಡಾ.ಮಮತಾ ತಿಳಿಸಿದರು.



ಮಮತಾ

'ಗ್ಲುಟಿನ್‌ಮುಕ್ತ ಕುಕ್ಕೀಸ್ ಗ್ಲುಟಿನ್ ಅಲರ್ಜಿ, ಅಸಹಿಷ್ಣುತೆ, ಸೆಲಿಯಾಕ್ ಕಾಯಿಲೆಯವರಿಗೆ ಸೂಕ್ತ. ನಾರು, ಪ್ರೊಟೀನ್ ಸಹ ಹೆಚ್ಚಿರುತ್ತದೆ. ಕುಕ್ಕೀಸ್‌ಗೆ ನವಣೆ ಪುಡಿ, ಸ್ವಲ್ಪ ಸಕ್ಕರೆ ಅಂಶ, ಹಾಲಿನ ಪುಡಿ ಬೆರೆಸಿ ತಯಾರಿಸಲಾಗಿದೆ. ಸಾಮೆ ಬಿಸ್ಕತ್ ಗ್ಲುಟಿನ್ ಮುಕ್ತವಾಗಿವೆ. ಇದರಲ್ಲಿ ಕಡಿಮೆ ಕೊಬ್ಬಿನಾಂಶ ಇರಲಿದೆ. ಸಂಶೋಧನಾ ವಿದ್ಯಾರ್ಥಿನಿ ಸೌಮ್ಯಾ ಹಿರೇಗೌಡ ಈ ಪದಾರ್ಥಗಳ ತಯಾರಿಕೆಯಲ್ಲಿ ಕೈಜೋಡಿಸಿದ್ದರು' ಎಂದು ಮಮತಾ ಹೇಳಿದರು.

ಕಡಿಮೆ ಬೆಲೆಗೆ ಮಾರಾಟ

ಬಿಸ್ಕತ್ ಅನ್ನು ಎಲ್ಲ ವಯೋಮಾನದ ಜನರು ಸೇವಿಸುತ್ತಾರೆ. 'ಪೌಷ್ಟಿಕ ಧಾನ್ಯ'ಗಳೆಂದು ಕರೆಯಲಾಗುವ ಸಿರಿಧಾನ್ಯದಿಂದ ತಯಾರಿಸಿದ ಪದಾರ್ಥಗಳು ಎಲ್ಲರಿಗೂ ಲಭ್ಯವಾಗಬೇಕು ಎಂಬ ಕಾರಣಕ್ಕೆ ಅದರ ತಂತ್ರಜ್ಞಾನವನ್ನು ಮಾರಾಟ ಮಾಡಲಾಗಿದೆ. ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಕುಲಂಬಿ ಗ್ರಾಮದ ರಘು ಅವರ ಜತೆಗೆ ತಂತ್ರಜ್ಞಾನ ಮಾರಾಟ ಒಪ್ಪಂದ ಮಾಡಿಕೊಳ್ಳಲಾಗಿದೆ.

'ಕೇಂದ್ರವು ಅಭಿವೃದ್ಧಿ ಪಡಿಸಿದ ತಂತ್ರಜ್ಞಾನವನ್ನು ಕಡಿಮೆ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ₹ 10 ಸಾವಿರ ಜೊತೆಗೆ ಜಿಎಸ್‌ಟಿ ನೀಡಿದರೆ ಸಣ್ಣ ಉದ್ದಿಮೆದಾರರಿಗೆ ತಂತ್ರಜ್ಞಾನ ನೀಡಲಾಗುವುದು. ಜತೆಗೆ ತರಬೇತಿ ನೀಡಲಾಗುವುದು' ಎಂದು ಮಮತಾ ಅವರು ಹೇಳುತ್ತಾರೆ.

ರಾಜ್ಯದಲ್ಲೂ 'ಸಿರಿಧಾನ್ಯ ಮೇಳ'

ಜನವರಿಯಲ್ಲಿ ರಾಜ್ಯದಲ್ಲಿ ಸಿರಿಧಾನ್ಯಗಳ ಮೇಳ ಆಯೋಜಿಸಲು ಸರ್ಕಾರ ಚಿಂತಿಸಿದೆ. ನವೆಂಬರ್‌ನಲ್ಲಿ ನಡೆದಿದ್ದ ಕೃಷಿ ಮೇಳದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ವಿಷಯ ತಿಳಿಸಿದ್ದರು. ಮೇಳ ನಡೆಯುವ ಸ್ಥಳ ಇನ್ನೂ ಅಂತಿಮವಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ರಂಗಸ್ಥಳದಲ್ಲೇ ಕುಸಿದುಬಿದ್ದು ಗುರುವಪ್ಪ ಸಾವು

ಮೂಲ್ಕಿ (ದಕ್ಷಿಣ ಕನ್ನಡ): ಕಟೀಲು ದುರ್ಗಾಪರಮೇಶ್ವರಿ ಮೇಳದ ಕಲಾವಿದ ಗುರುವಪ್ಪ ಬಾಯಾರು (58) ಗುರುವಾರ ರಾತ್ರಿ ಯಕ್ಷಗಾನದ ರಂಗಸ್ಥಳದಲ್ಲೇ ಕುಸಿದುಬಿದ್ದು ಮೃತಪಟ್ಟಿದ್ದಾರೆ.



ಕಟೀಲಿನ ಸರಸ್ವತಿ ಸದನದಲ್ಲಿ ಕಟೀಲು ನಾಲ್ಕನೇ ಮೇಳದ ಯಕ್ಷಗಾನ ಬಯಲಾಟದ 'ತ್ರಿಜನ್ಮ ಮೋಕ್ಷ' ಪ್ರಸಂಗ ನಡೆಯುತಿತ್ತು. ಬಾಯಾರು ಅವರು ಶಿಶುಪಾಲನ ಪಾತ್ರ ನಿರ್ವಹಿಸಿದ್ದರು. ಪ್ರಸಂಗದ ಕೊನೆಯ ಭಾಗ ಪ್ರದರ್ಶನಗೊಳ್ಳುತ್ತಿತ್ತು. ಆ ಸಂದರ್ಭದಲ್ಲಿ ರಂಗಸ್ಥಳದಲ್ಲಿ ನಿಂತಿದ್ದ ಅವರು ಕೆಳಗೆ ಕುಸಿದುಬಿದ್ದರು. ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಅಷ್ಟರಲ್ಲೇ ಅವರು ಕೊನೆಯುಸಿರೆಳೆದಿದ್ದರು.

ಗಣೇಶಪುರ, ಸಸಿಹಿತ್ಲು, ಬಪ್ಪನಾಡು ಸೇರಿದಂತೆ ಹಲವು ಮೇಳಗಳಲ್ಲಿ ತಿರುಗಾಟ ನಡೆಸಿದ್ದ ಅವರು, 2013ರಲ್ಲಿ ಕಟೀಲು ಮೇಳಕ್ಕೆ ಸೇರಿದ್ದರು. 'ಅಷ್ಟಮಂಗಲ' ಸೇರಿದಂತೆ ಹಲವು ಪ್ರಸಂಗ ರಚಿಸಿದ್ದರು.

ಎರಡು ವರ್ಷಗಳಿಂದ ಸ್ಥಗಿತಗೊಂಡ ಬ್ಯಾಗೇಜ್ ಸ್ಕ್ಯಾನರ್, ಲೋಹಶೋಧಕ: ನಡೆಯದ ತಪಾಸಣೆ

ವಿಧಾನಸೌಧ: ಮೂಲೆ ಸೇರಿದ ಭದ್ರತಾ ಪರಿಕರ

• ಖಲೀಲಅಹ್ಮದ ಶೇಖ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯದ ಶಕ್ತಿ ಕೇಂದ್ರ ವಿಧಾನಸೌಧಕ್ಕೆ ಅಳವಡಿಸಿದ್ದ ಭದ್ರತಾ ಸಲಕರಣೆಗಳು ಸ್ಥಗಿತಗೊಂಡು ಮೂಲೆ ಸೇರಿದ್ದು, ಎರಡು ವರ್ಷಗಳಿಂದ ದೂಳು ತಿನ್ನುತ್ತಿವೆ. ನಿತ್ಯ ವಿಧಾನಸೌಧಕ್ಕೆ ಬರುವ ನೌಕರರು ಮತ್ತು ಸಾರ್ವಜನಿಕರನ್ನು ತಪಾಸಣೆ ಮಾಡದೇ ಪ್ರವೇಶ ಕಲ್ಪಿಸುತ್ತಿದ್ದಾರೆ.

ವಿಧಾನಸೌಧಕ್ಕೆ ಪ್ರವೇಶ ಕಲ್ಪಿಸುವ ನಾಲ್ಕು ದ್ವಾರಗಳಲ್ಲಿ ಲೋಹ ಶೋಧಕ (ಮೆಟಲ್ ಡಿಟೇಕ್ಟರ್) ಹಾಗೂ ಬ್ಯಾಗೇಜ್ ಸ್ಕ್ಯಾನರ್‌ಗಳನ್ನು ಅಳವಡಿಸಲಾಗಿದ್ದು, ಇವುಗಳು ಹಲವು ದಿನಗಳಿಂದ ಕಾರ್ಯನಿರ್ವಹಿಸುತ್ತಿಲ್ಲ. ವಿಧಾನಸೌಧಕ್ಕೆ ನಿತ್ಯ ಬರುವ ಸಾರ್ವಜನಿಕರ ಲಗೇಜ್ ತಪಾಸಣೆಗೆ ಅಳವಡಿಸಿದ್ದ ಲೋಹ ಶೋಧಕಗಳು, ಸ್ಕ್ಯಾನರ್ ಯಂತ್ರಗಳು ಕಣ್ಮರೆಯಾಗಿವೆ. ಬ್ಯಾಗ್, ಸೂಟ್‌ಕೇಸ್ ಸಮೇತ ಬರುವ ನೌಕರರು ಮತ್ತು ಸಾರ್ವಜನಿಕರಿಗೆ ಯಾವುದೇ ತಪಾಸಣೆಗೆ ಒಳಪಡಿಸದೇ ನೇರವಾಗಿ ವಿಧಾನಸೌಧಕ್ಕೆ ಪ್ರವೇಶ ಕಲ್ಪಿಸುತ್ತಿರುವುದು ಭದ್ರತಾ ವೈಫಲ್ಯವೆಂದು ಸಾರ್ವಜನಿಕರು ದೂರುತ್ತಿದ್ದಾರೆ.

ವಿಧಾನಸೌಧ ಹಾಗೂ ವಿಕಾಸಸೌಧಕ್ಕೆ ಪ್ರತಿದಿನ ಒಂದು ಲಕ್ಷಕ್ಕೂ ಹೆಚ್ಚು ಜನ ಬಂದು ಹೋಗುತ್ತಾರೆ. ಭದ್ರತೆಗೆ ಇರುವ ಪೊಲೀಸರು, ಅಷ್ಟೂ ಜನರ ಮೇಲೆ ನಿಗಾ ಇಡಲು ಸಾಧ್ಯವಿಲ್ಲ. ಪ್ರತಿದಿನ 2,000ಕ್ಕೂ ಹೆಚ್ಚು ವಾಹನಗಳು ವಿಧಾನಸೌಧದ ಆವರಣಕ್ಕೆ ಬಂದು ಹೋಗುತ್ತವೆ. ಅವುಗಳನ್ನೆಲ್ಲ ತಪಾಸಣೆ ನಡೆಸುವುದರಿಂದ ಸಿಬ್ಬಂದಿಯ ಶ್ರಮ ಹೆಚ್ಚಾಗುತ್ತಿದೆ. ಆಧುನಿಕ ಉಪಕರಣಗಳಿದ್ದರೂ ಇಲ್ಲದಂಥ ಪರಿಸ್ಥಿತಿ ನಿರ್ಮಾಣವಾಗಿದೆ.

‘ವಿಧಾನಸೌಧದ ನಾಲ್ಕು ಪ್ರವೇಶ ದ್ವಾರಗಳಲ್ಲಿರುವ ಬ್ಯಾಗೇಜ್ ಸ್ಕ್ಯಾನರ್ ಕಾರ್ಯನಿರ್ವಹಿಸುತ್ತಿಲ್ಲ. ಕೆಲವೊಂದು ಲೋಹ ಶೋಧಕಗಳು ಮಾತ್ರ ಕೆಲಸ ಮಾಡುತ್ತಿವೆ. ಭದ್ರತೆಗೆ 80 ಜನ ಪೊಲೀಸ್ ಸಿಬ್ಬಂದಿ ನಾಲ್ಕು ಪಾಳಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಹಳೆಯ ಕಾಲದ 20–30 ಸಿ.ಸಿ.ಟಿ.ವಿ ಕ್ಯಾಮೆರಾಗಳಿದ್ದು, ಅವುಗಳೂ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಆಧುನಿ ಉಪಕರಣಗಳ ಬಳಕೆ ಗೊತ್ತಿಲ್ಲದ ನುರಿತ ಸಿಬ್ಬಂದಿ ಕೊರತೆ ಇದೆ’ ಎಂದು ಭದ್ರತಾ ಇಲಾಖೆಯ ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

ಇತ್ತೀಚೆಗೆ ಮಂಗಳೂರಿನಲ್ಲಿ ಪ್ರೆಷರ್ ಕುಕ್ಕರ್ ಸ್ಫೋಟದಿಂದ ಇಡೀ ರಾಜ್ಯವೇ ಬೆಚ್ಚಿಬಿದ್ದಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಸಾರ್ವಜನಿಕ ಪ್ರದೇಶಗಳಾದ ರೈಲು ನಿಲ್ದಾಣ, ಬೆಂಗಳೂರು ಮೆಟ್ರೊ, ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ನಿಲ್ದಾಣ, ಉನ್ನತ ಶಿಕ್ಷಣ ಸಂಸ್ಥೆಗಳು, ಮಾಲ್, ಮಾರುಕಟ್ಟೆ ಹಾಗೂ ಸಾರ್ವಜನಿಕರು ಸೇರುವ ಸ್ಥಳಗಳಲ್ಲಿ ಭದ್ರತೆಗೆ ಹೆಚ್ಚು ಒತ್ತು ನೀಡಬೇಕು’ ಎಂದು ಸೂಚಿಸಿದ್ದರು. ಆದರೆ ರಾಜ್ಯದ ಶಕ್ತಿ ಕೇಂದ್ರ ವಿಧಾನಸೌಧಕ್ಕೆ ಸರಿಯಾದ ಭದ್ರತೆ ಇಲ್ಲವಾಗಿದೆ.

ಭದ್ರತಾ ಸಲಕರಣೆಗಳ ಸ್ಥಿತಿ ಬಗ್ಗೆ ಪ್ರತಿಕ್ರಿಯೆ ನೀಡಲು ವಿಧಾನಸೌಧದ ಭದ್ರತಾ ವಿಭಾಗದ ಡಿಸಿಪಿ ನಿರಾಕರಿಸಿದರು.


ಬೆಂಗಳೂರಿನ ವಿಧಾನಸೌಧದಲ್ಲಿರುವ (ಲೋಹ ಶೋಧಕ) ಬ್ಯಾಗೇಜ್ ಸ್ಕ್ಯಾನರ್ ಕೆಟ್ಟು ಮೂಲೆ ಸೇರಿ ದೂಳು ತಿನ್ನುತ್ತಿರುವುದು —ಪ್ರಜಾವಾಣಿ ಚಿತ್ರ/ ರಂಜು ಪಿ

ಕ್ರಿಸ್‌ಮಸ್ ರಜೆ: ಬಸ್ ಹತ್ತಲು ನೂಕುನುಗ್ಗಲು


ಬೆಂಗಳೂರು: ಕ್ರಿಸ್‌ಮಸ್ ಸಾಲು-ಸಾಲು ರಜೆ ಇರುವುದರಿಂದ ಹೊರ ಊರುಗಳತ್ತ ಹೊರಟಿದ್ದ ಜನ ಶುಕ್ರವಾರ ರಾತ್ರಿ ನೂಕು ನುಗ್ಗಲು ನಲ್ಲಿ ಬಸ್ ಹತ್ತಿ ಪ್ರಯಾಣಿಸಿದರು.

ಮೆಜೆಸ್ಟಿಕ್ ಕೆಂಪೇಗೌಡ ಬಸ್ ನಿಲ್ದಾಣ ಮತ್ತು ಮೈಸೂರು ರಸ್ತೆ ಸ್ಯಾಟಲೈಟ್ ಬಸ್ ನಿಲ್ದಾಣಗಳಲ್ಲಿ ಬಸ್ ಗಳಿಗಾಗಿ ಜನ ಪರದಾಡಿದರು.

ಹೊರ ಊರುಗಳಿಗೆ ತೆರಳಲು ಮುಂಗಡ ಟಿಕೆಟ್ ಕಾಯ್ದಿರಿಸದೆ ನೇರವಾಗಿ ಬಸ್ ಹತ್ತಲು ಬಂದವರು ಪರದಾಡಬೇಕಾಯಿತು. ಸ್ಯಾಟಲೈಟ್ ನಿಲ್ದಾಣದಲ್ಲಿ ಮೈಸೂರು ಕಡೆಗೆ ಬಸ್ ಗಳಿಲ್ಲದೆ ರೋಸಿಹೋದ ಜನ ನಿಲ್ದಾಣದ ಅಧಿಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ವಾಗ್ವಾದ, ಜಗಳಕ್ಕೂ ಇದು ಕಾರಣವಾಯಿತು.

ಬರುವ ಒಂದೆರಡು ಬಸ್ ಗಳನ್ನು ಮುಗಿಬಿದ್ದು ಹತ್ತಿದರು. ರಜೆ ಸಂದರ್ಭದಲ್ಲಿ ಜನ ಊರುಗಳತ್ತ ಪ್ರಯಾಣ ಬೆಳೆಸುವುದು ಗೊತ್ತಿದ್ದರೂ ಹೆಚ್ಚುವರಿ ಬಸ್ ಗಳ ವ್ಯವಸ್ಥೆ ಮಾಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಒಮ್ಮೆಲೆ ಅನಿರೀಕ್ಷಿತವಾಗಿ ಜನ ಬಂದಿದ್ದರಿಂದ ತೊಂದರೆ ಉಂಟಾಯಿತು. ಕೂಡಲೇ ಹೆಚ್ಚುವರಿ ಬಸ್ ಗಳ ವ್ಯವಸ್ಥೆ ಮಾಡಿ ಪ್ರಯಾಣಿಕರನ್ನು ಕಳುಹಿಸಲಾಯಿತು' ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದರು.



ಬ್ಯಾಂಕಿಂಗ್ ಪರೀಕ್ಷೆಗೆ ತರಬೇತಿ : ಅರ್ಜಿ ಆಹ್ವಾನ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ಸಂಸ್ಥೆಯು ಐ.ಎ.ಎಸ್, ಕೆ.ಎ.ಎಸ್ ಹಾಗೂ ಬ್ಯಾಂಕಿಂಗ್ ಪರೀಕ್ಷೆಗೆ ಆನ್‌ಲೈನ್ ಮತ್ತು ಭೌತಿಕ (ಆಫ್‌ಲೈನ್) ತರಬೇತಿಗೆ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹ ಅಭ್ಯರ್ಥಿಗಳು ಇದೇ 31ರೊಳಗೆ ಸಂಸ್ಥೆಯ ವೆಬ್‌ಸೈಟ್ www.ksfkarnataka.com ಮೂಲಕ ಅರ್ಜಿಗಳನ್ನು ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ನಂ.15, 2ನೇ ಮಹಡಿ, ಹಳೆ ವಿಮಾನ ನಿಲ್ದಾಣ ರಸ್ತೆ, ಕೋಡಿಹಳ್ಳಿ, ಬೆಂಗಳೂರು-08 ಈ ವಿಳಾಸಕ್ಕೆ ಕಳುಹಿಸುವಂತೆ ಪ್ರಕಟಣೆ ತಿಳಿಸಿದೆ.

ಒಳ ಮೀಸಲಾತಿ ಹೋರಾಟಕ್ಕೆ ಸಾಹಿತಿಗಳ ಬೆಂಬಲ

‘ಹಸಿದವರ ತಟ್ಟೆಗೆ ಕೈಹಾಕುವುದು ದ್ರೋಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಳ ಮೀಸಲಾತಿ ಎಂಬುದು ಸಾಮಾಜಿಕ ನ್ಯಾಯ. ಈ ವಿಷಯದಲ್ಲಿ ಹಸಿದವನ ತಟ್ಟೆಗೆ ಹೊಟ್ಟೆ ತುಂಬಿದವರು ಕೈಹಾಕುವುದು ದ್ರೋಹದ ಕೆಲಸ’ ಎಂದು ಸಾಹಿತಿ ಎಸ್.ಜಿ.ಸಿದ್ಧರಾಮಯ್ಯ ಹೇಳಿದರು.

ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿಯಲ್ಲಿ ಶುಕ್ರವಾರ ಭಾಗವಹಿಸಿ ಅವರು ಮಾತನಾಡಿದರು.

‘ಮೀಸಲಾತಿ ವಿರೋಧಿಸುವುದು ಸಾಮಾಜಿಕ ನ್ಯಾಯ ಆಗಲಾರದು. ಆದ್ದರಿಂದ ವಂಚಿತ ಸಮುದಾಯಗಳು ಸಂಘಟನಾತ್ಮಕವಾಗಿ ಹೋರಾಟ ಮಾಡುವ ಅಗತ್ಯವಿದೆ. ಹಸಿದವರ ಪರವಾಗಿ ನಿಲ್ಲುವುದು ನಮ್ಮ ಜವಾಬ್ದಾರಿ. ಆದ್ದರಿಂದ ಈ ಹೋರಾಟಕ್ಕೆ ಬೆಂಬಲ ಸೂಚಿಸಿದ್ದೇವೆ’ ಎಂದು ಹೇಳಿದರು.

‘ಬಲಿಷ್ಠ ಸಮಾಜಗಳು ಮೀಸಲಾತಿಗಾಗಿ ಹೋರಾಟ ನಡೆಸುತ್ತಿರುವುದು ಒಂದು ರೀತಿಯ ವಿದ್ರೋಹದ ಕೆಲಸ. ಇಂತವರ ಕೂಗಿಗೆ ಸರ್ಕಾರವೂ ಕಿವಿಕೊಡುವ ಕೆಲಸ ಮಾಡುತ್ತಿದೆ. ಇದು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾದ ನಡೆ. ಬಲಿಷ್ಠ ಜಾತಿಗಳ ಹೋರಾಟವನ್ನು ರಾಜಕೀಯಕ್ಕೆ ಬಳಸಿಕೊಳ್ಳಬಾರದು. ಜಾತಿ ಜನಗಣತಿ ಆಧರಿಸಿ ಸಾಮಾಜಿಕ ನ್ಯಾಯವನ್ನು ವೈಜ್ಞಾನಿಕವಾಗಿ ನೀಡುವ ಅಗತ್ಯವಿದೆ’ ಎಂದರು.

ಸಾಹಿತಿ ಮೂಡ್ನಾಕಾಡು ಚಿನ್ನಸ್ವಾಮಿ ಮಾತನಾಡಿ, ‘ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿನ 101 ಜಾತಿಗಳಲ್ಲಿ ಕೆಲವರಿಗೆ ಅನ್ಯಾಯವಾಗಿದೆ ಎಂಬ ಕೂಗು ಹಿಂದಿನಿಂದಲೂ ಇದೆ. ಅವರಿಗೆ ಒಳ ಮೀಸಲಾತಿ ನೀಡದಿದ್ದರೆ ಮೀಸಲಾತಿಯ ಉದ್ದೇಶವೇ ಈಡೇರುವುದಿಲ್ಲ’ ಎಂದು ಹೇಳಿದರು.

ದಲಿತ ಸಮುದಾಯದ ಎರಡು ಜಾತಿಗಳು(ಎಡಗೈ ಮತ್ತು ಬಲಗೈ) ಒಗ್ಗಟ್ಟಿನಿಂದ ಒಳ ಮೀಸಲಾತಿ ಹೋರಾಟಕ್ಕೆ ಬೆಂಬಲವಾಗಿ ನಿಂತಿರುವುದು ಮಹತ್ವದ ವಿಷಯ. ಒಗ್ಗಟ್ಟಿನಿಂದಲೇ ಈ ಹೋರಾಟ ಮುನ್ನಡೆಸಬೇಕು ಎಂದು ತಿಳಿಸಿದರು.

ಲೇಖಕ ಬಂಜಗೆರೆ ಜಯಪ್ರಕಾಶ್ ಮಾತನಾಡಿ, ‘ಮೀಸಲಾತಿ ವಿಷಯದಲ್ಲಿ ಪರಸ್ಪರ ಜಗಳವಾಡುವ ಸ್ಥಿತಿಯನ್ನು ಸರ್ಕಾರ ತಂದೊಡ್ಡಿದೆ. ದಲಿತರ ಬಗ್ಗೆ ಕಾಳಜಿ ಇದ್ದಿದ್ದರೆ ಸರ್ಕಾರ ಸಂಪುಟ ಉಪಸಮಿತಿ ರಚಿಸಿ ವಿಳಂಬ ಮಾಡುತ್ತಿರಲಿಲ್ಲ. ಅಧಿವೇಶನದಲ್ಲಿ ಮಂಡಿಸಿ ಬಹಿರಂಗ ಚರ್ಚೆಗೆ ಅವಕಾಶ ನೀಡುತ್ತಿತ್ತು. ಅನಗತ್ಯವಾಗಿ ವಿಳಂಬ ಮಾಡುವುದು ಸರ್ಕಾರದ ಉದ್ದೇಶ’ ಎಂದರು.

12ನೇ ದಿನದ ಧರಣಿಯಲ್ಲಿ ಸಾಹಿತಿಗಳಾದ ವಸುಂಧರಾ ಭೂಪತಿ, ರುದ್ರಪ್ಪ ಹನಗವಾಡಿ, ಸುಬ್ಬು ಹೊಲೆಯಾರ್, ಸಿ.ಜಿ. ಲಕ್ಷ್ಮಿಪತಿ, ಶ್ರೀಪಾದ ಭಟ್, ಚಿತ್ರ ಕಲಾವಿದ ಚಂದ್ರಶೇಖರ್, ರವಿಕುಮಾರ್ ಬಾಗಿ, ಹುಲಿಕುಂಟೆ ಮೂರ್ತಿ, ವಿ.ಎಲ್. ನರಸಿಂಹಮೂರ್ತಿ ಭಾಗವಹಿಸಿ ಬೆಂಬಲ ಸೂಚಿಸಿದರು.



ಒಳ ಮೀಸಲಾತಿ ಪರ ಹೋರಾಟದಲ್ಲಿ ಮೂಡ್ನಾಕಾಡು ಚಿನ್ನಸ್ವಾಮಿ ಮಾತನಾಡಿದರು. ದಲಿತ ಮುಖಂಡ ಮೋಹನ್‌ರಾಜ್, ಬಂಜಗೆರೆ ಜಯಪ್ರಕಾಶ್, ರುದ್ರಪ್ಪ ಹನಗವಾಡಿ ಇದ್ದರು

ಉಪ ಸಮಿತಿ ಪ್ರವಾಸ: ಅನುದಾನ ಬಿಡುಗಡೆಗೆ ಮನವಿ

ಬೆಂಗಳೂರು: ಪತ್ರಿಕಾ ವಿತರಕರ ಕ್ಷೇಮನಿಧಿ ಅಧ್ಯಯನಕ್ಕೆ ರಚಿಸಿರುವ ಉಪ ಸಮಿತಿಯ ಪ್ರವಾಸಕ್ಕೆ ಅನುಕೂಲ ಕಲ್ಪಿಸುವಂತೆ ಪ್ರತಿ ಜಿಲ್ಲೆಗೆ ₹ 50 ಸಾವಿರದಂತೆ ನಾಲ್ಕು ಜಿಲ್ಲೆಗಳಿಗೆ ಒಟ್ಟು ₹ 2 ಲಕ್ಷ ಅನುದಾನ ನೀಡಬೇಕು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಕರ್ನಾಟಕ ಮಾಧ್ಯಮ ಅಕಾಡೆಮಿ ಕಾರ್ಯದರ್ಶಿ ಸಿ.ರೂಪಾ ಮನವಿ ಮಾಡಿದ್ದಾರೆ.

ಪತ್ರಿಕಾ ವಿತರಕರಿಗೆ ಕ್ಷೇಮನಿಧಿ ಯೋಜನೆಯನ್ನು ಪರಿಣಾಮಕಾರಿ ಅನುಷ್ಠಾನಗೊಳಿಸಲು ಹಾಗೂ ಯೋಜನೆಯ ರೂಪುರೇಷೆ ಮಾರ್ಗಸೂಚಿ ಸಿದ್ಧಪಡಿಸಲು ಸರ್ಕಾರ ಆದೇಶಿಸಿದೆ. ಸರ್ವಸದಸ್ಯರ ಸಭೆಯಲ್ಲಿ ಉಪ ಸಮಿತಿಯು ಖುದ್ದು ಜಿಲ್ಲೆಗಳಿಗೆ ಭೇಟಿ ನೀಡಲು ನಿರ್ಧರಿಸಲಾಗಿದೆ. ಮೊದಲ ಹಂತದಲ್ಲಿ ಕಲಬುರಗಿ, ಧಾರವಾಡ, ಶಿವಮೊಗ್ಗ, ಮೈಸೂರಿಗೆ ಭೇಟಿ ನೀಡಿ ಪತ್ರಿಕಾ ವಿತರಕರ ಜತೆಗೆ ಚರ್ಚಿಸಲು ತೀರ್ಮಾನಿಸಲಾಗಿದೆ. ಉಪ ಸಮಿತಿ ಈ ಪ್ರದೇಶಕ್ಕೆ ಭೇಟಿ ನೀಡಿದಾಗ ವಾರ್ತಾಭವನದಲ್ಲಿ ಸಭೆ ನಡೆಯಲಿದೆ. ಸಮನ್ವಯ ಹಾಗೂ ಸಹಕಾರ ನೀಡಲು ಜಿಲ್ಲಾ ವಾರ್ತಾಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಕೋರಿದ್ದಾರೆ.

ಅಕಾಡೆಮಿಗೆ ಸಾಮಾನ್ಯ ಯೋಜನೇತರ ಶೀರ್ಷಿಕೆ ಅಡಿಯಲ್ಲಿ ₹ 15 ಲಕ್ಷ ಅನುದಾನ ನೀಡಲಾಗಿತ್ತು. ಅಕಾಡೆಮಿ ಆಡಳಿತಾತ್ಮಕ ವೆಚ್ಚ ಹಾಗೂ ಕಾರ್ಯಕ್ರಮಕ್ಕೆ ಅನುದಾನದ ಕೊರತೆ ಎದುರಾಗಿದೆ ಎಂದು ಹೇಳಿದ್ದಾರೆ.

ಪ್ರಕರಣ ಇತ್ಯರ್ಥದ ನಂತರ ನಿಲುವು ಪ್ರಕಟ: ಆರಗ

ಬೆಳಗಾವಿ: ‘545 ಪಿಎಸ್‌ಐ ಹುದ್ದೆಗಳ ನೇಮಕಾತಿ ಪರೀಕ್ಷೆಯಲ್ಲಿ ನಡೆದ ಅಕ್ರಮಕ್ಕೆ ಸಂಬಂಧಿಸಿದಂತೆ ಸಿಐಡಿ ತನಿಖೆ ಇನ್ನೂ ಮುಂದುವರಿದಿದೆ.ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾದ ನಂತರ ಸರ್ಕಾರ ತನ್ನ ನಿಲುವು ಪ್ರಕಟಿಸಲಿದೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

‘ಯಾವುದೇ ಕಾರಣಕ್ಕೂ ಮರುಪರೀಕ್ಷೆ ಮಾಡಬಾರದು. ಪ್ರಾಮಾಣಿಕವಾಗಿ ಪರೀಕ್ಷೆ ಬರೆದು ಆಯ್ಕೆಯಾದವರಿಗೆ ನೇಮಕಾತಿ ಆದೇಶ ನೀಡಬೇಕು’ ಎಂದು ಒತ್ತಾಯಿಸಿ, ಇಲ್ಲಿನ ಸುವರ್ಣ ಸೌಧದ ಎದುರು ಹಲವು ಅಭ್ಯರ್ಥಿಗಳು ಶುಕ್ರವಾರ ನಡೆಸಿದ ಪ್ರತಿಭಟನಾ ಸ್ಥಳದಲ್ಲಿ ಅವರು ಮಾತನಾಡಿದರು.

‘ಸಿಐಡಿ ತಂಡ ಗುರುವಾರ ಈ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಯನ್ನು ಬಂಧಿಸಿದೆ. ಹೀಗಾಗಿ, ತನಿಖೆ ಪೂರ್ಣವಾಗುವವರೆಗೂ ಕಾಯಬೇಕಾಗುತ್ತದೆ’ ಎಂದರು.

ನಮ್ಮ ಭವಿಷ್ಯದ ಕತೆ ಏನು?: ‘ತನಿಖೆ ಅಂತಿಮ ಹಂತಕ್ಕೆ ಬಂದಿದ್ದು, ಅಕ್ರಮಎಸಗಿದವರನ್ನು ಡಿಬಾರ್ ಮಾಡಲಾಗುವುದು ಎಂದು ನೇಮಕಾತಿ ವಿಭಾಗದ ಹಿರಿಯ ಅಧಿಕಾರಿ ತಿಳಿಸಿದ್ದಾರೆ. ಆದರೆ, ಪ್ರಾಮಾಣಿಕವಾಗಿ ಪರೀಕ್ಷೆ ಬರೆದು ಆಯ್ಕೆಯಾದ ನಮ್ಮ ಭವಿಷ್ಯದ ಕತೆ ಏನು? ಯಾರೋ ಮಾಡಿದ ತಪ್ಪಿಗೆ ನಾವೂ ಬೆಲೆ ತೆರಬೇಕೇ? ’ ಎಂದು ಅಭ್ಯರ್ಥಿಗಳು ಪ್ರಶ್ನಿಸಿದರು.

ಅಭ್ಯರ್ಥಿಗಳಾದ ವಿನಾಯಕ ಬಿ.ಡಿ, ಅಮರನಾಥ, ಸಂತೋಷ ಕಾಂಬಳೆ ಹಲವರು ಇದ್ದರು.

ವೆಬ್ ಗರ್ಡರ್ ಅಳವಡಿಕೆ ಕಾಮಗಾರಿ ಮುಂದೂಡಿಕೆ

ಬೆಂಗಳೂರು: ಬೈಯಪ್ಪನಹಳ್ಳಿ–ವೈಟ್‌ಫೀಲ್ಡ್ ಮೆಟ್ರೊ ರೈಲು ಮಾರ್ಗಕ್ಕೆ ಸವಾಲಾಗಿರುವ ರೈಲ್ವೆ ಹಳಿಗೆ ಅಡ್ಡಲಾಗಿ ಶುಕ್ರವಾರ ಅಳವಡಿಕೆಯಾಗಬೇಕಿದ್ದ ವೆಬ್ ಗರ್ಡರ್ ಕಾಮಗಾರಿಯನ್ನು ಬಿಎಂಆರ್‌ಸಿಎಲ್ ಮುಂದೂಡಿದೆ.

65 ಮೀಟರ್ ಉದ್ದದ ವೆಬ್ ಗರ್ಡರ್ ಇದಾಗಿದ್ದು, ಬೆಂಗಳೂರು ಮೆಟ್ರೊ ರೈಲು ಮಾರ್ಗದಲ್ಲಿ ಅಳವಡಿಕೆ ಆಗುತ್ತಿರುವ ಅತಿ ಉದ್ದದ ವೆಬ್ ಗರ್ಡರ್ ಇದಾಗಿದೆ. ವೆಬ್ ಗರ್ಡರ್ ಅಳವಡಿಕೆ ಕಾಮಗಾರಿಯನ್ನು ಶುಕ್ರವಾರ ನಡೆಸಲು ಉದ್ದೇಶಿಸಲಾಗಿತ್ತು. ಅಟ್ಟಣಿಗೆ ಸೇರಿದಂತೆ ಪೂರ್ವ ಸಿದ್ಧತಾ ಕಾರ್ಯ ಇನ್ನೂ ಬಾಕಿ ಇರುವುದರಿಂದ ಕಾಮಗಾರಿಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.

ರೈಲ್ವೆ ಮಾರ್ಗ ಮತ್ತು ರಸ್ತೆ ಮೇಲ್ಸೇತುವೆ ಮೇಲೆ ಈ ಗರ್ಡರ್ ಅಳವಡಿಕೆಯಾಗಬೇಕಿದ್ದು, ಸುರಕ್ಷತೆ ಮುಖ್ಯವಾಗುತ್ತದೆ. ಎಲ್ಲಾ ರೀತಿಯ ಮುನ್ನೆಚ್ಚರಿಕೆಗಳನ್ನು ಕೈಗೊಂಡ ಬಳಿಕವೇ ವೆಬ್ ಗರ್ಡರ್ ಅಳವಡಿಕೆ ಮಾಡಲಾಗುವುದು ಎಂದು ಹೇಳಿದರು.

ಬೆನ್ನಿಗಾನಹಳ್ಳಿ ಬಳಿ ನೀಲಿ(ವಿಮಾನ ನಿಲ್ದಾಣ ಮಾರ್ಗ), ನೇರಳೆ ಮಾರ್ಗಗಳೆರಡೂ ಹಾದು ಹೋಗಲು ಪಿಲ್ಲರ್‌ಗಳ ಮೇಲೆ ಕಬ್ಬಿಣದ ಗರ್ಡರ್ ಅಳವಡಿಕೆ ಮಾಡಲಾಗಿದೆ. ಅವುಗಳ ಮೇಲೆ ರೈಲು ಮಾರ್ಗಗಳನ್ನು ನಿರ್ಮಿಸಬೇಕಿದೆ. ಬೈಯಪ್ಪನಹಳ್ಳಿ–ವೈಟ್‌ಫೀಲ್ಡ್ ನಡುವಿನ ರೈಲು ಮಾರ್ಗಕ್ಕೆ ಇದು ಸವಾಲಿನ ಕೆಲಸವಾಗಿದೆ. ಆದ್ದರಿಂದಲೇ ಮೊದಲ ಹಂತದಲ್ಲಿ ಮಾರ್ಚ್‌ವೇಳೆಗೆ ವೈಟ್‌ಫೀಲ್ಡ್‌ನಿಂದ ಕೆ.ಆರ್.ಪುರ ತನಕ ಮಾತ್ರ ಮೆಟ್ರೊ ರೈಲು ಸಂಚಾರ ಆರಂಭಿಸಲು ಬಿಎಂಆರ್‌ಸಿಎಲ್ ಆಲೋಚನೆ ನಡೆಸಿದೆ. ಕೆ.ಆರ್.ಪುರದಿಂದ ವೈಟ್‌ಫೀಲ್ಡ್ ತನಕದ ಮಾರ್ಗ 2023ರ ಜೂನ್ ವೇಳೆಗೆ ಸಾರ್ವಜನಿಕ ಪ್ರಯಾಣಕ್ಕೆ ಮುಕ್ತವಾಗುವ ಸಾಧ್ಯತೆ ಇದೆ.

ಪ್ರಯಾಣಿಕರ ಸಂಖ್ಯೆ ಹೆಚ್ಚಳ

ಮೆಟ್ರೊ ರೈಲು ಪ್ರಯಾಣಿಕರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ನವೆಂಬರ್‌ನಲ್ಲಿ 1.60 ಕೋಟಿ ಜನ ಪ್ರಯಾಣ ಮಾಡಿದ್ದಾರೆ.

ನವೆಂಬರ್ 19ರಂದು ಒಂದೇ ದಿನ 6.06 ಲಕ್ಷ ಜನ ಪ್ರಯಾಣಿಸಿದ್ದು, ನವೆಂಬರ್ ನಲ್ಲಿ ₹37.39 ಕೋಟಿ ವರಮಾನ ಸಂಗ್ರಹವಾಗಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಸಾರಿಗೆ ನೌಕರರ ಧರಣಿ ಮುಂದುವರಿಕೆ

ಬೆಳಗಾವಿ: ಸಾರಿಗೆ ಸಂಸ್ಥೆಯ ನೌಕರರಿಗೂ ಸರ್ಕಾರಿ ನೌಕರರ ಮಾದರಿಯಲ್ಲಿ ವೇತನ ಸೌಲಭ್ಯ ಕಲ್ಪಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಾರಿಗೆ ನೌಕರರ ಕೂಟದವರು ಇಲ್ಲಿನ ಸುವರ್ಣ ವಿಧಾನಸೌಧ ಬಳಿ ಇರುವ ಬಸ್ತವಾಡದಲ್ಲಿ ನಡೆಸುತ್ತಿರುವ ಅನಿರ್ದಿಷ್ಟಾವಧಿ ಧರಣಿ ಐದನೇ ದಿನಕ್ಕೆ ಮುಂದುವರಿಯಿತು.

‘ಉಪವಾಸ ಸತ್ಯಾಗ್ರಹ ಆರಂಭಿಸಿದ್ದ ಐದು ಜನರು ಅಸ್ವಸ್ಥರಾಗಿ, ಆಸ್ಪತ್ರೆಗೆ ದಾಖಲಾಗಿದ್ದೆವು. ಶುಕ್ರವಾರ ಚೇತರಿಸಿಕೊಂಡಿದ್ದು, ಹೋರಾಟ ಮುಂದುವರಿಸಿದ್ದೇವೆ’ ಎಂದು ಕೂಟದ ರಾಜ್ಯ ಘಟಕದ ಅಧ್ಯಕ್ಷ ಆರ್.ಚಂದ್ರಶೇಖರ ಪ್ರತಿಕ್ರಿಯಿಸಿದರು.

ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಜನತಾ ಸಮಾಜ ಸೇವಾ ಟ್ರಸ್ಟ್ ‘ಪೂಜ್ಯ ಶಿವಕುಮಾರ ಸ್ವಾಮೀಜಿ’ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದೆ.

ಆಡಳಿತ, ನಾಡು–ನುಡಿ, ಜನಾಂದೋಲನ, ಉದ್ಯೋಗ ಸೃಷ್ಟಿ, ಗಡಿನಾಡ ಕನ್ನಡಿಗರು, ವೈಜ್ಞಾನಿಕ, ರಾಜಕೀಯ, ದಲಿತ ಚಳುವಳಿ, ಗ್ರಾಮೀಣಾಭಿವೃದ್ಧಿ, ವೈದ್ಯಕೀಯ, ಪಶು ವೈದ್ಯಕೀಯ, ಜ್ಯೋತಿಷ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಭಾವಚಿತ್ರದ ಸಹಿತ ಸ್ವವಿವರದ ಅರ್ಜಿಯನ್ನು ಅಧ್ಯಕ್ಷರು, ಜನತಾ ಸಮಾಜ ಸೇವಾ ಟ್ರಸ್ಟ್, ನಂ.175/1, 13ನೇ ಕ್ರಾಸ್, ಕೆ.ಇ.ಬಿ ಕಚೇರಿ ರಸ್ತೆ, ಅಂಜನಾನಗರ, ಬೆಂಗಳೂರು–560091 ಈ ವಿಳಾಸಕ್ಕೆ ಕಳುಹಿಸಬೇಕು.

ಭಾವೈಕ್ಯ ಸಮಾವೇಶವು ಬೆಂಗಳೂರಿನ ನಯನ ಸಭಾಂಗಣದಲ್ಲಿ 2023ರ ಜ.28 ರಂದು ನಡೆಯಲಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಎಚ್. ಸದಾಶಿವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9164926585 ಅಥವಾ 9731384876

ನಗರದಲ್ಲಿ ಇಂದು

ಸದ್ಗುರು ಅನಂತಸ್ವಾಮಿ ಮಹಾರಾಜರ 121ನೇ ದಿವ್ಯಾರಾಧನ ಮಹೋತ್ಸವ: ಆಯೋಜನೆ ಹಾಗೂ ಸ್ಥಳ: ಅನಂತಸ್ವಾಮಿ ಆಶ್ರಮ, ಸುಭೇದಾರ್ ಛತ್ರಂ ರಸ್ತೆ ಕ್ರಾಸ್, ಕಪಾಲಿ ಚಿತ್ರಮಂದಿರದ ಹಿಂಭಾಗ, ಗಾಂಧಿನಗರ, ಬೆಳಿಗ್ಗೆ 5.30ರಿಂದ

ಸಾಯಿ ದಶಕೋಟಿ ಮಹಾಯಾಗ: ಆಯೋಜನೆ: ಶ್ರದ್ಧ ಸಬೂರಿ ಭಕ್ತ ಮಂಡಳಿ, ಸ್ಥಳ: ಎಸ್.ಎಸ್. ಕನ್ವೆನ್ಷನ್ ಸೆಂಟರ್, ಬಾಗಲೂರು, ಬೆಳಿಗ್ಗೆ 6ರಿಂದ

ವ್ಯಂಗ್ಯಚಿತ್ರ ಪ್ರದರ್ಶನ: ಇರ್ಫಾನ್ ಖಾನ್, ಉದ್ಘಾಟನೆ: ಚಿರಂಜೀವಿ ಸಿಂಗ್, ಆಯೋಜನೆ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಟೂನಿಸ್ಟ್ಸ್, ಸ್ಥಳ: ಭಾರತೀಯ ವ್ಯಂಗ್ಯ ಚಿತ್ರ ಗ್ಯಾಲರಿ, ಮಿಡ್ ಫೋರ್ಡ್ ಗಾರ್ಡನ್, ಟ್ರಿನಿಟಿ ವೃತ್ತ, ಎಂ.ಜಿ. ರಸ್ತೆ, ಬೆಳಿಗ್ಗೆ 10ರಿಂದ

ಪ್ರಥಮ ವಾರ್ಷಿಕೋತ್ಸವ: ಮುಖ್ಯ ಅತಿಥಿ: ನಿರ್ಮಲಾ ಬಟ್ಟಲ, ಉಪಸ್ಥಿತಿ: ನಾಗೇಂದ್ರ ಕಮ್ಮಾರ, ಲಕ್ಷ್ಮೀಬಾಯಿ ಅನಂತರಾವ್, ಅಧ್ಯಕ್ಷತೆ: ಉಮಾ ವಿ. ಕಿತ್ತಳಿ, ಸನ್ಮಾನ: ವಿದ್ಯಾ ಬಸವರಾಜ ಬಡಿಗೇರ, ಆಯೋಜನೆ: ಕಾಳಿಕಾದೇವಿ ವಿಶ್ವಕರ್ಮ ಮಹಿಳಾ ಮಂಡಳಿ, ಸ್ಥಳ: ನಗರ ಕೇಂದ್ರ ಗ್ರಂಥಾಲಯ, ಹಂಪಿನಗರ, ಬೆಳಿಗ್ಗೆ 10

ರಾಷ್ಟ್ರ ಮಟ್ಟದ ಸಂಗೀತ ಮತ್ತು ನೃತ್ಯ ಹಬ್ಬ: ಉದ್ಘಾಟನೆ: ಪಿನಾಕಪಾಣಿ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ: ನಾಟ್ಯ ಕಲಾಸಿರಿ ಸಾಂಸ್ಕೃತಿಕ ವೇದಿಕೆ, ಸ್ಥಳ: ಶೇಷಾದ್ರಿಪುರ ಪದವಿಪೂರ್ವ ಕಾಲೇಜು, ಶೇಷಾದ್ರಿಪುರ, ಮಧ್ಯಾಹ್ನ 3.30

ಬಹುಭಾಷಾ ಕವಿಗೋಷ್ಠಿ: ಅಧ್ಯಕ್ಷತೆ: ಬರಗೂರು ರಾಮಚಂದ್ರಪ್ಪ, ಉಪಸ್ಥಿತಿ: ಕೆ.ನೀಲಾ, ಕೆ.ಷರೀಫಾ, ಸಿ.ಕೆ. ಗುಂಡಣ್ಣ, ಆಯೋಜನೆ: ಬೆಂಗಳೂರು ಸೌತ್ ಇಂಡಸ್ಟ್ರಿಯಲ್ ವರ್ಕರ್ಸ್ ಯೂನಿಯನ್, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 4


ಸಿದ್ಧಲಿಂಗ ಸ್ವಾಮೀಜಿ

‘ಶ್ರೀ ಸಿದ್ಧಗಂಗಾ ಸಿರಿ ಪ್ರಶಸ್ತಿ’ ಪ್ರದಾನ: ಗೊ.ರು. ಚನ್ನಬಸಪ್ಪ, ಸಾನ್ನಿಧ್ಯ: ಸಿದ್ದಲಿಂಗ ಸ್ವಾಮೀಜಿ, ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಎಸ್. ಮಹಾದೇವಯ್ಯ, ಪ್ರಶಸ್ತಿ ಪುರಸ್ಕೃತರು: ಮಲ್ಲೇಪುರಂ ಜಿ. ವೆಂಕಟೇಶ್, ಸ್ಥಳ: ವೀರಭದ್ರ ಸ್ವಾಮಿ ಆವರಣ, ಕನ್ನಲ್ಲಿ, ಬೆಳಿಗ್ಗೆ 11


ಬರಗೂರು ರಾಮಚಂದ್ರಪ್ಪ

‘ಸಮಗ್ರ ಕನ್ನಡ ನಾಡು–ನುಡಿ ಗೀತೆಗಳು’ ಪುಸ್ತಕ ಬಿಡುಗಡೆ: ಹಿ.ಚಿ. ಬೋರಲಿಂಗಯ್ಯ, ಅಧ್ಯಕ್ಷತೆ: ದೊಡ್ಡರಂಗೇಗೌಡ, ಅತಿಥಿಗಳು: ಆರ್. ಚಂದ್ರಶೇಖರ್, ವಿದ್ಯಾನಂದ್, ಸಿ.ಕೆ. ರಾಮೇಗೌಡ, ಉಪಸ್ಥಿತಿ: ಕಾ.ವೆಂ. ಶ್ರೀನಿವಾಸಮೂರ್ತಿ, ವಿ. ಮಹೇಶ್, ಆಯೋಜನೆ: ಸುರಾಗ ಸಂಗೀತ ಅಕಾಡಮಿ ಟ್ರಸ್ಟ್, ಸ್ಥಳ: ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4


ದೊಡ್ಡರಂಗೇಗೌಡ

ಡಬ್ಲ್ಯು.ಎಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸ ಹಾಗೂ ‘ಬ್ರಹ್ಮಧರ್ಮ ಗಾಯತ್ರಿ’ ಪುಸ್ತಕ ಬಿಡುಗಡೆ: ಅಧ್ಯಕ್ಷತೆ: ಜೀರಿಗೆ ಲೋಕೇಶ್, ಉಪಸ್ಥಿತಿ: ವೂಡೇ ಪಿ. ಕೃಷ್ಣ, ವಿಷಯ: ‘ಬೇಂದ್ರೆಯವರ ದೃಷ್ಟಿಯಲ್ಲಿ ಸ್ವಾತಂತ್ರ್ಯ ಮತ್ತು ಗಾಂಧೀಜಿ’, ಉಪನ್ಯಾಸಕರು: ಜಿ. ಕೃಷ್ಣಪ್ಪ, ಕೃತಿ ಬಿಡುಗಡೆ: ಮಲ್ಲೇಪುರಂ ಜಿ. ವೆಂಕಟೇಶ, ಆಯೋಜನೆ: ಗಾಂಧಿ ಶಾಂತಿ ಪ್ರತಿಷ್ಠಾನ, ಸ್ಥಳ: ಮೈಲಾರ ಮಹಾದೇವ ಸಭಾಂಗಣ, ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಸಂಜೆ 4.15

ನೆನಪಿನಂಗಳದಲ್ಲಿ ಜಿ.ಎಸ್.ಎಸ್. ಕಾರ್ಯಕ್ರಮ: ಉಪಸ್ಥಿತಿ: ಕೆ. ಮರುಳಸಿದ್ಧಪ್ಪ, ಎಚ್. ದಂಡಪ್ಪ, ರೋಹಿಣಿ ಮೋಹನ್, ಎಸ್.ಬಿ. ಹಿರೇಮಠ, ಆಯೋಜನೆ: ಸಂಗೀತ ಧಾಮ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5

ಯುವ ಸಂಭ್ರಮ: ಗಾಯನ: ನಿರಂಜನ್ ಡಿಂಡೋಡಿ, ಪಿಟೀಲು: ಶ್ರೀಕಾಂತ್ ರಾಧಾಕೃಷ್ಣ, ಮೃದಂಗ: ರಘು ಭಗವತ್, ಮುಖ್ಯ ಅತಿಥಿ: ಟಿ.ಎಸ್. ವೇಣುಗೋಪಾಲ ಶಾಸ್ತ್ರಿ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಅನನ್ಯ ಸಭಾಂಗಣ, ಮಲ್ಲೇಶ್ವರ, ಸಂಜೆ 5

‘ಅಯೋಧ್ಯಾಕಾಂಡ’ ನಾಟಕ ಪ್ರದರ್ಶನ: ಮುಖ್ಯ ಅತಿಥಿಗಳು: ಆರ್.ಚಂದ್ರಶೇಖರ್, ಪೂರ್ಣಿಮಾ, ಸಿ.ಎಸ್. ನಾಯ್ಕರ್, ಮಾಲತೇಶ್ ಬಡಿಗೇರ್, ಸಾಧಕರಿಗೆ ಅಭಿನಂದನೆ: ಅಂಕಲ್ ಶ್ಯಾಮ್, ಆಯೋಜನೆ ಹಾಗೂ ಸ್ಥಳ: ವಿಜಯನಗರ ಬಿಂಬ, ಹಂಪಿನಗರ, ಸಂಜೆ 5.30

ನಾದಾಭಿನಯಂ ಸಂಗೀತ–ನೃತ್ಯೋತ್ಸವ: ಉದ್ಘಾಟನೆ: ಉಷಾ ದಾತಾರ್, ವೈ.ಕೆ. ಸಂಧ್ಯಾಶರ್ಮ, ಭರತನಾಟ್ಯ ಪ್ರಸ್ತುತಿ: ಸಂಸ್ಕೃತಿ ಕೇಶವನ್, ಅರ್ಚನಾ ನಾರಾಯಣಮೂರ್ತಿ, ಆಯೋಜನೆ: ಫ್ಲೂಟ್ ಆ್ಯಂಡ್ ಫೀಟ್, ಸ್ಥಳ: ಕಲಾಕ್ಷಿತಿ ಸಭಾಂಗಣ, ಬಸವನಗುಡಿ, ಸಂಜೆ 5.30

ಕನ್ನಡ ರಾಜ್ಯೋತ್ಸವ ಮತ್ತು ನಗೆಹನಿ ಕಾರ್ಯಕ್ರಮ: ಪ್ರೊ.ಕೃಷ್ಣೇಗೌಡ ಹಾಗೂ ತಂಡ, ಅಧ್ಯಕ್ಷತೆ: ಬಿ.ಸಿ.ನಾಗೇಶ್, ಅತಿಥಿಗಳು: ಜಗ್ಗೇಶ್, ಆಯೋಜನೆ ಮತ್ತು ಸ್ಥಳ: ಜೆ.ಪಿ. ನಗರ ಸಾಂಸ್ಕೃತಿಕ ಮತ್ತು ಕ್ಷೇಮಾಭಿವೃದ್ಧಿ ಸಂಘ, 1ನೇ ಹಂತ, ಜೆ.ಪಿ ನಗರ, ಸಂಜೆ 6


ಪ್ರೊ.ಕೃಷ್ಣೇಗೌಡ

ಭಾವಾಂತರಾಳ ನೃತ್ಯ ಪ್ರದರ್ಶನ: ವಿದ್ಯಾ ಬಾಲಚಂದ್ರ, ಅತಿಥಿಗಳು: ಆರ್.ವಿ. ರಾಘವೇಂದ್ರ, ರಂಗಶ್ರೀ ಶ್ರೀನಿವಾಸ್, ಎನ್. ರಾಘು, ಆಯೋಜನೆ: ನರ್ತನ ಕೀರ್ತನ ಸಂಸ್ಥೆ, ಸ್ಥಳ: ಜೆ.ಎಸ್.ಎಸ್ ಸಭಾಂಗಣ, ಜಯನಗರ, ಸಂಜೆ 5.30

ರಸ ಸಂಜೆ: ಭರತನಾಟ್ಯ ಪ್ರದರ್ಶನ: ವೆಂಕಟೇಶ ನಾಟ್ಯ ಮಂದಿರ ವಿದ್ಯಾರ್ಥಿಗಳು, ಭಾವನಾ ಜಿ. ಪ್ರಸಾದ, ಪದ್ಮಿನಿ ರವಿ, ಆಯೋಜನೆ: ವೆಂಕಟೇಶ ನಾಟ್ಯ ಮಂದಿರ, ಸ್ಥಳ: ಎ.ಡಿ.ಎ. ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 6

‘ನೆಮ್ಮದಿ ಅಪಾರ್ಟ್‌ಮೆಂಟ್’ ನಾಟಕ ಪ್ರದರ್ಶನ: ಉದ್ಘಾಟನೆ: ಕೆ. ಗೋಪಾಲಯ್ಯ, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಆಯೋಜನೆ: ಕುವೆಂಪು ಕಲಾನಿಕೇತನ, ಸ್ಥಳ: ಹಿರಿಯ ನಾಗರಿಕರ ವೇದಿಕೆ, ಕೆಂಪೇಗೌಡ ಉದ್ಯಾನವನ, ನಂದಿನಿ ಲೇಔಟ್, ಸಂಜೆ 6

ಅಯ್ಯಪ್ಪಸ್ವಾಮಿ ಪೂಜಾಮಹೋತ್ಸವ: ಗಾಯನ: ವಿ.ಆರ್. ಅನಂತಪದ್ಮನಾಭ ಹಾಗೂ ತಂಡ, ಆಯೋಜನೆ: ಅಯ್ಯಪ್ಪಸ್ವಾಮಿ ಭಕ್ತ ಮಂಡಳಿ, ಸ್ಥಳ: ಹೂವಿನ ಮಂಟಪ, ಬಳೆಪೇಟೆ ಕ್ರಾಸ್, ಮುಕ್ಕಡಶೆಟ್ಟಿ ರಾಮಣ್ಣ ಗಲ್ಲಿ, ಸಂಜೆ 6.30

‘ಎ ಲಿಟಲ್ ಮೋರ್ ಲೈಟ್– ಇಗ್‌ನೈಟಿಂಗ್ ಇಮ್ಯಾಜಿನೇಷನ್, ಇನ್‌ಸ್ಪೈರಿಂಗ್ ಆ್ಯಕ್ಷನ್’ ಪಾಡ್‌ಕಾಸ್ಟ್ ಕಾರ್ಯಕ್ರಮ: ಆಯೋಜನೆ: ಇನ್‌ಸೈಟ್ಸ್ ಐಎಎಸ್, ಅತಿಥಿ: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸ್ಥಳ: 3ನೇ ಮಹಡಿ, ನಂದಾ ಆಶೀರ್ವಾದ್ ಬಿಲ್ಡಿಂಗ್, ಚಂದ್ರಾ ಬಡಾವಣೆ, ಅತ್ತಿಗುಪ್ಪೆ, ಸಮಯ: ಸಂಜೆ 5

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಹೃದಯೇಶ್ ಆರ್. ಕೃಷ್ಣನ್, ಟಿ. ಎಸ್. ಕೃಷ್ಣಮೂರ್ತಿ, ಡಿ.ಆರ್. ಚೇತನಮೂರ್ತಿ, ಸಚಿನ್ ದೇವಿಪ್ರಸಾದ್, ಆಯೋಜನೆ: ಶಾರದಾ ಸಾಂಸ್ಕೃತಿಕ ಸಂಘ, ಸ್ಥಳ: ಎಸ್.ಬಿ.ಐ. ಆಫೀಸರ್ಸ್ ಕಾಲೋನಿ, ಶಾರದಾ ಗಣಪತಿ ಸೇವಾ ಟ್ರಸ್ಟ್ ಎದುರು, ಬಸವೇಶ್ವರ ನಗರ, ಸಂಜೆ 6.30

‘ಮೋಕ್ಷ ಸಂಗ್ರಾಮ’ ಯಕ್ಷಗಾನ ಪ್ರದರ್ಶನ: ಮುಖ್ಯ ಅತಿಥಿಗಳು: ಆರ್. ಚಂದ್ರಶೇಖರ್, ಚಂದ್ರಶೇಖರ ಹೆಬ್ಬಾರ್, ಕರುಣಾಕರ ಹೆಗಡೆ ಆನಗಳ್ಳಿ, ರಾಘವೇಂದ್ರ ಹತ್ವಾರ್, ಆಯೋಜನೆ: ಸಿರಿಕಲಾ ಮೇಳ, ಸ್ಥಳ: ಉದಯಭಾನು ಕಲಾಸಂಘ, ಗವಿಪುರ, ಸಂಜೆ 6.30

‘ಮಿಸ್. ಸದಾರಮೆ’ ನಾಟಕ ಪ್ರದರ್ಶನ: ಆಯೋಜನೆ: ಸಮಷ್ಟಿ ತಂಡ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಕಾಲದ ಮರಳಿನಲ್ಲಿ ಹೆಜ್ಜೆಗುರುತುಗಳನ್ನು ಬಿಡು,
ಕಾಲನ್ನೆಳೆಯುತ್ತಾ ನಡೆಯಬೇಡ.

-ಎ.ಪಿ.ಜೆ. ಅಬ್ದುಲ್ ಕಲಾಂ

ಬೆಂಗಳೂರು: ಆದಾಯ ತೆರಿಗೆದಾರರಿಗೆ 'ಮೆಟ್ರೊ ನಗರ' ಸೌಲಭ್ಯ ಕೊಡಿ

ಸಂವಿಧಾನದ 74ನೆಯ ತಿದ್ದುಪಡಿಯು ಹತ್ತು ಲಕ್ಷ ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವ ಪ್ರದೇಶವನ್ನು 'ಮೆಟ್ರೊಪಾಲಿಟನ್ ನಗರ' ಎಂದು ವ್ಯಾಖ್ಯಾನಿಸುತ್ತದೆ. ಆದರೆ, ಆದಾಯ ತೆರಿಗೆ ಇಲಾಖೆಯ ಯಾವುದೋ ಕಾಲದ ನಿಯಮಾವಳಿಯು ನವದೆಹಲಿ, ಮುಂಬೈ, ಕೋಲ್ಕತ್ತ ಮತ್ತು ಚೆನ್ನೈ ನಗರಗಳನ್ನು ಮಾತ್ರ 'ಮೆಟ್ರೊ ಪ್ರದೇಶಗಳು' ಎಂದು ಪರಿಗಣಿಸುತ್ತದೆ. ಹೀಗೆ 'ಮೆಟ್ರೊ' ಎಂದು ಪರಿಗಣಿಸಲಾಗುವ ನಗರಗಳಲ್ಲಿ ವಾಸಿಸುವವರು ತೆರಿಗೆ ಆಕರಿಸಬಹುದಾದ ತಮ್ಮ ವೈಯಕ್ತಿಕ ಆದಾಯದಲ್ಲಿ ಮನೆ ಬಾಡಿಗೆ ಭತ್ಯೆಯ (ಎಚ್‌ಆರ್‌ಎ) ರೂಪದಲ್ಲಿ ಗರಿಷ್ಠ ಶೇಕಡ 50ರಷ್ಟು ವಿನಾಯಿತಿಯನ್ನು ಪಡೆಯಲು ಅವಕಾಶವಿದೆ. ಅದೇ ಇತರ ನಗರಗಳಾದರೆ ಆ ವಿನಾಯಿತಿಗೆ ಗರಿಷ್ಠ ಶೇ 40ರ ಮಿತಿ ಇದೆ. 1992ರಲ್ಲಿ ಮಾಡಲಾದ ಸಂವಿಧಾನದ 74ನೆಯ ತಿದ್ದುಪಡಿ ಪ್ರಕಾರ, ಅಹಮದಾಬಾದ್, ಬೆಂಗಳೂರು, ಚೆನ್ನೈ, ಕೊಯಮತ್ತೂರು, ಗೋರಖಪುರ, ಹೈದರಾಬಾದ್, ಜೈಪುರ, ಜೋಧಪುರ, ಕಾನ್ಪುರ, ಕೊಚ್ಚಿ, ಕೋಲ್ಕತ್ತ, ಕೋಯಿಕ್ಕೋಡ್, ಮದುರೆ, ಮುಂಬೈ, ನಾಗಪುರ, ರಾಷ್ಟ್ರ ರಾಜಧಾನಿ ಪ್ರದೇಶ (ಎನ್‌ಸಿಆರ್), ಪಟ್ನಾ, ಪುಣೆ, ರಾಯಪುರ, ಸೇಲಂ, ಸೂರತ್, ತಿರುವನಂತಪುರ ಮತ್ತು ವಿಶಾಖಪಟ್ಟಣ ನಗರಗಳು 'ಮೆಟ್ರೊ' ವ್ಯಾಖ್ಯಾನದ ಪರಿಧಿಗೆ ಬರುತ್ತವೆ. ನಾಲ್ಕು ನಗರಗಳಿಗೆ ಮಾತ್ರ 'ಮೆಟ್ರೊ' ಮಾನ್ಯತೆ ನೀಡಿ, ಮಿಕ್ಕ ನಗರಗಳಿಗೆ ಆದಾಯ ತೆರಿಗೆ ಇಲಾಖೆ ಅನ್ಯಾಯ ಎಸಗಿರುವುದು ಎದ್ದು ಕಾಣುತ್ತಿರುವ ಸತ್ಯ. ಈ ತಾರತಮ್ಯ ನೀತಿಯ ವಿರುದ್ಧ ಬೆಂಗಳೂರು (ದಕ್ಷಿಣ) ಸಂಸದ ತೇಜಸ್ವಿ ಸೂರ್ಯ ಲೋಕಸಭೆಯಲ್ಲಿ ಧ್ವನಿ ಎತ್ತಿದ್ದಾರೆ. ಯಾವುದೇ ತಪ್ಪು ಮಾಡದಿದ್ದರೂ ಇತರ ನಗರಗಳ ಜನ ಅನ್ಯಾಯ ಅನುಭವಿಸುವಂತಾಗಿದೆ ಎಂಬ ಸಂಗತಿಯತ್ತಲೂ ಬೊಟ್ಟು ಮಾಡಿದ್ದಾರೆ.



ಪ್ರಾಮಾಣಿಕವಾಗಿ ತೆರಿಗೆ ಪಾವತಿಸುತ್ತಿರುವ ಸಂಬಳದಾರರು ಆದಾಯ ತೆರಿಗೆ ಇಲಾಖೆಯ ತಾರತಮ್ಯ ನೀತಿಯಿಂದಾಗಿ ಅನ್ಯಾಯ ಅನುಭವಿಸುವಂತಾಗಿದೆ

ಜೀವನ ನಿರ್ವಹಣೆ ವೆಚ್ಚವು ಒಂದೇ ಸಮನೆ ಏರಿಕೆ ಆಗುತ್ತಿರುವ ಈ ದಿನಗಳಲ್ಲಿ ಆದಾಯ ತೆರಿಗೆ ಆಕರಣೆ ಪ್ರಮಾಣವು ಜನರಿಗೆ ದೊಡ್ಡ ಹೊರೆಯಾಗಿ ಪರಿಣಮಿಸಿದೆ. ಅದರಲ್ಲೂ ಜನರ ಖರ್ಚು ಮಾಡುವ ಸಾಮರ್ಥ್ಯವನ್ನು ಈ ಹೊರೆ ಇನ್ನಷ್ಟು ಕಿರಿದಾಗಿಸುತ್ತಿದೆ. ಜಗತ್ತಿನಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದೆನಿಸಿರುವ ಬೆಂಗಳೂರಿನಂತಹ ಪ್ರದೇಶದಲ್ಲಿ ತೆರಿಗೆ ಹೊರೆಯಿಂದ ಜನ ಅನುಭವಿಸುತ್ತಿರುವ ಸಂಕಷ್ಟ ಇನ್ನಷ್ಟು ಘಾಸಿಗೊಳಿಸುತ್ತಿದೆ. ಬೆಂಗಳೂರಿನಲ್ಲಿ ಜೀವನ ನಿರ್ವಹಣೆ ವೆಚ್ಚದ ಪ್ರಮಾಣವು ದೇಶದ ಇತರ ಕಡೆಗಳಿಗಿಂತಲೂ ಹೆಚ್ಚಿರುವುದು ಕೂಡ ಗಮನಾರ್ಹ ಸಂಗತಿ. ಮನೆ ಬಾಡಿಗೆ, ಶಾಲಾ ಶುಲ್ಕ, ವೈದ್ಯಕೀಯ ವೆಚ್ಚ, ಮನರಂಜನೆ ಮತ್ತು ಸ್ಥಳೀಯ ಓಡಾಟಕ್ಕೆ ಮಾಡಬೇಕಾದ ಖರ್ಚು ಎಲ್ಲವೂ ಸೇರಿ ಮಧ್ಯಮ ವರ್ಗದ ಜನರ ಜೇಬಿಗೆ ತೂತು ಕೊರೆಯುತ್ತಿವೆ. ಇದರಿಂದಾಗಿ ನಿರ್ವಹಣಾ ವೆಚ್ಚಕ್ಕೂ ಗಳಿಕೆಗೂ ತಾಳಮೇಳವಾಗದ ಅಂತರ ಸೃಷ್ಟಿಯಾಗುತ್ತಿದೆ. ಕೋವಿಡ್ ಸಂದರ್ಭದಲ್ಲಿ ಜನ ತಮ್ಮ ಹುಟ್ಟೂರಿಗೆ ತೆರಳಿದ್ದರಿಂದ ಬೆಂಗಳೂರಿನಲ್ಲಿ ಮನೆ ಬಾಡಿಗೆ ಕಡಿಮೆಯಾಗಿತ್ತು. ಆದರೆ, ಕೆಲಸ ಅರಸಿ ಜನ ಈಗ ಮತ್ತೆ ಬೆಂಗಳೂರಿನತ್ತ ಮುಖ ಮಾಡಿದ್ದರಿಂದ ಮನೆ ಬಾಡಿಗೆ ದರ ಗಗನಮುಖಿಯಾಗಿದೆ. ಸಿಲಿಕಾನ್ ನಗರ ಎಂದೇ ಖ್ಯಾತವಾದ ಬೆಂಗಳೂರಿನಲ್ಲಿ ಐಟಿ-ಬಿಟಿ ಹಾಗೂ ಇತರ ದೊಡ್ಡ ವಹಿವಾಟಿನ ಕಂಪನಿಗಳಲ್ಲದೆ ಭಾರಿ ಸಂಖ್ಯೆಯ ನವೋದ್ಯಮಗಳೂ ತಲೆಎತ್ತಿವೆ. ಹೀಗಾಗಿ ಸಂಬಳದಾರರ ಸಂಖ್ಯೆಯೂ ಇಲ್ಲಿ ಹೆಚ್ಚಿದೆ. ಅವರೆಲ್ಲ ಪ್ರಾಮಾಣಿಕವಾಗಿ ತೆರಿಗೆ ಪಾವತಿ ಮಾಡುತ್ತಿದ್ದರೂ ಆದಾಯ ತೆರಿಗೆ ಇಲಾಖೆಯ ತಾರತಮ್ಯ ನೀತಿಯಿಂದಾಗಿ ತುಂಬಾ ದಿನಗಳಿಂದ ಅನ್ಯಾಯ ಅನುಭವಿಸುವಂತಾಗಿದೆ. ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ದೊಡ್ಡ ಪ್ರಮಾಣದ ವರಮಾನದ ಮೂಲವಾಗಿದೆ ಬೆಂಗಳೂರು. ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ನಗರ ಕೂಡ ಇದಾಗಿದೆ. ಹೀಗಾಗಿ, ಕೇಂದ್ರ ಸರ್ಕಾರವು ಬೆಂಗಳೂರು ನಗರಕ್ಕೆ ತಕ್ಷಣ 'ಮೆಟ್ರೊ' ಸ್ಥಾನಮಾನ ನೀಡಬೇಕು. ಇದರಿಂದ ಈ ನಗರದ ಜನ ಎಚ್‌ಆರ್‌ಎ ಸ್ವರೂಪದಲ್ಲಿ ಹೆಚ್ಚಿನ ತೆರಿಗೆ ವಿನಾಯಿತಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಹಾಗೆಯೇ ಅವರು ಹೆಚ್ಚಿನ ತುಟ್ಟಿಭತ್ಯೆ (ಡಿ.ಎ) ಪಡೆಯಲೂ ಅನುಕೂಲವಾಗುತ್ತದೆ. ಈ ಸೌಲಭ್ಯಗಳಿಗೆ ಬೆಂಗಳೂರು ಅರ್ಹವಾಗಿದ್ದರೂ 'ಮೆಟ್ರೊ' ಸ್ಥಾನಮಾನ ಇಲ್ಲದಿರುವುದರಿಂದ ತುಂಬಾ ಹಿಂದಿನಿಂದಲೂ ನಿರಾಕರಿಸುತ್ತಾ ಬರಲಾಗಿದೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ತೇಜಸ್ವಿ ಸೂರ್ಯ ಅವರ ಮನವಿಯತ್ತ ಆದ್ಯತೆ ನೀಡಿ ಗಮನಹರಿಸಬೇಕು. ತೆರಿಗೆ ಕಾಯ್ದೆಗಳ ನಿಯಮಗಳು ರೂಪುಗೊಂಡ ಕಾಲಕ್ಕೂ ಈಗಿನ ಸಂದರ್ಭಕ್ಕೂ ಆಗಿರುವ ಬದಲಾವಣೆಗಳನ್ನು ಗಮನಕ್ಕೆ ತೆಗೆದುಕೊಂಡು, ನೆಲದ ವಾಸ್ತವಿಕ ಸಂಗತಿಗಳನ್ನು ಅರ್ಥ ಮಾಡಿಕೊಂಡು ಎಲ್ಲ ಮೆಟ್ರೊ ನಗರಗಳ ಜನರಿಗೂ ಸಮಾನ ಸೌಲಭ್ಯ ಸಿಗುವಂತೆ ನೋಡಿಕೊಳ್ಳಬೇಕು. ಸರ್ಕಾರದ ಈ ಕ್ರಮದಿಂದ ಮಧ್ಯಮ ವರ್ಗದ ಹತ್ತಾರು ಲಕ್ಷ ಕುಟುಂಬಗಳಿಗೆ ಪ್ರಯೋಜನ ಆಗಲಿದೆ. ಈಗಿನ ನಿಯಮಾವಳಿಗಳು ತಾರತಮ್ಯದಿಂದ ಕೂಡಿದ್ದು, ಕಠಿಣ ಪರಿಶ್ರಮವಹಿಸಿ ದುಡಿಯುವವರನ್ನೇ ಶಿಕ್ಷಿಸುವಂತಿವೆ. ಹೀಗೆ ವಿನಾಕಾರಣ ಶಿಕ್ಷೆಗೆ ಒಳಗಾಗುತ್ತಿರುವವರು ದೇಶದ ಆರ್ಥಿಕ ಬೆಳವಣಿಗೆಗೆ ಆಧಾರಸ್ತಂಭವಾಗಿರುವ ಜನ ಎಂಬುದನ್ನು ಸರ್ಕಾರ ಮರೆಯಬಾರದು.

ದಿನದ ಟ್ವೀಟ್

ಇದೆಂಥ ಅಸಂಬದ್ಧ?



ನನ್ನ ಮಗಳು ಚೆಂಗನ್ನೂರಿಗೆ ಐಆರ್‌ಸಿಟಿಸಿ ಮೂಲಕ ಆನ್‌ಲೈನ್ ರೈಲು ಟಿಕೆಟ್ ಬುಕ್ ಮಾಡಿದಳು. ಖಾತೆಯಿಂದ ಹಣ ಕಡಿತವಾಯಿತು, ಆದರೆ ಟಿಕೆಟ್ ಬುಕ್ ಆಗಲಿಲ್ಲ. ಇದೆಂಥ ಅಸಂಬದ್ಧ? ಮೊತ್ತವನ್ನು ನಂತರದಲ್ಲಿ ಮರುಪಾವತಿಸಲಾಗುತ್ತದೆ ಎಂಬುದು ಬೇರೆ ವಿಚಾರ. ಟಿಕೆಟ್ ಖಾತರಿಯಾದ ನಂತರವಷ್ಟೇ ಹಣ ಕಡಿತವಾಗುವಂತೆ ಮಾಡಬೇಕು. ಅಲ್ಲವೇ?

ಕಾಂಜೀವರಂ ರಾಜನ್ ಗೋಪಾಲಕೃಷ್ಣನ್

ಕಿಡಿನುಡಿ



ರಾಮಸೇತುಗೆ ಸಂಬಂಧಿಸಿದಂತೆ ಯಾವುದೇ ಪುರಾವೆ ಇಲ್ಲ ಎಂದು ಮೋದಿ ನೇತೃತ್ವದ ಸರ್ಕಾರ ಸಂಸತ್ತಿನಲ್ಲಿ ಹೇಳಿದೆ. ಲವ್ ಜಿಹಾದ್‌ಗೆ ಸಂಬಂಧಿಸಿದಂತೆ ದಾಖಲಿತವಾದ ಯಾವುದೇ ಸಾಕ್ಷ್ಯ ಇಲ್ಲ ಎಂದು ಸಹ ಅದು ಈ ಮೊದಲು ಹೇಳಿತ್ತು. ಹಾಗಾಗಿ, ಪಕ್ಷವು ಈ ವಿಚಾರಗಳನ್ನೆಲ್ಲ ಪ್ರಚಾರಕ್ಕಾಗಿ ಮಾತ್ರ ಬಳಸುತ್ತದೆ ಎಂಬುದನ್ನು ಅದು ಅಕ್ಷರಶಃ ಒಪ್ಪಿಕೊಂಡಂತಾಗಿದೆ...

ಅಜಯ್ ಕಾಮತ್, ನೇತ್ರತಜ್ಞ

25 ವರ್ಷಗಳ ಹಿಂದೆ

ಬುಧವಾರ, 24-12-1997

• **ಬದಲಿ ಮತದಾನ ಸಲಹೆ: ಪರಾಮರ್ಶೆಗೆ ಸಮಿತಿ**

ನವದೆಹಲಿ, ಡಿಸೆಂಬರ್ 23 (ಪಿಟಿಐ)– ಸೇನಾಪಡೆ ಹಾಗೂ ಅರೆಸೇನಾಪಡೆಗಳಿಗೆ ಬದಲಿ ಮತದಾನ ವ್ಯವಸ್ಥೆ ಕಲ್ಪಿಸುವ ಚುನಾವಣಾ ಆಯೋಗದ ಪ್ರಸ್ತಾವದ ಅಧ್ಯಯನಕ್ಕೆ ಕೇಂದ್ರದಿಂದ ಸಮಿತಿ ರಚನೆ, ಅಪರಾಧಿಗಳ ಚುನಾವಣಾ ಸ್ಪರ್ಧೆಗೆ ತಡೆ ಹಾಗೂ ಎಲೆಕ್ಟ್ರಾನಿಕ್ಸ್ ಮಾಧ್ಯಮಗಳ ಬಳಕೆಗೆ ಕಾಲ ನಿಗದಿ.

–ಇವುಗಳ ಪರವಾಗಿ ಅಭಿಪ್ರಾಯವು ಕಳೆದ ಎರಡು ದಿನಗಳಿಂದ ಇಲ್ಲಿ ನಡೆದ, ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಸಭೆಯಲ್ಲಿ ವ್ಯಕ್ತವಾಯಿತು.

ಸೇನಾಪಡೆ ಹಾಗೂ ಅರೆಸೇನಾಪಡೆಗಳ ಸಿಬ್ಬಂದಿಗೆ ಪ್ರಸಕ್ತ ಚುನಾವಣೆಯಲ್ಲಿ ಅಂಚೆ ಮೂಲಕ ಮತಪತ್ರ ಕಳುಹಿಸುವ ಪದ್ಧತಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಚುನಾವಣಾ ಆಯೋಗದ ಪ್ರಸ್ತಾವದ ಅಧ್ಯಯನಕ್ಕೆ ಕೇಂದ್ರ ಸರ್ಕಾರ ಸಮಿತಿಯೊಂದನ್ನು ರಚಿಸಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಡಾ. ಎಂ.ಎಸ್. ಗಿಲ್ ತಿಳಿಸಿದ್ದಾರೆ.

• **ಕಾಂಗ್ರೆಸ್ಸಿಗೆ ಕುಮಾರಮಂಗಲಂ ರಾಜೀನಾಮೆ**

ನವದೆಹಲಿ, ಡಿಸೆಂಬರ್ 23 (ಪಿಟಿಐ)– ಕೇಂದ್ರದ ಮಾಜಿ ಸಚಿವ ಪಿ.ಆರ್. ಕುಮಾರಮಂಗಲಂ ಅವರು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಇಂದು ರಾಜೀನಾಮೆ ನೀಡಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 24-12-1972

• **ಅಭಾವ ಪರಿಹಾರ ಕಾರ್ಯ ನಿಲ್ಲದು: ರಾಜ್ಯ ಎಂ.ಪಿ.ಗಳಿಗೆ ಪ್ರಧಾನಿ ಭರವಸೆ**

ನವದೆಹಲಿ, ಡಿಸೆಂಬರ್ 23– ಉತ್ತರ ಕರ್ನಾಟಕದ ಅಭಾವಪೀಡಿತ ಪ್ರದೇಶಗಳಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ಪರಿಹಾರ ಕಾರ್ಯಕ್ರಮಗಳು ಯಾವುದೇ ಕಾರಣದಿಂದ ನಿಲ್ಲದಂತೆ ತಾವು ನೋಡಿಕೊಳ್ಳುವುದಾಗಿ ಪ್ರಧಾನಿ ಇಂದಿರಾ ಗಾಂಧಿ ಅವರು ಇಂದು ತಮ್ಮನ್ನು ಭೇಟಿ ಮಾಡಿದ ಮೈಸೂರು ರಾಜ್ಯದ ಸಂಸತ್ ಸದಸ್ಯರ ನಿಯೋಗಕ್ಕೆ ಆಶ್ವಾಸನೆ ನೀಡಿದರೆಂದು ಗೊತ್ತಾಗಿದೆ.

ರೈಲ್ವೆ ಮಂತ್ರಿ ಟಿ.ಎ. ಪೈ, ಕೇಂದ್ರ ಗೃಹಖಾತೆ ಉಪಮಂತ್ರಿ ಎಫ್. ಮಾಹಿಸಿನ್ ಹಾಗೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯ ಕೊಲ್ಲೂರು ಮಲ್ಲಪ್ಪ ಅವರೂ ಸೇರಿ ಸುಮಾರು 22 ಮಂದಿಯ ನಿಯೋಗ ಪ್ರಧಾನಿಯವರನ್ನು ಭೇಟಿ ಮಾಡಿ ಮನವಿಯೊಂದನ್ನು ಸಲ್ಲಿಸಿತು.

ಮಕ್ಕಳ ವರ್ತನಾ ಸಮಸ್ಯೆಗಳನ್ನು ಗಂಭೀರವಾಗಿ ಚರ್ಚೆಗೆ ಒಳಪಡಿಸಬೇಕಿದೆ

ಕಲಿಕಾ ಸನ್ನಿವೇಶ ಮತ್ತು ಚರ್ಚೆಯ ಅಗತ್ಯ



ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಕಡಿಮೆ ಅಂಕಗಳನ್ನು ಪಡೆದದ್ದೇಕೆ ಎಂದು ಪ್ರಾಂಶುಪಾಲರು ಕೇಳಿದ್ದಕ್ಕಾಗಿ ವಿದ್ಯಾರ್ಥಿ ಆತ್ಮಹತ್ಯೆಗೆ ಪ್ರಯತ್ನಿಸುವುದು, ಸಹಪಾಠಿ ಪ್ರೇಮಿಸಲಿಲ್ಲ ಎಂದು ಹತ್ಯೆಯ ಯತ್ನಕ್ಕಿಳಿಯುವುದು, ತಾಯಿ ಗದರಿದಳೆಂದು ಮನೆ ಬಿಟ್ಟು ಓಡಿ ಹೋಗುವುದು- ಈ ರೀತಿಯ ನಡವಳಿಕೆಗಳ ಸುದ್ದಿಗಳು ಸಿಕ್ಕಿದಾಗಲೆಲ್ಲ ಮಕ್ಕಳ ಸಮಸ್ಯೆಗಳ ಬಗ್ಗೆ ವ್ಯಾಪಕವಾಗಿ ಚರ್ಚೆಗಳಾಗುತ್ತವೆ, ಪಾಲಕರು ಮತ್ತು ಶಿಕ್ಷಕರ ಕುರಿತು ಮೂದಲಿಕೆಯ ಮಾತುಗಳು ಕೇಳಿಬರುತ್ತವೆ ಮತ್ತು ಮಕ್ಕಳ ಬಗ್ಗೆಯೂ ಅಸಮಾಧಾನಗಳು ಹೊರಹೊಮ್ಮುತ್ತವೆ.

ಇಲ್ಲಿ, ಮೊದಲು ಸನ್ನಿವೇಶವನ್ನು ಅರ್ಥ ಮಾಡಿಕೊಳ್ಳಬೇಕಾದ ಅಗತ್ಯವಿದೆ. ಈ ರೀತಿಯ ಕೃತ್ಯಗಳು ಆಧುನಿಕತೆ ಇಂದಿನಷ್ಟು ವಿಕಾಸಗೊಳ್ಳದೆ ಇದ್ದಾಗಲೂ ನಡೆಯುತ್ತಿದ್ದವು, ಆದರೆ ಹೆಚ್ಚು ವರದಿ ಆಗುತ್ತಿರಲಿಲ್ಲ ಎಂದು ಅರ್ಥ ಮಾಡಿಕೊಳ್ಳಬೇಕು. ಅಲ್ಲದೆ, ಈಗಲೂ ಇಂತಹ ಪ್ರಕರಣಗಳು ಅಪವಾದಾತ್ಮಕವೆ ವಿನಾ ವ್ಯಾಪಕವಾಗಿ ಎಲ್ಲ ಮಕ್ಕಳಲ್ಲೂ ಕಂಡುಬರುವ ಲಕ್ಷಣವಾಗಿಲ್ಲ. ಆಗ, ಸಣ್ಣ ಪ್ರಮಾಣದಲ್ಲಾದರೂ ಇಂತಹುದು ನಡೆಯುವುದು ಸರಿಯೇ ಎಂಬ ಪ್ರಶ್ನೆ ಬರುತ್ತದೆ. ಸರಿಯಲ್ಲ ಮತ್ತು ಈ ಸ್ವರೂಪದ ಘಟನೆಗಳನ್ನು ಗಂಭೀರವಾಗಿಯೇ ಸಾರ್ವಜನಿಕ ಚರ್ಚೆಗೆ ಒಳಪಡಿಸಬೇಕು. ಆದರೆ ಇಂತಹ ಪ್ರಕರಣಗಳ ಪ್ರಮಾಣ ಈಗಲೂ ಚಿಕ್ಕದೇ ಆಗಿದೆ ಎಂಬ ಅರಿವಿನ ನೆಲೆಯಲ್ಲಿ ಚರ್ಚೆ ನಡೆಸಬೇಕು.

ಮಕ್ಕಳಿಂದ ಅನಪೇಕ್ಷಿತ ಸಾರ್ವಜನಿಕ ವರ್ತನೆಗಳ ಸುದ್ದಿ ಸಿಕ್ಕಿದಾಗ, ಶಿಕ್ಷಣದಲ್ಲಿ ಶಿಕ್ಷೆ ಇಲ್ಲದ್ದರಿಂದ ಹೀಗಾಯಿತು ಎಂದೂ, ಶಿಕ್ಷೆಯಿಂದ ಮಕ್ಕಳಿಗೆ ತೊಂದರೆಯಾದಾಗ ಶಿಕ್ಷಕರ ಮೇಲೆ ಕ್ರಮ ತೆಗೆದುಕೊಳ್ಳದಿದ್ದುದೇ ತಪ್ಪೆಂದೂ ಅವಸರದ ತೀರ್ಮಾನವನ್ನು ಸಾರ್ವಜನಿಕ ಚರ್ಚೆಯು ತೆಗೆದುಕೊಳ್ಳುವುದರಿಂದ ಪ್ರಯೋಜನವಿಲ್ಲ. ಶಿಕ್ಷಕರಿಗೆ ಹೆಚ್ಚು ಅಧಿಕಾರ ಕೊಟ್ಟಾಗ ಅಧಿಕಾರದ ದುರುಪಯೋಗ ನಡೆದು ಮಕ್ಕಳ ಮೇಲೆ ದೌರ್ಜನ್ಯ ನಡೆಯಲು ಅವಕಾಶ ಮತ್ತು ಶಿಕ್ಷಕರನ್ನು ನಿಯಂತ್ರಿಸಿದಾಗ ಮಕ್ಕಳ ಸ್ವೇಚ್ಛಾ ಪ್ರವೃತ್ತಿಗೆ ಅವಕಾಶ ಜಾಸ್ತಿ ಸಿಗುತ್ತದೆ. 'ಎಲ್ಲರೂ' ಹಾಗಿರುವುದಿಲ್ಲ ಎನ್ನುವುದು ಶಿಕ್ಷಕರು ಮತ್ತು ಮಕ್ಕಳು ಇಬ್ಬರಿಗೂ ಅನ್ವಯಿಸುತ್ತದೆ. ಜಗತ್ತು ಅಪರಿಪೂರ್ಣವೇ ಆಗಿರುತ್ತದೆ. ಆದ್ದರಿಂದ ಇಂತಹ ಸಮಸ್ಯೆಗಳನ್ನು ಹೆಚ್ಚು ವಾಸ್ತವಿಕ ನೆಲೆಗಟ್ಟಿನಲ್ಲಿ ನೋಡಬೇಕಾದ ಅಗತ್ಯವಿದೆ.

ಇಂದಿನ ಶೈಕ್ಷಣಿಕ ಸನ್ನಿವೇಶಗಳು ಶೈಕ್ಷಣಿಕ ತತ್ವಗಳು ಮತ್ತು ವಾಸ್ತವದ ಅನುಭವಗಳ ಅಹಿತಕಾರಿ ಸಂಯೋಜನೆಯನ್ನು ದೊಡ್ಡ ಪ್ರಮಾಣದಲ್ಲಿ ಹೊಂದಿವೆ. ಉದಾಹರಣೆಗೆ ಹೇಳುವುದಾದರೆ, ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಕ್ರೀಡೆ ಬಹಳ ಅಗತ್ಯ. ಆದರೆ ನಗರ-ಪಟ್ಟಣಗಳಲ್ಲಿ ಕ್ರೀಡಾಂಗಣವೇ ಇಲ್ಲದ ಶಾಲಾ ಕಾಲೇಜುಗಳಿವೆ. ಆಗ ಮಕ್ಕಳ ದೈಹಿಕ ಚಟುವಟಿಕೆಗಳು ಬಹಳ ಕೆಳಮಟ್ಟದಲ್ಲಿರುತ್ತವೆ. ನಡೆದುಕೊಂಡು ಶಾಲೆಗೆ ಬರುವ ಪ್ರಮೇಯವಿಲ್ಲ; ವಾಹನಗಳಿವೆ. ಕ್ರೀಡೆ ಇಲ್ಲ. ಓಟವಿಲ್ಲ. ದೇಹಕ್ಕೆ ಸಿಗಬೇಕಾದ ವ್ಯಾಯಾಮ ಸಿಗುವುದಿಲ್ಲ. ಆಗ ದೇಹದ ಬೆಳವಣಿಗೆಯಲ್ಲಿ ಸಮರ್ಪಕತೆ ಬರಲು ಅವಕಾಶವಿಲ್ಲ.

ಇನ್ನೊಂದು ಕಡೆಯಿಂದ, ಆಹಾರ ಪದ್ಧತಿಯಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಸೇವಿಸುವ ಆಹಾರದಲ್ಲಿ ಹೆಚ್ಚು ರಾಸಾಯನಿಕಗಳ ಬಳಕೆಯಾಗುತ್ತಿದೆ. ಅದು ಬೆಳೆಯುವ ಮಕ್ಕಳ ಹಾರ್ಮೋನು ಸ್ರಾವದ ಮೇಲೆ ಪರಿಣಾಮ ಬೀರುತ್ತದೆ. ಇದು ಉತ್ತೇಜಿಸುವ ಮಾನಸಿಕ ಬದಲಾವಣೆಗಳ ನಿಯಂತ್ರಣ ಮಕ್ಕಳಿಂದಲೇ ಸಾಧ್ಯವಾಗಬೇಕಾದರೆ ಅವರು ದೈಹಿಕ ಚಟುವಟಿಕೆಯಲ್ಲಿ ತೊಡಗಿಕೊಳ್ಳಬೇಕು. ಕ್ರೀಡೆ, ಓಟ, ವ್ಯಾಯಾಮ ತರುವ ನಿರಾಳತೆ ದೊರೆಯದೆ ಸ್ವನಿಯಂತ್ರಣ ಕಷ್ಟವಾಗುತ್ತದೆ.

ಶಿಕ್ಷಕರು ಮಕ್ಕಳಿಗೆ ಚೆನ್ನಾಗಿ ಕಲಿಸಬೇಕು ಮತ್ತು ಮಕ್ಕಳು ತಾವಾಗಿಯೇ ಕಲಿಯುತ್ತಾರೆ ಎನ್ನುವ ಎರಡೂ ಪರಿಕಲ್ಪನೆಗಳ ನಡುವೆ ಸಂಯೋಜನೆ ಇಲ್ಲ. ಮಕ್ಕಳು ಪರಿಸರದಿಂದ ತಾವಾಗಿಯೇ ಕಲಿಯುತ್ತಾರೆ ಎನ್ನುವುದು ಮೂಲಭೂತ ಸತ್ಯವಾಗಿದೆ. ಶಾಲಾ ಕಾಲೇಜುಗಳಲ್ಲಿ ಕಲಿಯುವುದು ಔಪಚಾರಿಕ ಶಿಕ್ಷಣವನ್ನು. ಔಪಚಾರಿಕ ಶಿಕ್ಷಣವನ್ನು ಪ್ರಭುತ್ವ ನಿರ್ಧರಿಸಿರುತ್ತದೆ. ಮತ್ತು, ಅದು ಸಕಾರಾತ್ಮಕ ಕಲಿಕೆಯೇ ಆಗಬೇಕೆಂಬ ಉದ್ದೇಶದಿಂದ ನಡೆಸುವ ಕಲಿಕೆಯಾಗಿರುತ್ತದೆ. ಆದರೆ ಮಕ್ಕಳು ಪರಿಸರದಿಂದ ತಾವಾಗಿಯೇ ಕಲಿಯುವ ಕಲಿಕೆ ಸಕಾರಾತ್ಮಕವೂ ಇರಬಹುದು, ನಕಾರಾತ್ಮಕವೂ ಇರಬಹುದು. ಇದರ ಮೇಲೆ ಪ್ರಭುತ್ವದ ನಿಯಂತ್ರಣ ಇರುವುದಿಲ್ಲ.

ಪರಿಸರದಲ್ಲಿ ಉಂಟಾದ ನಕಾರಾತ್ಮಕ ಕಲಿಕೆಯ ತಡೆಗಳನ್ನು ಔಪಚಾರಿಕ ಶಿಕ್ಷಣದಲ್ಲಿ ನಿವಾರಿಸುವ ಪರಿಕಲ್ಪನೆಯಾಗಲೀ ನಿವಾರಿಸುವ ವಿಧಾನವಾಗಲೀ ಅದಕ್ಕಾಗಿ ವಿನಿಯೋಗಿಸಲು ಸಮಯಾವಕಾಶವನ್ನು ಹೊಂದಿದ ವೇಳಾಪಟ್ಟಿಯಾಗಲೀ ಸಶಕ್ತವಾಗಿ ಇಲ್ಲ. ಈ ವಿಚಾರದಲ್ಲಿ ಸಾರ್ವಜನಿಕ ಚರ್ಚೆ ನಡೆಯುವುದೇ ವಿರಳ. ಉದಾಹರಣೆಗೆ, ಇವತ್ತು ಬಹಳಷ್ಟು ವಿದ್ಯಾರ್ಥಿಗಳ ಸಹಜ ನಡವಳಿಕೆಯಾಗಿ ಕಾಣಿಸುವುದು ತರಗತಿಯಲ್ಲಿ ಹೇಳಿದ್ದನ್ನು ಕೇಳಿಸಿಕೊಳ್ಳದೆ ಇರುವುದು. ಅಧ್ಯಾಪಕರ ಬೋಧನೆಯ ಶಬ್ದ ಕಿವಿಗೆ ಕೇಳಿಸುತ್ತದೆ; ಆದರೆ ಅದನ್ನು ಮನಸ್ಸಿಗೆ ತೆಗೆದುಕೊಳ್ಳುವುದಿಲ್ಲ. ಪ್ರಾಥಮಿಕ ಶಾಲೆಯಿಂದ ಪದವಿಯ ತನಕದ ಎಲ್ಲ ಬೋಧಕರಿಗೂ ಇದು ಅನುಭವಕ್ಕೆ ಬರುತ್ತಿದೆ. ಈ ಸಮಸ್ಯೆಯನ್ನು, 'ಸರಿಯಾಗಿ ಬೋಧಿಸಿದರೆ ಕೇಳಿಸಿಕೊಳ್ಳುತ್ತಾರೆ' ಎಂಬ ಬೀಸು ಹೇಳಿಕೆಯಿಂದ ಪರಿಹರಿಸಲು ಸಾಧ್ಯವಿಲ್ಲ. ಮಕ್ಕಳ ಅವಧಾನವನ್ನು ಕಂಗೆಡಿಸುವ, ಅನ್ಯಮನಸ್ಕತೆಯನ್ನು ಉಂಟು ಮಾಡುವ ಆಕರ್ಷಣೆಗಳು ಮತ್ತು ನಕಾರಾತ್ಮಕ ಕಲಿಕೆಯ ಸಮಸ್ಯೆಯಿಂದ ಅವರನ್ನು ಹೊರತರಬೇಕು.



ಔಪಚಾರಿಕ ಕಲಿಕೆಯ ಬಹುಪಾಲು ಪ್ರಕ್ರಿಯೆಗಳು ಮಾತಿನ ಮೂಲಕವೇ ನಡೆಯುತ್ತವೆ. ಮಕ್ಕಳು ಮಾತುಗಳನ್ನು ಕೇಳಿಸಿಕೊಂಡು ಗ್ರಹಿಸಿ ಮನಸ್ಸಿಗೆ ತೆಗೆದುಕೊಳ್ಳದಿದ್ದರೆ ಪಠ್ಯ ಕಲಿಕೆಯಾಗಲೀ ವರ್ತನಾ ಪರಿವರ್ತನೆಗಳಾಗಲೀ ನಡೆಯಲು ಸಾಧ್ಯವಿಲ್ಲ. ಈ ವಿಚಾರಕ್ಕೆ ಸಂಬಂಧಿಸಿ ಗಮನ ಸೆಳೆಯಬೇಕಾದ ಸಂಗತಿ ಎಂದರೆ, ಕೊರೊನಾ ಉಲ್ಬಣಿಸಿದ್ದ ಅವಧಿಯಲ್ಲಿ ಆನ್‌ಲೈನ್ ತರಗತಿಗಳಿಗಾಗಿ ಸ್ಮಾರ್ಟ್‌ಫೋನ್‌ಗಳು ಮಕ್ಕಳ ಕೈಗೆ ಸಿಕ್ಕಿದ ಮೇಲೆ ಅವರಲ್ಲಿ ಕೇಳಿಸಿಕೊಳ್ಳಲು ಆಗದ ಪ್ರವೃತ್ತಿ ಹಿಂದಿಗಿಂತ ಹೆಚ್ಚಾಗಿದೆ. ಆದರೆ ಸ್ಮಾರ್ಟ್‌ಫೋನ್ ಅಥವಾ ಇನ್ನಾವುದೇ ಆಧುನಿಕ ತಂತ್ರಜ್ಞಾನದ ಬಳಕೆಯಲ್ಲಿ ಮಕ್ಕಳು ಸಹಜವಾಗಿ ಬಹುತೇಕ ಶಿಕ್ಷಕರು ಮತ್ತು ಪಾಲಕರಿಗಿಂತ ಮುಂದೆ ಇದ್ದಾರೆ. ಆದ್ದರಿಂದ ಅತಿಯಾಗಿ ಸ್ಮಾರ್ಟ್‌ಫೋನ್ ಬಳಕೆಯಿಂದ ಮಕ್ಕಳ ಮೇಲೆ ಯಾವೆಲ್ಲ ಪರಿಣಾಮಗಳಾಗಿರುತ್ತವೆ ಎಂದು ಬಹುಕೋನೀಯವಾಗಿ ವಿಶ್ಲೇಷಿಸಲು ಬೇಕಾದ ತರಬೇತಿಯು ಶಿಕ್ಷಕರು ಮತ್ತು ಪಾಲಕರಿಗೆ ಬೇಕಾಗುತ್ತದೆ. ಇವೆಲ್ಲ ಒಂದು ಆದೇಶದ ಮೂಲಕ ಆಗುವ ಕಾರ್ಯಗಳಲ್ಲ. ಹೆಚ್ಚು ಸಮಯ ಮತ್ತು ಸಂಯಮವನ್ನು ಬಯಸುವ ಕಾರ್ಯಗಳಿವು. ಆದರೆ ಒಂದಂತೂ ಸತ್ಯ: ಕೇಳಿಸಿಕೊಳ್ಳುವ ಸ್ಥಿತಿಗೆ ಮಕ್ಕಳನ್ನು ಸನ್ನದ್ಧಪಡಿಸದ ವಿನಾ ಅಂಕಗಳು ಎಷ್ಟೇ ಬಂದರೂ ಕಲಿಕೆಯಂತೂ ನಡೆಯಲು ಸಾಧ್ಯವಿಲ್ಲ.

ತಂತ್ರಜ್ಞಾನ ಬೆಳೆಯುತ್ತಾ ಹೋದಂತೆ ಮಕ್ಕಳೂ ಹಿರಿಯರೂ ತಂತ್ರಜ್ಞಾನದ ಅವಲಂಬಿಗಳಾಗುವುದು ಸಹಜ. ಆಗ ಧಾರಣಾಶಕ್ತಿ ಕಡಿಮೆಯಾಗುತ್ತದೆ ಮತ್ತು ಸಹಜ ಬದುಕಿನೊಂದಿಗೆ ಒಡನಾಟ ಕಡಿಮೆಯಾಗುತ್ತದೆ. ಇದರ ಜೊತೆಗೆ ಆಧುನಿಕ ಶಿಕ್ಷಣ ಶಾಸ್ತ್ರವು ಮಕ್ಕಳನ್ನು ಹೆಚ್ಚು ಕೋಮಲವಾಗಿ ನಿರ್ವಹಿಸಲು ಬಯಸುತ್ತದೆ. ಕೋಮಲವಾಗಿ ನಿರ್ವಹಿಸುವುದೇನೋ ಸರಿಯೇ. ಆದರೆ ಆಗ, ಪ್ರತಿಕೂಲವಾದದ್ದನ್ನು ಎದುರಿಸಲು ಸಾಧ್ಯವಿಲ್ಲದ ಆಂತರಂಗಿಕ ದೌರ್ಬಲ್ಯವೂ ಬೆಳೆಯುತ್ತದೆ. ಇಂತಹ ದೌರ್ಬಲ್ಯಗಳ ನಿವಾರಣೆಯಾಗಬೇಕಾದರೆ ಮಕ್ಕಳ ಕಲ್ಪನಾ ಪ್ರಪಂಚವನ್ನು ಹಿಗ್ಗಿಸುವ, ಆಂತರಂಗಿಕ ಅನುಭವಗಳನ್ನು ಹೆಚ್ಚಿಸುವ ಕಲಿಕಾಂಶಗಳನ್ನು ಕೊಡಬೇಕು. ಇವುಗಳ ಬಗ್ಗೆ ಏನನ್ನು, ಹೇಗೆ, ಎಷ್ಟು ಒದಗಿಸಬೇಕು ಎಂಬ ಬಗ್ಗೆ ಸ್ಪಷ್ಟತೆ ಕಂಡುಕೊಳ್ಳಬೇಕಾಗಿದೆ.

ಅತಿಯಾದ ನಿರೀಕ್ಷೆಗಳು ಮಕ್ಕಳನ್ನು ಬಹು ಬೇಗ ಮಾನಸಿಕ ಆಯಾಸಕ್ಕೆ ದೂಡುತ್ತವೆ. ಅಂದರೆ, ತಾನು ಅಮೆರಿಕದಲ್ಲೇ ಉದ್ಯೋಗ ಹಿಡಿಯಬೇಕಾದವನು ಎಂಬ ನಿರೀಕ್ಷೆ ಮಗುವಿನಲ್ಲಿ ಅತಿಯಾದಾಗ ನೂರಕ್ಕೆ ತೊಂಬತ್ತೈದು ಅಂಕ ಪಡೆದರೂ ಮಗುವಿಗೆ, 'ಸಾಲದು' ಎನಿಸುತ್ತದೆ. ಅದಕ್ಕಿಂತ ಹೆಚ್ಚಿನ ಅಂಕಕ್ಕಾಗಿನ ಪ್ರಯತ್ನವು ಮಾನಸಿಕ ಆಯಾಸವನ್ನು ಉಂಟುಮಾಡುತ್ತದೆ. ನಿರೀಕ್ಷೆಗಳಷ್ಟೇ ಅಲ್ಲದೆ ಪರಿಸರದಲ್ಲಿ ಆಗುವ ನಕಾರಾತ್ಮಕ ಕಲಿಕೆಗಳೂ ಮಾನಸಿಕ ಆಯಾಸ ಉಂಟುಮಾಡುತ್ತವೆ. ಇವೆಲ್ಲವುಗಳ ನಿವಾರಣಾ ಕ್ರಮಗಳನ್ನು ಕಲಿಕಾ ಸನ್ನಿವೇಶದ ಅಗತ್ಯಗಳೆಂದು ಪರಿಗಣಿಸಿ ಅದಕ್ಕೆ ಬೇಕಾದ ವೈಚಾರಿಕ, ಭಾವನಾತ್ಮಕ, ಭೌತಿಕ ಸಿದ್ಧತೆಗಳ ಚರ್ಚೆಗಳು ಇಂದಿನ ಅವಶ್ಯಕತೆಗಳಾಗಿವೆ.

ಚುರುಮುರಿ



ವರ್ಷಾಂತ್ಯದ ಕಚಗುಳಿ

• ಕೆ.ವಿ.ರಾಜಲಕ್ಷ್ಮಿ

'ಇದೇನೆ? ಮತ್ತೆ ಬಂದೆ ಅಂತ ಕೋವಿಡ್ ವಕ್ರಿಸಿಕೊಳ್ಳಿದೆ! ಮಾಸ್ಕ್ ಧರಿಸಿ, ರಿಸ್ಕ್ ಸರಿಸಿ ಅಂತ ಪಲ್ಲವಿ ಶುರುವಾಯ್ತು' ಅತ್ತೆ ಪೇಪರ್ ಮೇಲೆ ಕಣ್ಣಾಡಿಸಿ ಕಳವಳಗೊಂಡರು.

'ಈ ಚಳಿಗೂ ಬೆಚ್ಚಗಿರುತ್ತೆ ಪ್ಲಸ್ ಪ್ರೊಟೆಕ್ಷನ್ ಫ್ರಮ್ ಕೊರೊನಾ, ಹೊಸ ಮಾಸ್ಕ್, ನಾಲ್ಕೈದು ವೆರೈಟಿದು ತೊಗೋಬೇಕು, ನಿನ್ನ ನಂಬರ್‌ಗೆ ಬರೋ ಒಟಿಪಿ ಕೊಟ್ಟರೆ ಸಾಕು' ಪುಟ್ಟಿ ನನ್ನ ಕಡೆ ನೋಡಿದಳು.

'ನೀನು ಮಹಾಜಾಣೆ, ಆನ್‌ಲೈನ್ ಖರೀದಿ ಬರೀ ಮಾಸ್ಕ್‌ಗೆ ನಿಲ್ಲೋಲ್ಲ ಅಂತ ಗೊತ್ತು' ನನ್ನವಳು ಮಗಳ ಕಿವಿ ಹಿಂಡಿದಳು.

'ವಿಂಟರ್ ಕಲೆಕ್ಷನ್‌ನಲ್ಲಿ ನಿನಗೆ ಟ್ರೆಂಡಿ ಸ್ವೆಟರ್, ಅಜ್ಜಿಗೆ ಶಾಲ್, ಕಾರ್ಟ್‌ನಲ್ಲಿ ಹಾಕಿದ್ದೀನಿ, ನೋಡಮ್ಮ' ಎನ್ನುತ್ತಾ ಮೊಬೈಲ್ ತೋರಿಸಿದಳು.

'ಅದಕ್ಕೇ ಜಾಣೆ ಅಂದದ್ದು' ಅತ್ತೆಯೂ ಮುಖವರಳಿಸಿದರು.

ವಾಕ್ ಮುಗಿಸಿ ನೇರ ನಮ್ಮ ಮನೆಗೇ ಬಂದಿಳಿದ ಕಂಠಿ 'ಎಷ್ಟುಬೇಗ 2022 ಮುಗೀತಿದೆ, ನೋಡ್ತಾ ನೋಡ್ತಾ 2023 ಬಂದಿರುತ್ತೆ, ಇದು ನಿಮಗೇ...' ಎನ್ನುತ್ತಾ ಗಿಫ್ಟ್ ಬಾಕ್ಸ್ ಕೊಟ್ಟ.

'ಏನು ವಿಶೇಷ?' ಕೇಳಿದೆ.

'ಗಂಡ್ ಮಕ್ಕೇ ಸ್ಟ್ರಾಂಗು ಗುರು' ಬೀಗಿದ.

'ಹೌದು, ಒಲಿಂಪಿಕ್ಸ್‌ನಲ್ಲಿ ನೀರಜ್ ಚೋಪ್ರಾ, ಕ್ರಿಕೆಟ್‌ನಲ್ಲಿ ವಿರಾಟ್, ಪಾಂಡ್ಯ ...' ನನ್ನ ಲಿಸ್ಟ್ ಮುಂದುವರಿಯುತ್ತಿತ್ತು.

'ಇಂಡಿಯನ್ ಒಲಿಂಪಿಕ್ ಅಸೋಸಿಯೇಷನ್‌ಗೆ ಪಿ.ಟಿ.ಉಷಾ ಅಧ್ಯಕ್ಷರು ಅನ್ನೋದು ನೆನಪಿರಲಿ...' ಹೆಣ್ಮಕ್ಕಳ ಪರ ಅತ್ತೆ ನಿಂತರು.

'ನಾ ಹೇಳಿದ್ದು ಅದಲ್ಲ, ಐಐಎಂನ ಸಾಮಾನ್ಯ ದಾಖಲಾತಿ ಪರೀಕ್ಷೇಲಿ ಈ ಬಾರಿ ಪುರುಷ ಅಭ್ಯರ್ಥಿಗಳದ್ದೇ ಮೇಲುಗೈ, ಬಾಸ್ ಭಾವಮೈದುನನ ಯಶಸ್ಸು, ಅದರ ಜೊತೆ ವರ್ಷಾಂತ್ಯದ ಆಚರಣೆ ಸಲುವಾಗಿ ಆಫೀಸಲ್ಲಿ ಗಿಫ್ಟ್ಸ್ ಕೊಟ್ರು' ಕಂಠಿ ಕ್ಲಾರಿಫೈ ಮಾಡಿದ.

'ಈ ವರ್ಷ ಆಸ್ಕರ್‌ಗೆ ನಾಲ್ಕು ಚಿತ್ರಗಳು ಅಂತಿಮ ಪ್ರಶಸ್ತಿ ಸುತ್ತಿಗೆ ಪ್ರವೇಶಿಸಿವೆ, ವರ್ಷಾಂತ್ಯಕ್ಕೊಂದು ಸಂತೋಷದ ವಿಷಯ ಅಲ್ವೇ?' ಅತ್ತೆ ದಿಢೀರ್ ಅಂತ ಸಿನಿಮಾ ಸುದ್ದಿ ಕೊಟ್ಟರು.

'ಒಟಿಪಿ ಬಂದಿರ್ಬೇಕು ನೋಡಿ' ಎನ್ನುತ್ತ ನನ್ನವಳು ಬಿಸಿ ಬಿಸಿ ಕಾಫಿ ತಂದಳು.

ಸಂಗತ

ರೋಗ ಭೀತಿಯಿಂದ ರಕ್ಷಿಸಬೇಕಿದೆ!

ಭಯವನ್ನೇ ಬಂಡವಾಳ ಮಾಡಿಕೊಳ್ಳುತ್ತಿರುವುದು ಈ ಕಾಲದ ವ್ಯಾಪಾರದ ಒಂದು ಹೊಸ ಗುಣ

• ಸದಾಶಿವ್ ಸೊರಟೂರು

ನಗರವೊಂದರಲ್ಲಿ ಇತ್ತೀಚೆಗೆ ನಡೆದಾಡುತ್ತಿದ್ದಾಗ, ಅಲ್ಲಿನ ರಸ್ತೆಗಳಲ್ಲಿ ಬೃಹದಾಕಾರದ ಭಯಾನಕ ಪೋಸ್ಟರ್‌ಗಳು ಕಂಡವು. ಎದೆ ಹಿಡಿದು ಒದ್ದಾಡುವವನ ಚಿತ್ರ, ಕತ್ತಿನಲ್ಲಿ ಊದಿಕೊಂಡ ಗಡ್ಡೆ, ನೋಡಿದರೆ ಬೆವರು ಕಿತ್ತು ಬರುವಂತಹ ಕೊಳೆತ ಕಾಲಿನ ಗಾಯ, ಚರ್ಮದ ಸೋಂಕಿನ ಬೀಭತ್ಸ ನೋಟ... ಭಯ ಹುಟ್ಟಿಸುವ ಇಂಥವೇ ಹತ್ತಾರು ದೊಡ್ಡ ದೊಡ್ಡ ಪೋಸ್ಟರ್‌ಗಳನ್ನು ನೇತು ಹಾಕಲಾಗಿತ್ತು. ನೋಡಿದವರು ಯಾರೇ ಆದರೂ ಒಂದು ಕ್ಷಣ ಅಧೀರರಾಗದೇ ಇರಲಾರರು. ಆ ಪೋಸ್ಟರ್‌ಗಳು ಖಾಸಗಿ ಆಸ್ಪತ್ರೆಗಳ ಜಾಹೀರಾತುಗಳ ಭಾಗ.

ಥಿಯೇಟರ್‌ಗೆ ಬಂದ ಹೊಸ ಸಿನಿಮಾವನ್ನೊ, ದಿನಬಳಕೆಗೆ ಬೇಕಾದ ಹೊಸ ಉತ್ಪನ್ನವನ್ನೊ ಜನರನ್ನು ಸೆಳೆಯಲು ಹಾಕಿಕೊಂಡಂತೆ ಕೆಲವು ಆಸ್ಪತ್ರೆಗಳು ಇಂತಹ ಪೋಸ್ಟರ್‌ಗಳನ್ನು ಹಾಕಿಕೊಳ್ಳುವುದುಂಟು. ಆಸ್ಪತ್ರೆಯು ತನ್ನಲ್ಲಿರುವ ಸವಲತ್ತುಗಳನ್ನು ಪ್ರಚಾರ ಮಾಡಿಕೊಳ್ಳುವುದು ತಪ್ಪಲ್ಲ. ಆದರೆ ಈ ಬಗೆಯ ಪೋಸ್ಟರ್‌ಗಳನ್ನು ಹಾಕಿ, ಜನರನ್ನು ಹೆದರಿಸಿ ಅವರನ್ನು ಆಸ್ಪತ್ರೆಯತ್ತ ಸೆಳೆಯಬೇಕೆ?

ಭಯವನ್ನೇ ಬಂಡವಾಳ ಮಾಡಿಕೊಳ್ಳುತ್ತಿರುವುದು ಈ ಕಾಲದ ವ್ಯಾಪಾರದ ಒಂದು ಹೊಸ ಗುಣ. 'ಕನ್ನಡ ಮಾಧ್ಯಮದಲ್ಲಿ ಓದಿದರೆ ನಿಮ್ಮ ಮಕ್ಕಳಿಗೆ ಬದುಕಿಲ್ಲ' ಎಂದು ಹೆದರಿಸಿ ಸೆಳೆಯುವ ಇಂಗ್ಲಿಷ್ ಶಾಲೆಗಳು, ಭವಿಷ್ಯ ಹೇಳಿ ಹೆದರಿಸುವುದು, ನಂಬಿಕೆಯನ್ನೇ ಬಂಡವಾಳ ಮಾಡಿಕೊಂಡವರ ಸಾಲಿಗೆ ಈಗ ವೈದ್ಯಕೀಯ ರಂಗವೂ ಸೇರುತ್ತಿದೆಯೇ?

ಅನುಮಾನವೇ ಇಲ್ಲ, ಆಸ್ಪತ್ರೆಗಳು ದೇವಾಲಯಗಳೇ ಸರಿ. ಸಾವಿನ ಬಾಗಿಲು ಬಡಿಯುವವರನ್ನು ವೈದ್ಯರು ದೇವರೊಂದಿಗೆ ಜಗಳವಾಡಿದಂತೆ ಕಾಯಿಲೆಯೊಂದಿಗೆ ಹೋರಾಡಿ ಜೀವ ಉಳಿಸಿದ ಎಷ್ಟೋ ಉದಾಹರಣೆಗಳಿವೆ. ಆರೋಗ್ಯದ ಬಗ್ಗೆ ಸರಿಯಾದ ಅರಿವು ಮೂಡಿಸುವ ಅಸಂಖ್ಯಾತ ವೈದ್ಯರು ನಮ್ಮ ನಡುವೆ ಇದ್ದಾರೆ. ಆದರೆ ಕೆಲವು ಆಸ್ಪತ್ರೆಗಳಿಗೆ ಈ ಪೋಸ್ಟರ್‌ನಂತಹ ಅಪಸವ್ಯಗಳು ಬೇಕೆ? ಅನುಮಾನವೇ ಇಲ್ಲ, ಇಂತಹ ಪೋಸ್ಟರ್‌ಗಳು ಮನುಷ್ಯನೊಳಗೆ ನಕಾರಾತ್ಮಕ ಭಾವನೆಗಳಿಗೆ ಕುಮ್ಮಕ್ಕು ನೀಡುತ್ತವೆ.

ಅದು ರೋಗಿಗೆ ಕೊಡುವ ಮುಂಜಾಗ್ರತೆ, ಅರಿವು, ಕಾಯಿಲೆಯೊಂದರ ಲಕ್ಷಣದ ಕುರುಹು ಎಂದು ವಾದಿಸಬಹುದು. ಆದರೆ ಮನುಷ್ಯನ ಮನಸ್ಸು ಹೇಗೆ ಎಂಬುದು ಎಲ್ಲರಿಗೂ ಗೊತ್ತು. ಎರಡು ದಿನ ಕಾಡುವ ತಲೆನೋವನ್ನು ದೊಡ್ಡಬೇನೆ ಎಂದು ಯೋಚಿಸುವ ಜನರ ನಡುವೆ ಇಂತಹ ಪೋಸ್ಟರ್ ಯಾವ ಮಟ್ಟದ ಭಯ ಮತ್ತು ತಪ್ಪು ತಿಳಿವಳಿಕೆ ಹುಟ್ಟುಹಾಕಬಹುದು? ಆಸ್ಪತ್ರೆಗಳು ತಮ್ಮ ಪ್ರಚಾರವನ್ನು ಜನರಲ್ಲಿ ಆತ್ಮವಿಶ್ವಾಸ ತುಂಬುವ ಪೋಸ್ಟರ್‌ಗಳ ಮೂಲಕ ಮಾಡಬೇಕೆ ವಿನಾ ಭಯ ಹುಟ್ಟಿಸುವ ಮೂಲಕ ಅಲ್ಲ. ಕೆಲವು ಕಡೆ ಅಂತಹ ಒಳ್ಳೆಯ ಆಸ್ಪತ್ರೆಗಳೂ ಇಲ್ಲದಿಲ್ಲ.

ಅರ್ನೆಸ್ಟ್ ಹೆಮಿಂಗ್‌ವೆ ಅವರ 'ಎ ಡೇಸ್ ವೇಟ್' ಅನ್ನುವ ಕಥೆ ಇದೆ. ಅದರಲ್ಲಿ ಒಬ್ಬ ಹುಡುಗ ಹಾಸಿಗೆ ಮೇಲೆ ಮಲಗಿ ಸಾವಿಗಾಗಿ ಕಾಯುತ್ತಿರುತ್ತಾನೆ. ಆ ಯೋಚನೆಯಲ್ಲಿ ಅವನು ಮತ್ತಷ್ಟು ಬಳಲಿದ್ದಾನೆ. 44 ಡಿಗ್ರಿ ಜ್ವರ ಬಂದರೆ ಬದುಕುವುದು ಕಷ್ಟ ಅನ್ನುವುದು ಹುಡುಗನಿಗೆ ಅವನ ಗೆಳೆಯ ಹೇಳಿದ್ದ ಮಾತು. ಆದರೆ ತನಗೆ ಈಗ 102 ಡಿಗ್ರಿ ಜ್ವರವಿದೆ, ಸಾವು ನಿಶ್ಚಿತ ಎಂಬುದು ಹುಡುಗನ ಎಣಿಕೆ. ತನಗೆ ಇದ್ದಿದ್ದು 102 ಡಿಗ್ರಿ ಸೆಲ್ಸಿಯಸ್ ಜ್ವರ ಎಂದು ಹುಡುಗ ಭಾವಿಸಿದ್ದ. ಆದರೆ ಅವನಿಗಿದ್ದದ್ದು 102 ಡಿಗ್ರಿ ಫ್ಯಾರನ್‌ಹೀಟ್. ತಂದೆ ಮಾತಿನ ಮಧ್ಯೆ ಫ್ಯಾರನ್‌ಹೀಟ್ ಮತ್ತು ಸೆಲ್ಸಿಯಸ್ ನಡುವಿನ ವ್ಯತ್ಯಾಸ ತಿಳಿಸಿ ಹೇಳುತ್ತಾರೆ. ಹುಡುಗ ಆಗ ತನ್ನ ಸಾವಿನ ಯೋಚನೆಯಿಂದ ಹೊರಬರುತ್ತಾನೆ. ಅದು ತಿಳಿಯದೇ ಹೋಗಿದ್ದರೆ ಅವನು ಜ್ವರದ ಭಯದಲ್ಲೇ ಸತ್ತು ಹೋಗುತ್ತಿದ್ದ.



ಎರಡು ವರ್ಷದ ಹಿಂದೆ ನಮ್ಮ ಪಕ್ಕದ ಹಳ್ಳಿಯಲ್ಲಿ ಒಬ್ಬ ಮಹಿಳೆಗೆ ಹೊಟ್ಟೆಯಲ್ಲಿ ಗಡ್ಡೆಯಾಗಿತ್ತು. ಪರೀಕ್ಷೆಯಲ್ಲಿ ಅದು ಕ್ಯಾನ್ಸರ್ ಎಂದು ಗೊತ್ತಾಗಿತ್ತು. ಅವಳು ಅನಕ್ಷರಸ್ಥೆ. ಕ್ಯಾನ್ಸರ್ ಎಂದರೆ ಗಂಭೀರ ಕಾಯಿಲೆ ಎಂಬ ಅರಿವು ಅವಳಿಗಿರಲಿಲ್ಲ. ಮೂರನೇ ಹಂತಕ್ಕೆ ಹತ್ತಿರವಿದ್ದ ಕ್ಯಾನ್ಸರ್ ಅದು. ಕಿದ್ವಾಯಿಯಲ್ಲಿ ಚಿಕಿತ್ಸೆ ಕೊಡಿಸಿದ್ದಾರೆ. ಅವಳಿಗೆ 'ಇದೊಂದು ಬರೀ ಗಡ್ಡೆ, ಅದರಿಂದ ಏನಾದೀತು' ಎಂಬ ಭಾವ. ಆ ಭಾವವೇ ಅವಳನ್ನು ರಕ್ಷಿಸಿದೆ. ಚಿಕಿತ್ಸೆ ಫಲಕಾರಿಯಾಗಿದೆ. ಗುಣಮುಖಳಾಗಿ ಈಗ ಹೊಲದಲ್ಲಿ ಕೆಲಸ ಮಾಡಿಕೊಂಡು ಆರಾಮಾಗಿದ್ದಾಳೆ. ಅವಳನ್ನು ಉಳಿಸಿದ್ದು ಔಷಧಿ ಅಷ್ಟೇ ಅಲ್ಲ, ಅವಳ ಸಕಾರಾತ್ಮಕ ಭಾವವೂ!

ಮನುಷ್ಯನ ಎಲ್ಲಾ ಭಯಗಳಿಗಿಂತ ದೊಡ್ಡ ಭಯ ಸಾವಿನದು. ಸಣ್ಣ ಅನಾರೋಗ್ಯವೂ ಅವನಿಗೆ ಸಾವಿನ ಯೋಚನೆ ತರುತ್ತದೆ. ಆ ಅನಾರೋಗ್ಯದ ಬಗ್ಗೆ ಕೊಡುವ ತಪ್ಪು ಮಾಹಿತಿ ಅವನ ಕಾಯಿಲೆಯನ್ನು ಇನ್ನಷ್ಟು ಗಂಭೀರಗೊಳಿಸಬಹುದು. ಲಕ್ಷಣಗಳನ್ನಿಟ್ಟುಕೊಂಡೇ ಬರೆಯುವ, ವೈದ್ಯರಲ್ಲದವರು ಗೂಗಲ್ ಮಾಡಿ ಬರೆಯುವ ಕೆಲವು ವೈದ್ಯಕೀಯ ಲೇಖನಗಳು, ಭಯ ಹುಟ್ಟಿಸುವ ಪೋಸ್ಟರ್‌ಗಳು ಆರೋಗ್ಯವಂತರನ್ನು ಕಂಗೆಡಿಸುತ್ತವೆ. ಈ ಎಲ್ಲಕ್ಕೂ ಒಂದು ಕಾಯಕಲ್ಪದ ಅವಶ್ಯಕತೆ ಇದೆ. ಜನರನ್ನು ಬರೀ ಕಾಯಿಲೆಯಿಂದಲ್ಲ, ಕಾಯಿಲೆಯ ಭೀತಿಯಿಂದಲೂ ರಕ್ಷಿಸಬೇಕಾಗಿದೆ.

ವಾಚಕರ ವಾಣಿ

ಒಂದೇ ಬಾರಿ ಎರಡು ಪ್ರಮುಖ ಕಾರ್ಯಕ್ರಮ ಸರಿಯೇ?

ಜನವರಿ 6, 7 ಮತ್ತು 8ರಂದು ಹಾವೇರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಿಕ್ಕಿಯಾಗಿರುವುದು ಎಲ್ಲರಿಗೂ ತಿಳಿದ ವಿಚಾರ. ಆದರೆ ನಾವೂ ಆಗಲೇ ಮಾಡಿ ತೀರುತ್ತೇವೆ ಎಂಬಂತೆ ಶಿವಮೊಗ್ಗದಲ್ಲಿ ಜನವರಿ 7, 8 ಮತ್ತು 9ರಂದು ಶಿಕ್ಷಣ ಇಲಾಖೆ 'ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ' ಕಾರ್ಯಕ್ರಮವನ್ನು ಆಯೋಜಿಸಿದೆ. ಸುಮಾರು 1,300 ಮಕ್ಕಳು, ಸಾವಿರಾರು ಶಿಕ್ಷಕರು, ಸುಮಾರು ಇನ್ನೂರು ಜನ ತೀರ್ಪುಗಾರರು, ಸಾವಿರಾರು ಪೋಷಕರು, ಪ್ರತಿನಿಧಿಗಳು ಭಾಗವಹಿಸುವ ರಾಜ್ಯ ಮಟ್ಟದ ಕಾರ್ಯಕ್ರಮ ಇದು. ಹೆಚ್ಚು ಕಡಿಮೆ ಐದು ಸಾವಿರ ಜನ ಸೇರುವ ನಿರೀಕ್ಷೆ ಇದೆ.

ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು ಆಸೆ ಇರುವ ಮಕ್ಕಳು, ಪೋಷಕರು, ಶಿಕ್ಷಕರಿಗೆ ಇದರಿಂದ ನಷ್ಟವಾಗುವುದಿಲ್ಲವೇ? ಈ ಎರಡರಲ್ಲಿ ಯಾವುದಾದರೂ ಒಂದರ ದಿನಾಂಕ ಬದಲಿಸುವ ಅಗತ್ಯವಿದೆ. ಸಂಬಂಧಪಟ್ಟವರು ಈ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕು.

ಸೌಮ್ಯ ಸಿ., ಹಿರೇಕೆರೂರು

ಅಧಿವೇಶನಕ್ಕಿಂತ ಪ್ರತಿಭಟನೆಗಳದೇ ಕಾವು!

ಬೆಳಗಾವಿಯಲ್ಲಿ ನಡೆದಿರುವ ವಿಧಾನಮಂಡಲದ ಅಧಿವೇಶನದಲ್ಲಿ ಸದನದಲ್ಲಿ ಖಾಲಿ ಕುರ್ಚಿಗಳನ್ನು ನೋಡಿದಾಗ, ಇಂತಹ ಅಧಿವೇಶನದ ಅಗತ್ಯವಿತ್ತೇ ಮತ್ತು ಈ ರೀತಿ ತೆರಿಗೆದಾರನ ಹಣವನ್ನು ಪೋಲು ಮಾಡಬಹುದೇ ಎನ್ನಿಸದಿರದು. ಶಾಸಕರಲ್ಲಿ ಅದರಲ್ಲೂ ಮುಖ್ಯವಾಗಿ ರಾಜ್ಯದ ಉತ್ತರ ಭಾಗದ ಶಾಸಕರಲ್ಲೂ ಅಂತಹ ಉತ್ಸಾಹ ಕಾಣದಿರುವಾಗ ಇಂತಹ ಪ್ರಯತ್ನ ಬೇಕಿತ್ತೇ? ಈ ರೀತಿ ಕಾಟಾಚಾರದ ಅಧಿವೇಶನ ನಡೆಸುವ ಬದಲು ಬೆಂಗಳೂರಿನ ವಿಧಾನಸೌಧದಿಂದ ಈಗಾಗಲೇ ನಿರ್ಧರಿಸಿರುವ ಕಚೇರಿಗಳನ್ನಾದರೂ ಬೆಳಗಾವಿಗೆ ಸ್ಥಳಾಂತರಿಸುವ ಕೆಲಸ ಮಾಡಬಹುದಿತ್ತು. ಉತ್ತರ ಕರ್ನಾಟಕದ ಸಮಸ್ಯೆಗಳಿಗೆ ಈ ಅಧಿವೇಶನದಲ್ಲಿ ಉತ್ತರ ಸಿಗುತ್ತದೆ ಎನ್ನುವ ನಿರೀಕ್ಷೆಯೂ ಹುಸಿಯಾಗುತ್ತಿದೆ. ಅಧಿವೇಶನಕ್ಕಿಂತ ಹೆಚ್ಚಾಗಿ ಸುವರ್ಣಸೌಧದ ಮುಂದೆ ನಡೆಯುವ ಪ್ರತಿಭಟನೆಗಳ ಕಾವು ಹೆಚ್ಚಾಗಿ ಕಾಣುತ್ತಿದೆ.

ರಮಾನಂದ ಶರ್ಮಾ, ಬೆಂಗಳೂರು

ಸಿಗಬಹುದೇ ಹೆಚ್ಚಿನ ಆಯ್ಕೆಯ ಅವಕಾಶ?

ಮೆಟ್ರೊ ಕ್ಯಾಷ್ ಆ್ಯಂಡ್ ಕ್ಯಾರಿ, 2003ರಲ್ಲಿ ಬಂದಾಗ ವಿದೇಶಿಯರು ನಮ್ಮ ಚಿಲ್ಲರೆ ವ್ಯಾಪಾರ ವಹಿವಾಟನ್ನು ಆಕ್ರಮಿಸಿಬಿಡುತ್ತಾರೆ ಎಂಬ ಹುಯಿಲು ಎದ್ದಿತ್ತು. ಜರ್ಮನಿಯ ಆ ಕಂಪನಿಯ ಭಾರತದ ವ್ಯಾಪಾರವನ್ನು ಸ್ವದೇಶಿ ಕಂಪನಿಯೊಂದು (ರಿಲಯನ್ಸ್‌ನ ಅಂಗಸಂಸ್ಥೆ ಆರ್‌.ಆರ್.ವಿ.ಎಲ್.) ಕೊಂಡುಕೊಳ್ಳಲಿದೆ ಎಂದು ವರದಿಯಾಗಿದೆ (ಮುಂದಿನ ಮಾರ್ಚ್ ವೇಳೆಗೆ ಪ್ರಕ್ರಿಯೆ ಮುಗಿಯಲಿದೆ). ಈಗ ಇರುವ 16,600 ರಿಟೇಲ್ ಅಂಗಡಿಗಳ ಜತೆ ಈ 31 ಡಿಸ್ಟ್ರಿಬ್ಯೂಷನ್ ಸೆಂಟರ್ ಜಾಲವೂ ಸೇರಲಿದೆ. ಸಣ್ಣ ಕಿರಾಣಿ ಅಂಗಡಿಗಳು, ಹೋಟೆಲ್ ಹಾಗೂ ರೆಸ್ಟೊರೆಂಟ್‌ಗಳು ಬಿಸಿನೆಸ್ ರೂಪದಲ್ಲಿ ಮೆಟ್ರೊದಿಂದ ಸರಕು ಖರೀದಿಸುತ್ತಿವೆ. ಗ್ರಾಹಕನ ದೃಷ್ಟಿಯಿಂದ ರಿಟೇಲ್ ಜಾಲದ ಸ್ಟೋರ್‌ಗಳು ಹಾಗೂ ಬಿಡಿ ಅಂಗಡಿ ಹೀಗೆ ಆಯ್ಕೆಗಳಿದ್ದವು. ಆಮೇಲೆ ಮಾಲ್‌ಗಳು ಬಂದವು. ಈಗ ಒಂದೇ ಉದ್ಯಮ ಗುಂಪು ಎರಡೂ ಬಗೆಯ ವ್ಯಾಪಾರದಲ್ಲಿ ತೊಡಗಲು ಅನುವಾಗುತ್ತದೆ. ಅದು ಇದೀಗ ಎಫ್‌ಎಂಸಿಜಿಗಳಿಗಾಗಿ (ವೇಗವಾಗಿ ಮಾರಾಟವಾಗುವ ಗ್ರಾಹಕ ವಸ್ತು) ಆಕರ್ಷಕ ಹೆಸರುಳ್ಳ ಶಾಪ್‌ಗಳ ನೆಟ್‌ವರ್ಕ್ ಒಂದನ್ನೂ ಆರಂಭಿಸಿದೆ.

ಇಲ್ಲಿ ಗ್ರಾಹಕರು ಹಾಗೂ ಸಣ್ಣ ವರ್ತಕರು ಹೆಚ್ಚಿನ ಆಯ್ಕೆಯ ಅವಕಾಶ ಪಡೆಯುತ್ತಾರಾ ಎಂಬುದು ಒಂದು ಅಂಶವಾದರೆ, ವ್ಯವಹಾರದ ದೃಷ್ಟಿಯಿಂದ ರಿಟೇಲ್ ಕ್ಷೇತ್ರದಲ್ಲಿ ಸ್ಪರ್ಧಾತ್ಮಕತೆಗೆ ಏನಾಗುತ್ತದೆ ಎಂಬ ಇನ್ನೊಂದು ಅಂಶವೂ ಮುಖ್ಯ. ಸಿ.ಸಿ.ಐ. (ಸ್ಪರ್ಧಾ ಆಯೋಗ) ಆಕ್ಷೇಪಗಳು ಬರುವುದಕ್ಕಾಗಿ ಕಾಯದೆ, ತಾನಾಗಿಯೇ ವಿಷಯವನ್ನು ಪರಿಶೀಲಿಸುವುದೇ?

ಎಚ್.ಎಸ್. ಮಂಜುನಾಥ, ಗೌರಿಬಿದನೂರು

ಸ್ಮಶಾನಕ್ಕೆ ಇಲ್ಲ ಜಾಗ

ಪ್ರತೀ ಗ್ರಾಮ ಪಂಚಾಯಿತಿಯಲ್ಲೂ ಸ್ಮಶಾನಕ್ಕೆ ಜಾಗ ಮೀಸಲಿಡುವಂತೆಯೂ, ಆ ಜಾಗ ಯಾರಿಂದಲಾದರೂ ಒತ್ತುವರಿಯಾಗಿದ್ದರೆ ಅದನ್ನು ತಕ್ಷಣ ಖುಲ್ಲಾ ಮಾಡಿಸುವಂತೆಯೂ ಸರ್ಕಾರ ಈಗಾಗಲೇ ಆದೇಶ ಹೊರಡಿಸಿದೆ. ಆದರೆ ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕಿನ ಜಯಪುರ ನಾಡಕಚೇರಿ ಎದುರು, ಶವಸಂಸ್ಕಾರಕ್ಕೆ ಸ್ಮಶಾನ ಇಲ್ಲ ಎಂದು ಆರೋಪಿಸಿ ಪರಿಶಿಷ್ಟ ಸಮುದಾಯದ ಮುಖಂಡರು ಇತ್ತೀಚೆಗೆ ಶವ ಇಟ್ಟು ಪ್ರತಿಭಟನೆ ನಡೆಸಿದರು. ಈ ವ್ಯಕ್ತಿಯ ಅಂತ್ಯಸಂಸ್ಕಾರಕ್ಕೆ ಅವರ ಊರಾದ ಹೇರೂರಿನಲ್ಲಿ ಸ್ಮಶಾನ ಇಲ್ಲ, ಇದ್ದ ಜಾಗವನ್ನು ಪ್ರಭಾವಿಗಳು ಒತ್ತುವರಿ ಮಾಡಿದ್ದಾರೆ ಎಂಬುದು ಕುಟುಂಬ ಸದಸ್ಯರ ಆರೋಪವಾಗಿತ್ತು.

ಆ ಪ್ರದೇಶದಲ್ಲಿ 47 ಎಕರೆ ಜಮೀನನ್ನು ಪ್ರಭಾವಿಗಳು ಒತ್ತುವರಿ ಮಾಡಿದ್ದಾರೆ. ಅಲ್ಲಿ ವಾಸಿಸುತ್ತಿರುವ ಹತ್ತಾರು ಪರಿಶಿಷ್ಟರ ಕುಟುಂಬಗಳು ಸ್ಮಶಾನಕ್ಕೆ ಜಾಗ ನೀಡುವಂತೆ ಹಲವಾರು ವರ್ಷಗಳಿಂದ ಮನವಿ ಸಲ್ಲಿಸುತ್ತಾ ಬಂದಿವೆ. ಇವರ ಈ ಗೋಳನ್ನು ಕೇಳುವವರೇ ಇಲ್ಲವಾಗಿದೆ. ಹಾಗಾದರೆ ಸರ್ಕಾರದ ಕಾನೂನುಗಳು ಯಾರ ಹಿತಕ್ಕಾಗಿ ಇರುವುದು ಎಂಬ ಪ್ರಶ್ನೆ ಇಲ್ಲಿನ ಜನರನ್ನು ಕಾಡತೊಡಗಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರ್, ಕೊಪ್ಪ

ಗಾಂಧಿ ಜತೆ ಹೋಲಿಕೆ ಸಲ್ಲ

ಒಂದು ದೇಶಕ್ಕೆ ಒಬ್ಬರೇ ರಾಷ್ಟ್ರಪಿತ ಎಂಬುದು ನಾವು ಕೇಳಿ ತಿಳಿದುಕೊಂಡಿರುವ ಸಂಗತಿ. ಆದರೆ ಮಹಾರಾಷ್ಟ್ರದ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ಪತ್ನಿ ಅಮೃತಾ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಎರಡನೇ ರಾಷ್ಟ್ರಪಿತ ಎಂದು ಹೇಳಿದ್ದಾರೆ. ಇದು, ನಿಜಕ್ಕೂ ಏಕಮಾತ್ರ ರಾಷ್ಟ್ರಪಿತ ಗಾಂಧಿ ಅವರನ್ನು 'ಸೈಡ್‌ಲೈನ್' ಮಾಡುವ ಮತ್ತೊಂದು ಪ್ರಯತ್ನದಂತಿದೆ.

ಮೋದಿ ಮತ್ತು ಗಾಂಧಿ ಅವರನ್ನು ಪರಸ್ಪರ ತುಲನೆ ಮಾಡುವುದೆಂದರೆ, ಗಿರಿಯೊಂದನ್ನು ಮಹಾನ್ ಪರ್ವತವೊಂದಕ್ಕೆ ಹೋಲಿಸಿದಂತೆ. ಗಾಂಧಿ ಅವರ ಮೇರು ವ್ಯಕ್ತಿತ್ವವನ್ನು ಮರೆಮಾಚಲು ಪ್ರಯತ್ನಿಸಿದಷ್ಟೂ ಅವರು ಪುಟವಿಟ್ಟ ಚಿನ್ನದಂತೆ ಇನ್ನಷ್ಟು ಪ್ರಕಾಶಿಸುತ್ತಾರೆ.

ನರೇಂದ್ರ ಘೋರ್ಪಡೆ, ಭದ್ರಾವತಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮೀಸಲಾತಿ ಭಿನ್ನ ನೋಟಗಳು



ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ (ಇಡಬ್ಲ್ಯುಎಸ್) ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ 10ರಷ್ಟು ಮೀಸಲಾತಿ ನೀಡಿರುವುದು ಹಲವು ಚರ್ಚೆಗಳನ್ನು ಹುಟ್ಟುಹಾಕಿದೆ. ಒಂದೆಡೆ ಇದಕ್ಕೆ ಆಕ್ಷೇಪ ವ್ಯಕ್ತವಾಗಿದ್ದರೆ, ಇನ್ನೊಂದೆಡೆ ಈ ಮೀಸಲಾತಿಯು ಸಂವಿಧಾನದ ಮೂಲ ಆಶಯಕ್ಕೆ ಬದ್ಧವಾಗಿದೆ ಮತ್ತು ಇಂತಹ ಮೀಸಲಾತಿಯ ಅವಶ್ಯಕತೆ ಇತ್ತು ಎಂಬ ಪ್ರತಿಪಾದನೆ ಇದೆ. ಇಡಬ್ಲ್ಯುಎಸ್ ಮೀಸಲಾತಿಯ ಸಿಂಧುತ್ವದ ಚರ್ಚೆಯಲ್ಲಿ ಮೀಸಲಾತಿಯ ಅನುಕೂಲಗಳು, ಅನುಷ್ಠಾನದಲ್ಲಿನ ತೊಡಕುಗಳು ಮತ್ತು ಒಳಮೀಸಲಾತಿಯ ಬಗ್ಗೆಯೂ ಚರ್ಚೆ ನಡೆದಿದೆ. ಖಾಸಗೀಕರಣದಿಂದಾಗಿ ಸರ್ಕಾರಿ ಉದ್ಯೋಗಗಳ ಸಂಖ್ಯೆಯೇ ಕಡಿಮೆಯಾಗುತ್ತಿರುವಾಗ, ಮೀಸಲಾತಿಗಾಗಿ ನಡೆಯುತ್ತಿರುವ ಹೋರಾಟಗಳ ಪ್ರಸ್ತುತತೆಯನ್ನೂ ಪ್ರಶ್ನಿಸಲಾಗಿದೆ

ಮೀಸಲಾತಿ ಚರ್ಚೆ 10

‘ಉದ್ಯೋಗ ಕ್ಷೇತ್ರವೇ ನಾಶವಾಗುತ್ತಿರುವಾಗ...’

ಮೀಸಲಾತಿ ಎಂಬ ಸಂವಿಧಾನದತ್ತವಾದ ಒಂದು ಅವಕಾಶವು, ಒಂದು ಪ್ರಮಾಣದಲ್ಲಿ ತತ್ಸಂಬಂಧಿಸಿದ ವ್ಯಕ್ತಿಗಳ ಬದುಕಿಗೆ ಬೆನ್ನೆಲುಬಾಗಿ ನಿಂತಿದೆ. ಆದರೆ ಆ ಸಂಖ್ಯೆ ಬಹು ಕಡಿಮೆ. ಇದರಿಂದ ವಂಚಿತರಾದ ಜನಸಮೂಹದ ಪ್ರಮಾಣವೇ ಹೆಚ್ಚು. ಇದನ್ನು ಸೂಕ್ಷ್ಮವಾಗಿ ಗಮನಿಸಿದ್ದ ಮತ್ತು ಈಗ್ಗೆ ಕೆಲವಾರು ವರ್ಷಗಳ ಹಿಂದೆ ಭರಮಸಾಗರದ ಶಾಸಕರಾಗಿದ್ದ ಬಿ.ಎಂ.ತಿಪ್ಪೇಸ್ವಾಮಿಯವರು, ‘ಒಮ್ಮೆ ಮೀಸಲಾತಿಯ ಲಾಭ ಪಡೆದವರನ್ನು ಆ ವ್ಯಾಪ್ತಿಯಿಂದ ಹೊರಗಿಡಬೇಕು. ಬೇರೆ ಫಲಾನುಭವಿಗಳಿಗೆ ಅವಕಾಶವನ್ನು ನೀಡಬೇಕು’ ಎಂದು ಹೇಳಿದ್ದರು. ಆಗ ಹೆಚ್ಚೆಚ್ಚು ಜನರನ್ನು ಮೀಸಲಾತಿಯ ಪರಿಧಿಯೊಳಗೆ ತರಬಹುದೆಂದು ಅವರು ಆಶಿಸಿದ್ದರು. ಅದೊಂದು ಸರಿಯಾದ ಕ್ರಮವೇ ಆಗಿತ್ತು. ಆದರೆ, ಅವರ ನಿಲುವಿಗೆ ಸಂಬಂಧಿತ ಸಮುದಾಯಗಳ ಶಾಸಕರ ಬೆಂಬಲ ದೊರೆಯಲಿಲ್ಲ. ಅದು ಅಲ್ಲಿಗೇ ನಿಂತುಹೋಯಿತು. ಅದು ಅಂದಿನ ಸಂಗತಿ.

ಈಗ ನಮ್ಮ ದೇಶದ ವಸ್ತುಸ್ಥಿತಿ ಬಹಳಷ್ಟು ಭಿನ್ನವಾಗಿದೆ. ಈ ಭಿನ್ನವಾದ ಪರಿಸ್ಥಿಯನ್ನು ಸಿದ್ದನಗೌಡ ಪಾಟೀಲರು ತಮ್ಮ ಲೇಖನದಲ್ಲಿ ಸರಿಯಾಗಿ ವಿಶ್ಲೇಷಿಸಿದ್ದಾರೆ. ದೇಶ ಈಗ ಪರೋಕ್ಷವಾಗಿ ಸಾರ್ವಜನಿಕ ಸ್ವಂತಿಕೆಯನ್ನು ಕಳೆದುಕೊಳ್ಳುತ್ತಾ ಖಾಸಗೀಕರಣದತ್ತ ದಾಪುಗಾಲು ಹಾಕುತ್ತಿದೆ. ಸರ್ಕಾರ, ಕೈಗಾರಿಕೆ, ಸೇವಾಕ್ಷೇತ್ರಗಳೆಲ್ಲಾ ಖಾಸಗಿ ವ್ಯಕ್ತಿಗಳ ತೆಕ್ಕೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾ, ಹೊರಗುತ್ತಿಗೆಯ ಆಡುಂಬೊಲವಾಗುತ್ತಿದೆ. ಪರಿಣಾಮ, ಸಾಹುಕಾರಿಕೆ ಮೆರೆಯುತ್ತಿದೆ. ಈ ರೀತಿಯ ವ್ಯವಸ್ಥೆಗೆ ನಾಂದಿ ಹಾಡಿದ್ದು 1991-92ರ ಸಾಲಿನಲ್ಲಿ, ಕಾಂಗ್ರೆಸ್ ಪಕ್ಷ ಕೇಂದ್ರದಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿದ್ದಾಗಲೇ. ಅದನ್ನು ನಮ್ಮ ಪ್ರಧಾನಿಗಳಾದ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರ ಯಶಸ್ವಿಯಾಗಿ ಮುಂದುವರೆಸುತ್ತಿದೆ. ಸಿದ್ದನಗೌಡರ ಲೇಖನದ ಪ್ರಕಾರ ಸದ್ಯ ನಮ್ಮ ರಾಜ್ಯದಲ್ಲಿ 2,69,572 ಸರ್ಕಾರಿ ಉದ್ಯೋಗಿಗಳು ಖಾಲಿ ಬಿದ್ದಿವೆ. ಒಟ್ಟು ಉದ್ಯೋಗಿಗಳ ಸಂಖ್ಯೆ 7,79,439. ಸದ್ಯ ಸರ್ಕಾರ ಖಾಲಿ ಬಿದ್ದಿರುವ ಹುದ್ದೆಗಳನ್ನು ತುಂಬಿಸುವುದಿರಲಿ, ಉಳಿದ ಹುದ್ದೆಗಳನ್ನೂ ಖಾಸಗಿಯವರಿಗೆ ನೀಡುವುದರಲ್ಲಿ ಅನುಮಾನವಿಲ್ಲ. ದೇಶದ ಪರಿಸ್ಥಿತಿಯೂ ಹೀಗೇ ಇದೆ.

ಇಂತಹ ಪ್ರಕ್ಷುಬ್ಧ ಅಥವಾ ವಿಚಿತ್ರ ಅಥವಾ ವಿಷಮ ಪರಿಸ್ಥಿತಿಯಲ್ಲಿ ನಮ್ಮಲ್ಲಿನ ಕೆಲವು ಸಮುದಾಯಗಳು ತಮ್ಮ ಮಠಾಧಿಪತಿಗಳ ನೇತೃತ್ವದಲ್ಲೋ ಅಥವಾ ಸಮುದಾಯದ ಮುಖಂಡರ ನೇತೃತ್ವದಲ್ಲೋ ತರಾವರಿ ಕಾರಣಗಳನ್ನು ಮುಂದುಮಾಡಿಕೊಂಡು ಮೀಸಲಾತಿಗಾಗಿ ಹೋರಾಟಗಳನ್ನು ನಡೆಸುತ್ತಿವೆ. ಹಾಗೆ ಮಾಡುತ್ತಿರುವವರಿಗೆ ನಮ್ಮ ದೇಶದ ನೈಜ ಚಿತ್ರಣವಿದೆಯೋ ಇಲ್ಲವೋ ತಿಳಿಯದು. ಖಾಸಗೀಕರಣದಿಂದ ಸರ್ಕಾರಿ ಉದ್ಯೋಗಗಳೇ ನಾಪತ್ತೆಯಾಗುತ್ತಿರುವಾಗ, ಇವರೇನು ಉದ್ಯೋಗರಹಿತ ಮೀಸಲಾತಿಗಾಗಿ ಹೋರಾಟ ನಡೆಸುತ್ತಿದ್ದಾರೆಯೋ ಹೇಗೆ ಎಂಬ ಅನುಮಾನ ಬರುತ್ತಿದೆ. ಸಿದ್ದನಗೌಡರು ಹೇಳಿರುವ ಹಾಗೆ ಉದ್ಯೋಗ ಕ್ಷೇತ್ರವೇ ನಾಶವಾಗುತ್ತಿರವಾಗ ಮೀಸಲಾತಿಗಾಗಿ ನಡೆಸುತ್ತಿರುವ ಪೈಪೋಟಿ ಅರ್ಥಹೀನ ಎಂಬುದು ಇಂದಿನ ವಾಸ್ತವ.

ಹೊರೆಯಾಲ ದೊರೆಸ್ವಾಮಿ,
ಲೇಖಕ ಮತ್ತು ದಲಿತ ಚಿಂತಕ

‘ಬಲಾಢ್ಯರು ಮೀಸಲಾತಿ ಕೇಳುತ್ತಿರುವುದೇಕೆ?’

ಭಾರತ ದಾಸ್ಯದಿಂದ ಮುಕ್ತವಾದಾಗ, ಪ್ರತಿಯೊಂದು ವಿಷಯದಲ್ಲಿಯೂ ಕ್ಷೀಣವಾಗಿತ್ತು. ಆಗ, ಮುಖ್ಯವಾಗಿ ದೇಶ ಅಭಿವೃದ್ಧಿ ಹೊಂದಬೇಕು, ಜೊತೆಗೆ ಎಲ್ಲ ಕ್ಷೇತ್ರದ ಜನರೂ ಎಲ್ಲ ಕ್ಷೇತ್ರಗಳಲ್ಲೂ ಬಲಿಷ್ಠವಾಗ ಬೇಕೆಂಬುದು ಬಯಕೆಯಾಗಿತ್ತು. ನಾನಾ ರೀತಿಯಲ್ಲಿ ಏರುಪೇರುಗಳಿಂದ ಬಳಲುತ್ತಿದ್ದ ಸಮಾಜದಲ್ಲಿ ಎಲ್ಲ ರೀತಿಯ ಸಮಾನತೆ, ಅವಕಾಶಗಳ ವಂಚಿತರ ಸಂವಿಧಾನಬದ್ಧ ಅಭ್ಯುದಯ ಮತ್ತು ದುರ್ಬಲ ವರ್ಗಗಳನ್ನು ಬಲಿಷ್ಠಗೊಳಿಸಿ ಸಮಾನತೆ ಸಾಧಿಸಬೇಕಿತ್ತು. ಇದಕ್ಕಾಗಿ ಮೀಸಲಾತಿಯನ್ನು ತರಲಾಯಿತು.

ಆದರೆ ಆಗುತ್ತಿರುವುದೇನು? ಬಲಿಷ್ಠರು, ಮೇಲ್ವರ್ಗದವರು ತಮ್ಮ ಸಂಖ್ಯಾಬಲದಿಂದ ಸಮಾಜದ ಅಭಿವೃದ್ಧಿಯ ಬಗ್ಗೆಯೇ ಹೋರಾಟಕ್ಕಿಳಿದಿರುವುದು ಅಮಾನವೀಯ. ಸಂವಿಧಾನ, ಸಂಸತ್ತು ನಿರ್ಣಯಿಸಿದ ಮೀಸಲಾತಿಯನ್ನು, ಮಠಾಧೀಶರ ಪ್ರಭಾವ ಬಳಸಿಕೊಂಡು ಹೆಚ್ಚಿಸಲು ರಸ್ತೆಗಿಳಿದಿರುವುದು, ವಂಚಿತ ಸಮುದಾಯಗಳ ಗಾಯದ ಮೇಲೆ ಬರೆ ಹಾಕಿದಂತಾಗುತ್ತಿದೆ. ಸಂವಿಧಾನದ ರೀತ್ಯಾ ಆಡಳಿತ ನಡೆಸುವೆನೆಂದು ಪ್ರಮಾಣವಚನ ಸ್ವೀಕರಿಸುವವರು, ಮಠಾಧೀಶರ ನಾಯಕತ್ವದಲ್ಲಿ ಸಂವಿಧಾನದ ವಿರುದ್ಧ ಕಹಳೆ ಊದುತ್ತಿರುವುದು ನಾಗರಿಕ ಸಂಪ್ರದಾಯವೇ? ಜಾತಿಯಲ್ಲಿಯೂ ಮುಂಚೂಣಿಯಲ್ಲಿರುವವರೇ ದಶಕಗಳಿಂದ ಮೇಲಿರುವುದೇಕೆ? ಆ ಜಾತಿಗಳಲ್ಲಿನ ಕೆಳ ಶ್ರೇಣಿಯಲ್ಲಿರುವವರು ಮೇಲಕ್ಕೇರಲು ಅವಕಾಶ ಕೊಡುತ್ತಿಲ್ಲವೇಕೆ? ತಮ್ಮ ಸಮುದಾಯದಲ್ಲೇ ಉಳಿದವರಿಗೆ ಅವಕಾಶವನ್ನು ನಿರಾಕರಿಸುತ್ತಿರುವವರು, ಕೆಳವರ್ಗ ಮತ್ತು ವಂಚಿತ ವರ್ಗಗಳಿಗೆ ಅವಕಾಶ ಕೊಡುತ್ತಾರೆಯೇ? ಎಲ್ಲ ಸಮಾಜದ, ಎಲ್ಲ ಸ್ತರದವರೂ ಅಭಿವೃದ್ಧಿ ಹೊಂದಿ, ನೂರಾರು ಉಪಜಾತಿಗಳ ಅಭಿಲಾಷೆಗಳನ್ನು ಈಡೇರಿಸುವ ಮಾನವೀಯತೆಯನ್ನು ಬೆಳಿಸಿಕೊಳ್ಳುವುದಿಲ್ಲವೇಕೆ?

ಕೆ.ಎನ್.ಭಗವಾನ್, ಬೆಂಗಳೂರು



ಗುಜರಾತಿನಲ್ಲಿ ಪಾಟಿದಾರ್ ಸಮುದಾಯದವರು ಮೀಸಲಾತಿಗಾಗಿ ಆಗ್ರಹಿಸಿ 2017ರಲ್ಲಿ ಹಾರ್ದಿಕ್ ಪಟೇಲ್ ನೇತೃತ್ವದಲ್ಲಿ ಭಾರಿ ಹೋರಾಟ ನಡೆಸಿದ್ದರು. ಈಗ ಇಡಬ್ಲ್ಯುಎಸ್ ಅಡಿಯಲ್ಲಿ ಈ ಸಮುದಾಯಕ್ಕೆ ಮೀಸಲಾತಿ ದೊರೆತಿದೆ

‘ಅನಗತ್ಯ ಗೊಂದಲ’

ಇಡಬ್ಲ್ಯುಎಸ್ ಮೀಸಲಾತಿ ಬಗ್ಗೆ ಅನಗತ್ಯ ಗೊಂದಲಗಳನ್ನು ಸೃಷ್ಟಿಸಲಾಗುತ್ತಿದೆ. ಶೇ 4ರಷ್ಟಿರುವ ಮೇಲುಜಾತಿಯವರಿಗೆ ಶೇ 10ರಷ್ಟು ಮೀಸಲಾತಿ ಏಕೆ? ಎಂಬ ಪ್ರಶ್ನೆಯನ್ನು ಕೆಲವರು ಎತ್ತಿದ್ದಾರೆ. ಆದರೆ ಅದು ಅಪ್ರಸ್ತುತ. ಈ ಮೀಸಲಾತಿ ಆದೇಶದಲ್ಲಿ ಎಲ್ಲಿಯೂ ಮೇಲುಜಾತಿ ಮತ್ತು ಕೆಳಜಾತಿ ಎಂದು ನಮೂದಿಸಿಲ್ಲ. ಇದುವರೆಗಿನ ಯಾವುದೇ ಮೀಸಲಾತಿ ವ್ಯಾಪ್ತಿಗೆ ಬರದಿರುವ ಆರ್ಥಿಕವಾಗಿ ದುರ್ಬಲರಾದವರಿಗೆ ಈ ಸೌಲಭ್ಯವನ್ನು ನೀಡಲಾಗುತ್ತಿದೆ. ಮಹಾರಾಷ್ಟ್ರದಲ್ಲಿ ರೈತಾಪಿ ಸಮುದಾಯವಾಗಿರುವ ಮರಾಠರಿಗೂ ಇಡಬ್ಲ್ಯುಎಸ್ ಮೀಸಲಾತಿ ಸೌಲಭ್ಯ ನೀಡಲಾಗಿದೆ.

ಆರ್ಥಿಕ ಸ್ಥಿತಿ ಆಧಾರಿತವಾದ ಮೀಸಲಾತಿಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಒಬಿಸಿ ಗುಂಪುಗಳನ್ನು ಹೊರಗೆ ಇರಿಸಿರುವುದು ತಾರತಮ್ಯ ಮಾಡಿದಂತಾಗಿದೆ ಎಂಬುದು ಇನ್ನೊಂದು ಆಕ್ಷೇಪ. ಈ ಸಮುದಾಯಗಳು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿಯುವಿಕೆಯ ಆಧಾರದ ಮೇಲೆ ಈಗಾಗಲೇ ಮೀಸಲಾತಿ ಪಡೆಯುತ್ತಿರುವುದರಿಂದ ಮತ್ತೆ ಆರ್ಥಿಕ ಸ್ಥಿತಿ ಆಧಾರದ ಮೇಲೆಯೂ ಮೀಸಲಾತಿಯನ್ನು ನೀಡುವ ಅಗತ್ಯ ಉದ್ಭವಿಸುವುದಿಲ್ಲ.

ಸ್ವಾತಂತ್ರ್ಯದ ನಂತರ ಆಧುನಿಕತೆ ಮತ್ತು ಜಾಗತೀಕರಣ ಕಾರಣದಿಂದ ಅವಕಾಶಗಳು ಮತ್ತು ಸೌಲಭ್ಯಗಳು ಪ್ರವಾಹೋಪಾದಿಯಲ್ಲಿ ತೆರೆದುಕೊಂಡಿವೆ. ಒಂದು ಕಾಲದಲ್ಲಿ ದಲಿತರು ಮತ್ತು ಹಿಂದುಳಿದವರಾಗಿದ್ದವರು ಆರೇಳು ದಶಕಗಳಿಂದ ಮೀಸಲಾತಿಯಿಂದಾಗಿ ವಿವಿಧ ಕ್ಷೇತ್ರಗಳಲ್ಲಿ ಮುಂದೆ ಬರುತ್ತಿರುವುದು ಸ್ವಾಗತಾರ್ಹ ಬೆಳವಣಿಗೆ. ಆದರೆ ಅದೇ ವೇಳೆ ‘ಮುಂದುವರಿದವರಲ್ಲಿ’ ಅವಕಾಶ ವಂಚಿತರು ಮತ್ತು ಬಡವರ ಸಂಖ್ಯೆ ಹೆಚ್ಚುತ್ತಿದೆ. ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿಯುವಿಕೆಯಂತೆ ಬಡತನವೂ ಒಂದು ಶಾಪ. ಅವರೆಲ್ಲಾ ಸಾವಿರಾರು ವರ್ಷಗಳಿಂದ ಸೌಲಭ್ಯಗಳನ್ನು ಪಡೆದಿದ್ದಾರೆ ಎಂಬ ಅಭಿಪ್ರಾಯ ಸರಿಯಲ್ಲ. ಆಗ ನಮ್ಮ ದೇಶ ಪ್ರಾಚೀನ ಸ್ಥಿತಿಯಲ್ಲಿತ್ತು. ಸಾಕಷ್ಟು ಸೌಲಭ್ಯಗಳೇ ಸೃಷ್ಟಿಯಾಗಿರಲಿಲ್ಲ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ‘ಮುಂದುವರಿದವರಲ್ಲಿನ’ ಬಡವರ ಸಂಖ್ಯೆಯೇ ಒಂದು ಸಾಮಾಜಿಕ ಸಮಸ್ಯೆಯಾಗಬಹುದು. ಹಿಂದೆ ಯಾವಾಗಲೋ ಆಗಿರಬಹುದಾದ ಐತಿಹಾಸಿಕ ಅನ್ಯಾಯಗಳಿಗೆ ಇಂದಿನ ಯುವಕರನ್ನು ಬಲಿಪಶುಗಳನ್ನಾಗಿ ಮಾಡುವುದು ಸರಿಯಲ್ಲ. ನಮ್ಮದು ಚಲನಶೀಲ ಸಮಾಜ. ಬದಲಾದ ಕಾಲಮಾನಕ್ಕೆ ಅನುಗುಣವಾಗಿ ಸಂವಿಧಾನದಲ್ಲಿಯೂ ಸೂಕ್ತ ಬದಲಾವಣೆಗೆ ಅವಕಾಶ ಇದ್ದೇ ಇದೆ.

ಲಂಭೋದರ ಎಲ್.ವಿ., ಸಾಗರ

‘ಇಡಬ್ಲ್ಯುಎಸ್ ಸಂವಿಧಾನದ ಆಶಯಕ್ಕೆ ಬದ್ಧವಾಗಿದೆ’

ಇಡಬ್ಲ್ಯುಎಸ್ ಮೀಸಲಾತಿಯನ್ನು ದೇಶದಲ್ಲಿ ಇದುವರಿಗೆ ಜಾರಿಯಲ್ಲಿರುವ ಎಲ್ಲಾ ಮೀಸಲಾತಿಗಳಿಂದ ವಂಚಿತರಾದ ‘ಮುಂದುವರೆದ’ ಸುಮಾರು 144 ಜಾತಿಗಳಿಗೆ ಸೇರಿದ ಆದರೆ ಆರ್ಥಿಕವಾಗಿ ದುರ್ಬಲರಾಗಿರುವ ವರ್ಗಗಳಿಗೆ ಸಾಮಾಜಿಕ ನ್ಯಾಯವೊದಗಿಸಲು ಜಾರಿಗೆ ತರಲಾಗಿದೆ. ಈ ಆರ್ಥಿಕ ದುರ್ಬಲ ಸ್ಥಿತಿಯಾಧಾರಿತ ಮೀಸಲಾತಿಯನ್ನು ನಮ್ಮ ಸಂವಿಧಾನದ ಪ್ರಸ್ತಾವನೆಯ ಹಾಗೂ ರಾಜ್ಯನೀತಿ ನಿರ್ದೇಶಕ ತತ್ವಗಳ 46ನೇ ವಿಧಿಯ ಆಶಯದಂತೆ ಜಾರಿಗೊಳಿಸಲಾಗಿದೆ. ಆರ್ಥಿಕ ದುರ್ಬಲತೆಯೂ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದಳಿಯುವಿಕೆಯ ಹಾಗೆ ಜನರನ್ನು ಸಾಮಾಜಿಕ ನ್ಯಾಯದಿಂದ ವಂಚಿತರನ್ನಾಗಿ ಮಾಡುತ್ತಿದೆ ಎಂಬುದನ್ನು ನಮ್ಮ ಸಂಸತ್ತು ಮನಗಂಡಿದೆ.

1980ರ ದಶಕದಲ್ಲಿ ಕರ್ನಾಟಕವೂ ಸೇರಿದಂತೆ ದೇಶದಲ್ಲಿ ಮುಂದುವರೆದ ಜಾತಿಗಳಲ್ಲಿ ಆರ್ಥಿಕವಾಗಿ ದುರ್ಬಲರಾದವರಿಗೆ ಮೀಸಲಾತಿ ಜಾರಿಮಾಡಲಾಗಿತ್ತು. ಆದರೆ, ಸಂವಿಧಾನಕ್ಕೆ ತಿದ್ದುಪಡಿ ಮಾಡದೇ ಈ ಮೀಸಲಾತಿಯನ್ನು ಜಾರಿಗೊಳಿಸಲಾಗಿದೆ ಎಂದು ಸುಪ್ರೀಂ ಕೋರ್ಟ್ ಇದನ್ನು ರದ್ದು ಮಾಡಿತ್ತು. ನಂತರ ಯುಪಿಎ ಸರ್ಕಾರ ನೇಮಿಸಿದ ಸಿನ್ಹೊ ಆಯೋಗವು, ಮೇಲ್ಜಾತಿಗಳಲ್ಲಿ ಆರ್ಥಿಕವಾಗಿ ದುರ್ಬಲರಾದವರ ಸಂಖ್ಯೆ ದೇಶದಲ್ಲಿ ಬಡತನರೇಖೆಗಿಂತ ಕೆಳಗಿರುವ ಒಟ್ಟು ಜನಸಂಖ್ಯೆಯ ಶೇ19.5ರಷ್ಟು ಇರುವುದನ್ನು ಗುರುತಿಸಿತ್ತು. ಇವರಿಗೆ ಶೇ15ರಷ್ಟು ಮೀಸಲಾತಿ ನೀಡಬಹುದೆಂದು 2004-05 ರಲ್ಲಿ ವರದಿ ನೀಡಿತ್ತು. ತದನಂತರ ನಮ್ಮ ಸಂವಿಧಾನಕ್ಕೆ 12-01-2019 ರಂದು ಸಂಸತ್ತು 103ನೇ ತಿದ್ದುಪಡಿ ತಂದಿದೆ. ಸಂಸತ್ತಿನಲ್ಲಿ ಡಿಎಂಕೆ ಹೊರತುಪಡಿಸಿ ಎಲ್ಲಾ ರಾಜಕೀಯ ಪಕ್ಷಗಳೂ ಇದಕ್ಕೆ ಬೆಂಬಲ ನೀಡಿವೆ.

ನವೆಂಬರ್ 7 ರಂದು ಸುಪ್ರೀಂ ಕೋರ್ಟ್ ತನ್ನ 399 ಪುಟಗಳ ಬಹುಮತದ ತೀರ್ಪಿನಲ್ಲಿ, ಈ ಮೀಸಲಾತಿಯ ಸಿಂಧುತ್ವವನ್ನು ಎತ್ತಿಹಿಡಿದಿದೆ. ಸಂಸತ್ತಿನಲ್ಲಿ ಈ ತಿದ್ದುಪಡಿಯನ್ನು ಕಾಂಗ್ರೆಸ್ ಬೆಂಬಲಿಸಿತ್ತು. ಆದರೆ, ಈಗ ಸುಪ್ರೀಂ ಕೋರ್ಟ್‌ನಲ್ಲಿ ಈ ತೀರ್ಪಿನ ಮರುಪರಿಶೀಲನೆಗೆ ಕಾಂಗ್ರೆಸ್ ಮತ್ತು ಡಿಎಂಕೆ ಅರ್ಜಿ ಸಲ್ಲಿಸಿವೆ. ಇದು ಸಂವಿಧಾನ ವಿರೋಧಿ ಮತ್ತು ನ್ಯಾಯಾಂಗ ವಿರೋಧಿ ನಡೆಯಲ್ಲವೇ?

ಕರ್ನಾಟಕದಲ್ಲಿ ಕೇವಲ ಶೇ3ರಷ್ಟಿರುವ ಬ್ರಾಹ್ಮಣರು, ಶೇ 1.5ರಷ್ಟಿರುವ ಆರ್ಯವೈಶ್ಯರು ಮತ್ತು ಜೈನರು ಹಾಗೂ ಗುಜರಾತಿನಲ್ಲಿ ಶೇ 14.5ರಷ್ಟಿರುವ ಪಾಟೀದಾರರಂತಹ ಕೆಲವೇ ಜಾತಿಗಳ ಪ್ರಯೋಜನಕ್ಕಾಗಿ ಈ ಮೀಸಲಾತಿ ತರಲಾಗಿದೆ ಎಂದು ಕೆಲವು ಸಂವಿಧಾನ ಪಂಡಿತರು ಹೇಳುತ್ತಿದ್ದಾರೆ. ಆದರೆ ಕೆಲವೇ ಜಾತಿಗಳ ಅನುಕೂಲಕ್ಕಾಗಿ ಈ ಮೀಸಲಾತಿಯನ್ನು ತರಲಾಗಿಲ್ಲ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಮೀಸಲಾತಿ ಎಂಬ ಸಕಾರಾತ್ಮಕ ತಾರತಮ್ಯದ ಪ್ರಕ್ರಿಯೆಯಿಂದ 144 ಜಾತಿಗಳ ಕಡುಬಡವರನ್ನು ಹೊರಗಿಡಲಾಗಿತ್ತು. ಅಂತಹವರು ಶಿಕ್ಷಣ ಮತ್ತು ಉದ್ಯೋಗದಿಂದ ವಂಚಿತರಾಗುವುದನ್ನು ತಡೆಯಲು ಈ ಮೀಸಲಾತಿ ತರಲಾಗಿದೆ.

ಆದರೆ ಯಾರೂ ಇದನ್ನು ಪ್ರಶ್ನಿಸುತ್ತಿಲ್ಲ. ರಾಜ್ಯ ವಿಧಾನಸಭೆಗೆ ಚುನಾವಣೆ ಸಮೀಪಿಸುತ್ತಿದೆ. ಈ ಸಂದರ್ಭದಲ್ಲಿ ಮತಲಾಭಕ್ಕಾಗಿ ರಾಜ್ಯ ಸರ್ಕಾರವು, ಪರಿಶಿಷ್ಟ ಸಮುದಾಯಗಳಿಗೆ ಮೀಸಲಾತಿ ಹೆಚ್ಚಿಸಿ ಸುಗ್ರೀವಾಜ್ಞೆ ಹೊರಡಿಸಿದೆ. ರಾಜ್ಯದ ಕೆಲವು ಬಲಾಢ್ಯ ಸಮುದಾಯಗಳು ತಮ್ಮನ್ನು ಎಸ್‌ಸಿ ಅಥವಾ ಎಸ್‌ಟಿ ಅಥವಾ ಪ್ರವರ್ಗ2ಎಗೆ ಸೇರಿಸಿ ಎಂದು ಹೋರಾಡುತ್ತಿವೆ. ಇವುಗಳ ಮಧ್ಯೆ, ಕೇಂದ್ರ ಮತ್ತು 12 ರಾಜ್ಯಗಳು ಜಾರಿಗೆ ತಂದಿರುವ ಇಡಬ್ಲ್ಯುಎಸ್ ಮೀಸಲಾತಿಯನ್ನು ಕರ್ನಾಟಕ ಸರ್ಕಾರ ತಡೆಹಿಡಿದಿದೆ. ಸಂಖ್ಯೆಯಲ್ಲಿ ಹೆಚ್ಚಿಲ್ಲದ, ರಾಜ್ಯದಾದ್ಯಂತ ಚದುರಿರುವ, ಆದರೂ 21 ವಿಧಾನಸಭಾ ಕ್ಷೇತ್ರಗಳಲ್ಲಿ ನಿರ್ಣಾಯಕ ಮತದಾರರಾಗಿರುವ ಇವರ ನ್ಯಾಯಯುತವಾದ ಬೇಡಿಕೆಗೆ ಸರ್ಕಾರ ಹೇಗೆ ಪ್ರತಿಸ್ಪಂದಿಸುತ್ತದೆ ಎಂಬುದನ್ನು ಈ ವರ್ಗಗಳ ಮತದಾರರು ಕಾತರದಿಂದ ಎದುರು ನೋಡುತ್ತಿದ್ದಾರೆ. ಅದಿಲ್ಲವಾದರೆ ತಾವೂ ಇತರರಂತೆ ಬೀದಿಗಿಳಿಯಲು ಸಿದ್ಧರಾಗುತ್ತಿರುವ ವಾಸ್ತವವನ್ನು ಸರ್ಕಾರ ಗಮನಿಸಬೇಕಾಗಿದೆ.

ಸುಬ್ರಾಯ ಎಂ.ಹೆಗಡೆ ಗೌರೀಬಣ್ಣಿಗೆ,
ನಿರ್ದೇಶಕ, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ

2020ರ ನಂತರ ಸತತ ಎಂಟನೇ ಬಾರಿಗೆ ಮೊಟಕು

ಅವಧಿಗೂ ಮುನ್ನವೇ ಸಂಸತ್ ಅಧಿವೇಶನ ಅಂತ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಚಳಿಗಾಲದ ಅಧಿವೇಶವನ್ನು ಅವಧಿಗೂ ಆರು ದಿನ ಮೊದಲೇ ಶುಕ್ರವಾರ ಕೊನೆಗೊಳಿಸಲಾಗಿದೆ. ಈ ಮೂಲಕ ಅವಧಿಗೂ ಮುನ್ನವೇ ಸಂಸತ್ತಿನ ಅಧಿವೇಶನವನ್ನು ಮೊಟಕುಗೊಳಿಸುವ ಸರ್ಕಾರದ ಸಂಪ್ರದಾಯ ಮುಂದುವರೆದಿದೆ. 2020 ಬಜೆಟ್ ಅಧಿವೇಶನವನ್ನು ಸರ್ಕಾರವು ಅವಧಿಗೂ ಮುನ್ನವೇ ಮೊಟಕುಗೊಳಿಸಿತ್ತು. ಆನಂತರ ಸತತವಾಗಿ ಎಂಟು ಅಧಿವೇಶನಗಳನ್ನು ಅವಧಿಗೂ ಮುನ್ನವೇ ಮುಕ್ತಾಯಗೊಳಿಸಲಾಗಿದೆ.

ಈ ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಸರ್ಕಾರವು ತನ್ನ ಕೆಲವು ಮಹತ್ವಾಕಾಂಕ್ಷಿ ಮಸೂದೆಗಳೂ ಸೇರಿದಂತೆ ಒಟ್ಟು 25 ಮಸೂದೆಗಳನ್ನು ಮಂಡಿಸಲು ಸಿದ್ಧತೆ ಮಾಡಿಕೊಂಡಿತ್ತು. ಆ ಮಸೂದೆಗಳನ್ನು ಸಂಸತ್ತಿನ ಉಭಯ ಸದನಗಳ ಕಲಾಪ ಪಟ್ಟಿಯಲ್ಲೂ ಸೇರಿಸಿತ್ತು. ಆದರೆ, ಇವುಗಳಲ್ಲಿ ಬಹುತೇಕ ಮಸೂದೆಗಳು ಪಟ್ಟಿಯಲ್ಲೇ ಉಳಿದವು. ಜತೆಗೆ ಚೀನಾ ಗಡಿತಂಟೆಯ ಬಗ್ಗೆ ಚರ್ಚೆ ನಡೆಸಲು ಎಲ್ಲಾ ವಿರೋಧ ಪಕ್ಷಗಳೂ ಆಗ್ರಹಿಸಿದ್ದವು. ಆದರೆ ಈ ಚರ್ಚೆ ನಡೆಯದೆಯೇ ಅಧಿವೇಶನ ಮೊಟಕುಗೊಳಿಸಲಾಗಿದೆ.

ಅರುಣಾಚಲ ಪ್ರದೇಶದ ತವಾಂಗ್ ಬಳಿ ಕಳೆದ ವಾರ ಚೀನಾ ಮತ್ತು ಭಾರತದ ಸೈನಿಕರ ಮಧ್ಯೆ ಸಂಘರ್ಷ ನಡೆದಿತ್ತು. ಎರಡೂ ಸದನಗಳಲ್ಲಿ ತವಾಂಗ್ ಸಂಘರ್ಷದ ಕುರಿತ ಚರ್ಚೆಗೆ ವಿಪಕ್ಷಗಳು ಒತ್ತಾಯಿಸಿದ್ದವು. ಆದರೆ, ಸಭಾಧ್ಯಕ್ಷರು ಚರ್ಚೆಗೆ ಅವಕಾಶ ನೀಡಿರಲಿಲ್ಲ. ಶುಕ್ರವಾರವೂ ವಿಪಕ್ಷಗಳು ಚರ್ಚೆಗೆ ಒತ್ತಾಯಿಸಿದ್ದರಿಂದ ಉಭಯ ಸದನಗಳ ಕಲಾಪ ಪದೇ ಪದೇ ಮುಂದೂಡಿಕೆಯಾಗಿತ್ತು.



ಸಂಸತ್ ಭವನ

ಈ ಚರ್ಚೆಗೆ ಅವಕಾಶ ನೀಡದೇ ಇರುವ ಬಗ್ಗೆ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಷಿ ಅವರು ಸ್ಪಷ್ಟನೆ ನೀಡಿದ್ದಾರೆ. ಯುಪಿಎ ಸರ್ಕಾರ ವಿದ್ದಾಗ ಚೀನಾ ಮತ್ತು ಪಾಕಿಸ್ತಾನದ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ನಡೆಸಲು ಅವಕಾಶ ನೀಡಿರಲಿಲ್ಲ. ಸಂಸತ್ತಿನಲ್ಲಿ ಚರ್ಚೆ ನಡೆದರೆ ಎರಡೂ ದೇಶಗಳ ಜತೆಗಿನ ಮಾತುಕತೆಗೆ ಧಕ್ಕೆಯಾಗುತ್ತದೆ ಎಂದು ಅಂದಿನ ಸರ್ಕಾರ ಹೇಳಿತ್ತು. ಅದನ್ನು ಅಂದಿನ ವಿರೋಧ ಪಕ್ಷವಾಗಿದ್ದ ಬಿಜೆಪಿ ಗೌರವಿಸಿತ್ತು. ಇಂದು ನಮ್ಮ ಸರ್ಕಾರ ಅದೇ ಮಾತು ಹೇಳುತ್ತಿದೆ. ಆದರೆ ವಿರೋಧ ಪಕ್ಷಗಳು ಈ ಸೂಕ್ಷ್ಮವನ್ನು ಅರ್ಥಮಾಡಿಕೊಳ್ಳುತ್ತಿಲ್ಲ ಎಂದು ಅವರು ಹೇಳಿದ್ದಾರೆ.

ಸದಸ್ಯರಿಂದ ಒಮ್ಮತದ ಅಭಿಪ್ರಾಯ–ಓಂ ಬಿರ್ಲಾ: ಅಧಿವೇಶನವನ್ನು ಮೊಟಕುಗೊಳಿಸುವ ಬಗ್ಗೆ ಲೋಕಸಭೆಯ ಕಲಾಪ ಸಲಹಾ ಸಮಿತಿ (ಬಿಎಸಿ) ಸಭೆಯಲ್ಲಿ ಎಲ್ಲ ಪಕ್ಷಗಳ ನಾಯಕರಿಂದ ಒಮ್ಮತದ ಅಭಿಪ್ರಾಯ ವ್ಯಕ್ತವಾಗಿದೆ. ಎಲ್ಲಾ ಪಕ್ಷಗಳ ಸಹಮತದಿಂದಲೇ ಅಧಿವೇಶನವನ್ನು ಅವಧಿಗೂ ಮುನ್ನ ಮುಕ್ತಾಯ ಮಾಡಲಾಗಿದೆ ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಅವಧಿಗೂ ಮುನ್ನ ಮುಕ್ತಾಯವಾಗಿದ್ದರೂ, ಈ ಅಧಿವೇಶನದ ಉತ್ಪಾದಕತೆ ಹೆಚ್ಚು ಎಂದು ಸರ್ಕಾರವು ಹೇಳಿದೆ. ಲೋಕಸಭೆಯ ಉತ್ಪಾದಕತೆ ಶೇ 97ರಷ್ಟು ಮತ್ತು ರಾಜ್ಯಸಭೆಯ ಉತ್ಪಾದಕತೆ ಶೇ 102ರಷ್ಟು ಎಂದು ಸರ್ಕಾರವು ಹೇಳಿದೆ.

ಲೋಕಸಭೆಯಲ್ಲಿ ಏಳು ಮಸೂದೆಗಳಿಗೆ ಅನುಮೋದನೆ ಪಡೆಯಲಾಗಿದೆ. ರಾಜ್ಯಸಭೆಯಲ್ಲಿ ಒಂಬತ್ತು ಮಸೂದೆಗಳಿಗೆ ಅನುಮೋದನೆ ಪಡೆಯಲಾಗಿದೆ. ಹಿಂದಿನ ಅಧಿವೇಶನದಲ್ಲಿ ಲೋಕಸಭೆಯ ಅನುಮೋದನೆ ಪಡೆದಿದ್ದ ಎರಡು ಮಸೂದೆಗಳಿಗೆ ಈಗ ರಾಜ್ಯಸಭೆಯ ಅನುಮೋದನೆಯೂ ದೊರೆತಿದೆ. ಒಟ್ಟು ಒಂಬತ್ತು ಮಸೂದೆಗಳಿಗೆ ಸಂಸತ್ತಿನ ಉಭಯ ಸದನಗಳ ಅನುಮೋದನೆ ದೊರೆತಂತಾಗಿದೆ.

ಅಧಿವೇಶನದ ಅವಧಿಯ ಸುತ್ತ

- **7** ನೇ ಡಿಸೆಂಬರ್ — ಅಧಿವೇಶನ ಆರಂಭವಾದ ದಿನಾಂಕ
- **29** ನೇ ಡಿಸೆಂಬರ್ — ಅಧಿವೇಶನ ಮುಕ್ತಾಯವಾಗಬೇಕಿದ್ದ ದಿನಾಂಕ
- **23** ನೇ ಡಿಸೆಂಬರ್ — ಅಧಿವೇಶನ ಮುಕ್ತಾಯವಾದ ದಿನಾಂಕ
- **17** ನಿಗದಿಯಾಗಿದ್ದ ಕಲಾಪಗಳ ಸಂಖ್ಯೆ
- **13** ನಡೆದ ಕಲಾಪಗಳ ಸಂಖ್ಯೆ
- **9** ಅನುಮೋದನೆ ಪಡೆದ ಮಸೂದೆಗಳು
- **64:50** ಗಂಟೆ — ರಾಜ್ಯಸಭೆಯ ಕಲಾಪದ ಅವಧಿ
- **68:42** ಗಂಟೆ — ಲೋಕಸಭೆಯ ಕಲಾಪದ ಅವಧಿ

ಅನುಮೋದನೆ ಪಡೆದ ಪ್ರಮುಖ ಮಸೂದೆಗಳು

- ವನ್ಯಜೀವಿ (ರಕ್ಷಣಾ) ತಿದ್ದುಪಡಿ ಮಸೂದೆ–2022
- ಇಂಧನ ಸಂರಕ್ಷಣಾ (ತಿದ್ದುಪಡಿ) ಮಸೂದೆ–2022
- ನವದೆಹಲಿ ಮಧ್ಯಸ್ಥಿಕೆ ಕೇಂದ್ರ (ತಿದ್ದುಪಡಿ) ಮಸೂದೆ–2022
- ಸಂವಿಧಾನ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ) ಆದೇಶ (ಎರಡನೇ ತಿದ್ದುಪಡಿ) ಮಸೂದೆ–2022
- ಸಂವಿಧಾನ (ಪರಿಶಿಷ್ಟ ಪಂಗಡ) ಆದೇಶ (ಎರಡನೇ ತಿದ್ದುಪಡಿ) ಮಸೂದೆ–2022
- ಸಂವಿಧಾನ (ಪರಿಶಿಷ್ಟ ಪಂಗಡ) ಆದೇಶ (ನಾಲ್ಕನೇ ತಿದ್ದುಪಡಿ) ಮಸೂದೆ–2022

ಪದಬಂಧ 5178


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ರಾರಾಜಮಾನವಾಗಿರುವ ಚಕ್ರವರ್ತಿ (4)
3.ಅತಿ ಘೋರವಾದ ವಿಷ (4)
5.ನಲಿಯುತ್ತಿರುವ ಕೇಕಿ (3)
7.ಹಸುವಿನ ಮರಿಗೆ ತೋರಿರುವ ದಯೆ (3)
9.ಆ ಸ್ಥಾನದಲ್ಲಿ ನಡೆದ ರಾಜ ಸಭೆ (3)
11.ಮುಂದಾಗುವ ಕಾಲ (3)
12.ಪತ್ರಿಕೆಗಳಲ್ಲಿರುವ ಉದ್ದ ಸಾಲು (3)
13.ಶುಭಕಾರ್ಯಗಳಿಗಾಗಿ ಕಟ್ಟುವ ಚಪ್ಪರ (3)
15.ನರ ಹತ್ತಿರವಿರುವ ಕೋತಿ (3)
17.ಬೆಲೆಯುಳ್ಳ ಮಣಿಗಳನ್ನುಅಡಗಿಸಿಕೊಂಡಿರುವ ಸಮುದ್ರ (4)
18.ದೂಷಣೆ ಬೇಡ! ಈತ ಎಲ್ಲರನ್ನು ನಗಿಸುವವನು (4)

ಮೇಲಿಂದ ಕೆಳಕ್ಕೆ

1.ಸೊಳ್ಳೆ ಇಲ್ಲಿಗೆ ಹಾರಿ ಬಂದಿದೆ (3)
2.ಜನನಿ ಹತ್ತಿರ ನೆರೆದಿರುವ ಮಂದಿ (2)
3.ಭೂಲೋಕದ ಅಮೃತ (2)
4.ಬೆಳ್ಳುಳ್ಳಿ ಇಲ್ಲಿದೆ (3)
6.ಡೈವೋರ್ಸ್ ಅನ್ನು ಕನ್ನಡೀಕರಿಸಿ (7)
8.ದುಃಖಾಂತವಾದ ಪ್ರಹಸನ (5)
10.ಸ್ಥಳಾಂತರವಾಗುವುದು (5)
12.ಬರ ಬಂದಾಗ ದಿಟ್ಟಿಸಿ ನೋಡಿದ ಆಕಾಶ (3)
14.ಪದ ಹೇಳಿ ಗಿಟ್ಟಿಸಿಕೊಂಡಿರುವ ಮೆಡಲು (3)
15.ಏಳು ದಿನಗಳ ಅವಧಿ (2)
16.ಸೂರ್ಯನ ಇನ್ನೊಂದು ಹೆಸರು (2)



5177ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉದಕ 3.ಜನಕ
5.ಹರಿ 6.ನರ
8.ಕತ್ತರಿ
9.ಮುಂಗೋಪ
11.ರವ 13.ರುಳಿ
14.ನೆರಳು 15.ಕದನ

ಮೇಲಿಂದ ಕೆಳಕ್ಕೆ:
1.ಉದ್ಧರಿ 2.ಕನ್ನಡಕ
3.ಜವಾಬ್ದಾರಿ 4.ಕವನ
5.ಹಲಾಲುಕೋರ
7.ರತ್ನಗಂಬಳಿ
9.ಮುಂಗುರುಳು
10.ಪರಿಷೇಕ 12.ವರ್ತನೆ
13.ರುಜಿನ

ಸುಡೊಕು 5564

3	9		2		5		6	
			4			8		5
	4	5			9		3	
4	6		9		7			
				4		1		6
8		7	5		6		4	9
		4			2			7
7						6		3
	8		7			2		


5563 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಡಿಸೆಂಬರ್ 24, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಪ್ರತಿಪದ್ ಗಂ. 12-07 ನಕ್ಷತ್ರ: ಪೂರ್ವಾಷಾಢ ಗಂ. 22-15 ಯೋಗ: ವೃದ್ಧಿ ಗಂ. 09-27, ಧ್ರುವ ಗಂ. 29-10, ಕರಣ: ಬವ ಗಂ. 12-07, ಧನುರ್ ಮಾಸದ 08 ನೇ ದಿನ. ರಾಹುಕಾಲ : ಬೆಳಿಗ್ಗೆ 09-00 –10-30
ಸೂರ್ಯೋದಯ : 06-54 **ಸೂರ್ಯಾಸ್ತ :** 06-06
ಮುಸ್ಲಿಂ ದಿನಾಂಕ : 29 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 7, 11

ಮೇಷ: ಕ್ಷುಲ್ಲಕ ಕಾರಣದಿಂದ ಉಂಟಾಗಿದ್ದ ಕುಟುಂಬದ ಕಲಹಗಳು ನಿವಾರಣೆಯಾಗಿ, ನೆಮ್ಮದಿ ಸಿಗಲಿದೆ. ಸಾಲ ಮರುಪಾವತಿ ಬಗ್ಗೆ ಗಮನವಿರಲಿ. ವೃತ್ತಿ ಜೀವನದಲ್ಲಿ ಬದಲಾವಣೆ ಕಾಣುವಿರಿ.

ವೃಷಭ: ಮನಸ್ಸಿನ ಅವ್ಯಕ್ತ ಭಾವನೆಗಳನ್ನು ಆತ್ಮೀಯರೊಡನೆ ವ್ಯಕ್ತಪಡಿಸಲು ಈ ದಿನ ಸೂಕ್ತ. ಎಲ್ಲಾ ಭಾವನೆಗಳಿಗೆ ಸಕರಾತ್ಮಕ ಪ್ರತಿಕ್ರಿಯೆ ದೊರೆಯಲಿದೆ. ಏಕಾಗ್ರತೆ ಹೆಚ್ಚಿಸಲು ಧ್ಯಾನ ಮಾಡುವುದನ್ನು ಅಭ್ಯಾಸ ಮಾಡಿಕೊಳ್ಳಿ.

ಮಿಥುನ: ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿಯ ಯಾವುದೇ ಕೆಲಸವನ್ನು ಈ ದಿನ ಒಪ್ಪಿಕೊಳ್ಳಬೇಡಿ. ಕೈಗೊಂಡ ಕೆಲವು ನಿರ್ಧಾರವನ್ನು ಬದಲಿಸಬೇಕಾಗಬಹುದು.

ಕರ್ಕಾಟಕ: ಆಪ್ತರ ಹಾಗೂ ಪ್ರೀತಿಪಾತ್ರರಿಗಾಗಿ ಈ ದಿನ ಮೀಸಲಿಡಿ. ಎಲ್ಲವೂ ನಿಮ್ಮ ನಿರೀಕ್ಷೆಯಂತೆ ನಡೆಯಲಿದೆ. ಮಗಳ ಮದುವೆಯ ವಿಚಾರದಲ್ಲಿ ನೀವು ಇಡುವ ಹೆಜ್ಜೆ ಬಹಳ ಪ್ರಮುಖವಾಗಿರುತ್ತದೆ.

ಸಿಂಹ: ಬದುಕಿನ ಸಾರ ತಿಳಿಯುವುದು ಬಹಳ ಕಷ್ಟಕರವಾದ ವಿಷಯವಾದರೂ, ಅದರ ಬಗ್ಗೆ ಹೆಚ್ಚಿನ ಆಲೋಚನೆಯಲ್ಲಿ ತೊಡಗುವಿರಿ. ಪ್ರಾಪಂಚಿಕ ವಿಚಾರವನ್ನು ಬಿಟ್ಟು ಆಧ್ಯಾತ್ಮಿಕ ವಿಚಾರಗಳ ಕಡೆಗೆ ಗಮನ ಹರಿಯಲಿದೆ.

ಕನ್ಯಾ: ಸ್ವಪ್ರತಿಷ್ಠೆಯನ್ನು ಕಾಪಾಡಲು ನಿಮ್ಮವರ ಜತೆಯಲ್ಲಿ ವಾದ ಮಾಡಬೇಕಾಗಬಹುದು. ಸಂಜೆಯ ತಿಳಿ ವಾತಾವರಣ ಮನಸ್ಸಿನ ಹಾಗೂ ದೇಹದ ಆಯಾಸ ಇಂಗಿಸಲಿದೆ. ಮಕ್ಕಳೊಡನೆ ಸೇರಿ ಈ ದಿನ ಕಾಲ ಕಳೆಯುವಿರಿ.

ತುಲಾ: ಪ್ರಯತ್ನಕ್ಕೆ ನಿಲುಕದ ವ್ಯಕ್ತಿಗಾಗಲಿ ಅಥವಾ ವಸ್ತುವಿಗಾಗಲೀ ಕಾಲಹರಣ ಮಾಡದಿರಿ, ಬರಬೇಕಾದದು ನಿಮ್ಮನ್ನು ಅರಸಿ ಬಂದೇ ಬರುವುದು. ಮಹಾಗಣಪತಿಯನ್ನು ಆರಾಧಿಸಿ.

ವೃಶ್ಚಿಕ: ಎದುರಾಗುವ ಅವಕಾಶಗಳಿಂದ ಜೀವನದ ಉತ್ಸಾಹದ ಚಿಲುಮೆ ಇಮ್ಮಡಿಗೊಳ್ಳಲಿದೆ. ಆಸೆ ಆಕಾಂಕ್ಷೆಗಳು ಈಡೇರಿ ಎಲ್ಲವೂ ನಿಮ್ಮ ಇಚ್ಛೆಯಂತೆ ನಡೆಯುವುದು. ಆರೋಗ್ಯದಲ್ಲಿ ಗಮನವಿರಲಿ.


ಧನು: ಇತ್ತೀಚಿನ ನಿಮ್ಮ ನಿರ್ಧಾರದ ಬಗ್ಗೆ ಪುನರ್ ಪರಿಶೀಲಿಸಲು ಈ ದಿನ ಸ್ವಲ್ಪ ಸಮಯ ಮೀಸಲಿಡಿ. ಯಾವುದೇ ರೀತಿಯ ಬದಲಾವಣೆಗಳನ್ನು ಮಾಡಲು ಈ ದಿನ ಸೂಕ್ತ ಕಾಲ. ವ್ಯಾಪಾರದಲ್ಲಿ ಬಹಳ ಪ್ರಗತಿ ಸಾಧಿಸುವಿರಿ.

ಮಕರ: ಕಾರ್ಯತಂತ್ರ ಸುಧಾರಣೆ ಬಗ್ಗೆ ಚಿಂತಿಸಿ. ಕೆಲಸವನ್ನು ತ್ವರಿತಗೊಳಿಸುವುದರಿಂದ ಉಂಟಾಗುವ ನಷ್ಟದ ಪ್ರಮಾಣವನ್ನು ಕಡಿಮೆಗೊಳಿಸಿಕೊಳ್ಳಬಹುದು. ಈ ದಿನ ಸಾಲ ತೆಗೆದುಕೊಳ್ಳುವುದು , ಸಾಲ ಕೊಡುವುದು ಉಚಿತವಲ್ಲ.

ಕುಂಭ: ವಿಶೇಷ ವ್ಯಕ್ತಿಗಳ ಭೇಟಿ ಈ ದಿನ ನಿಮಗೆ ಸಂತೋಷ ತರುವುದಲ್ಲದೆ, ನಿಮ್ಮ ಹೊಸ ಯೋಜನೆಗಳಿಗೆ ಚೈತನ್ಯ ತುಂಬುವುದು. ವ್ಯವಹಾರದಲ್ಲಿ ಹೆಚ್ಚಿನ ಸಮಯ ವ್ಯಯಿಸುವುದರಿಂದ ಎಲ್ಲಾ ಕಾರ್ಯಗಳನ್ನು ಸುಸ್ಥಿತಿಗೆ ತರಬಹುದು.

ಮೀನ: ವ್ಯವಹಾರದಲ್ಲಿ ಸ್ವಲ್ಪ ನಿಗೂಢತೆ ಕಾಪಾಡಿಕೊಳ್ಳುವುದು ಒಳ್ಳೆಯದು. ನಿಮ್ಮ ಪ್ರಯತ್ನಗಳು ವ್ಯರ್ಥವಾಗದೆ ಸರಿಯಾಗಿ ಫಲಿತಾಂಶವನ್ನು ಪಡೆಯಲು ಮನೆ ದೇವರ ಹಾಗೂ ಗುರುಹಿರಿಯರ ಆರ್ಶೀವಾದ ಪಡೆಯಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,127
ಇಂದಿನ ಅಂತ್ಯ	17807
▼	320
ದಿನದ ಕನಿಷ್ಠ	17,779

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹560
12 ಮೊಟ್ಟೆಗೆ	₹72

ಮೈಸೂರು

100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1240 (1290)
ಸೂರ್ಯಕಾಂತಿ (ರಿಫೈನ್ಡ್)	₹1330 (1330)
ಪಾಮೋಲಿನ್	₹940 (950)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1800-2600
ಮಧ್ಯಮ	₹1500-1800
ಸಣ್ಣ	₹1000-1500

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹425-695
ದ್ವಿತಳಿ (ಬಿ.ವಿ)	₹420-789

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹134
ಆರ್‌ಎಸ್‌ಎಸ್-5	₹126
ಗುಡ್ ಲಾಟ್	₹119.50

ತೆಂಗು ಧಾರಣೆ (ಸಾವಿರಕ್ಕೆ)


ಮಂಗಳೂರು

1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಚಿನ್ನ: ₹372 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನದ ದರ ₹372ರಷ್ಟು ಇಳಿಕೆ ಕಂಡು 10 ಗ್ರಾಂಗೆ ₹54,853ರಂತೆ ಮಾರಾಟವಾಯಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಕಂಡಿದ್ದರಿಂದ ದೇಶಿದಲ್ಲಿಯೂ ಅದರ ಪರಿಣಾಮ ಕಂಡುಬಂದಿತು. ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.





ಎನ್‌ಡಿಟಿವಿ ಸ್ಥಾಪಕರ ಶೇ 27 ಷೇರು ಅದಾನಿ ಸಮೂಹಕ್ಕೆ

ನವದೆಹಲಿ (ಪಿಟಿಐ): ನ್ಯೂ ಡೆಲ್ಲಿ ಟೆಲಿವಿಷನ್ ಲಿಮಿಟೆಡ್‌ನಲ್ಲಿ (ಎನ್‌ಡಿಟಿವಿ) ಹೊಂದಿರುವ ಒಟ್ಟು ಶೇಕಡ 32.26ರಷ್ಟು ಷೇರುಪಾಲಿನಲ್ಲಿ ಶೇ 27.26ರಷ್ಟನ್ನು ಅದಾನಿ ಸಮೂಹಕ್ಕೆ ಮಾರಾಟ ಮಾಡುವುದಾಗಿ ಎನ್‌ಡಿಟಿವಿ ಸ್ಥಾಪಕರಾದ ಪ್ರಣಯ್ ರಾಯ್ ಮತ್ತು ಅವರ ಪತ್ನಿ ರಾಧಿಕಾ ರಾಯ್ ಶುಕ್ರವಾರ ತಿಳಿಸಿದ್ದಾರೆ.

ಷೇರು ಮಾರಾಟದ ನಂತರ ಪ್ರವರ್ತಕರ ಬಳಿ ಎನ್‌ಡಿಟಿವಿಯ ಶೇ 5ರಷ್ಟು ಷೇರುಪಾಲು ಮಾತ್ರವೇ ಉಳಿಯಲಿದೆ.

ಸ್ಥಾಪಕರ ಷೇರು ಸ್ವಾಧೀನಪಡಿಸಿಕೊಂಡ ಬಳಿಕ ಎನ್‌ಡಿಟಿವಿಯಲ್ಲಿ ಅತಿ ಹೆಚ್ಚಿನ ಷೇರುಪಾಲನ್ನು (ಶೇ 69.71) ಅದಾನಿ ಸಮೂಹ ಹೊಂದಲಿದೆ. ಸದ್ಯ ಸಮೂಹದ ಬಳಿ ಶೇ 37.44ರಷ್ಟು ಷೇರುಪಾಲು ಇದೆ.

ಎನ್‌ಡಿಟಿವಿಯಲ್ಲಿ ಹೊಂದಿರುವ ಬಹುಪಾಲು ಷೇರುಗಳನ್ನು ಎಎಂಜಿ ಮೀಡಿಯಾ ನೆಟ್‌ವರ್ಕ್‌ಗೆ ಮಾರಾಟ ಮಾಡಲು ಒಪ್ಪಿಗೆ ನೀಡಿದ್ದೇವೆ ಎಂದು ಸ್ಥಾಪಕರು ಷೇರುಪೇಟೆಗೆ ಮಾಹಿತಿ ನೀಡಿದ್ದಾರೆ.

ಡಿಸೆಂಬರ್ 30 ಅಥವಾ ಆ ಬಳಿಕ ಷೇರು ಮಾರಾಟ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಎನ್‌ಡಿಟಿವಿ ಷೇರುಪೇಟೆಗೆ ತಿಳಿಸಿದೆ. ಆದರೆ ಮಾರಾಟದ ಮೊತ್ತವನ್ನು ಕಂಪನಿಯು ತಿಳಿಸಿಲ್ಲ.

ಎನ್‌ಡಿಟಿವಿಯ ಒಂದು ಷೇರಿನ ಬೆಲೆಯು 60 ದಿನಗಳ ವಹಿವಾಟಿನಲ್ಲಿ ಸರಾಸರಿ ₹368.43ರಷ್ಟು ಇದೆ. ಇದರ ಆಧಾರದ ಮೇಲೆ ಸ್ಥಾಪಕರು 1.75 ಕೋಟಿ ಷೇರುಗಳನ್ನು ಮಾರಾಟ ಮಾಡಿದರೆ ಅದರ ಮೊತ್ತವು ₹ 647.6 ಕೋಟಿ ಆಗಲಿದೆ.

ಮಾರಾಟದ ಒತ್ತಡ: ಷೇರುಪೇಟೆಗಳ ವಾರದ ವಹಿವಾಟು ನಕಾರಾತ್ಮಕ ಅಂತ್ಯ

ಕೋವಿಡ್ ಭೀತಿಗೆ ಕುಸಿದ ಸೂಚ್ಯಂಕ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಸತತ ನಾಲ್ಕನೆಯ ದಿನವೂ ಕುಸಿತ ಕಂಡಿವೆ. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರದ ವಹಿವಾಟಿನಲ್ಲಿ 980.93 ಅಂಶ ಕುಸಿದಿದೆ. ಸೆನ್ಸೆಕ್ಸ್ 60 ಸಾವಿರಕ್ಕಿಂತ ಕಡಿಮೆ ಮಟ್ಟಕ್ಕೆ ಬಂದಿದೆ.

ಚೀನಾ ಹಾಗೂ ಇತರ ಕೆಲವು ದೇಶಗಳಲ್ಲಿ ಕೋವಿಡ್ ಪ್ರಕರಣಗಳು ಮತ್ತೆ ಹೆಚ್ಚಾಗುತ್ತಿರುವುದು ಜಾಗತಿಕವಾಗಿ ಈ ಸಾಂಕ್ರಾಮಿಕದ ಇನ್ನೊಂದು ಅಲೆ ಎದುರಾಗಬಹುದು ಎಂಬ ಭೀತಿ ಹುಟ್ಟಿಸಿದೆ. ಅಮೆರಿಕದ ಫೆಡರಲ್ ರಿಸರ್ವ್ ಬಿಗಿ ಹಣಕಾಸು ನಿಲುವನ್ನು ಮುಂದುವರಿಸಬಹುದು ಎಂಬ ನಿರೀಕ್ಷೆ ಕೂಡ ಇದೆ. ಇವೆಲ್ಲ ಹೂಡಿಕೆದಾರರ ಮೇಲೆ ಪರಿಣಾಮ ಬೀರಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 320 ಅಂಶ ಕುಸಿದಿದೆ.

ಸೆನ್ಸೆಕ್ಸ್‌ನಲ್ಲಿ ಟೈಟನ್ ಹೊರತುಪಡಿಸಿ ಇತರ ಎಲ್ಲ ಷೇರುಗಳ ಮೌಲ್ಯ ಕುಸಿಯಿತು. ಟಾಟಾ ಸ್ಟೀಲ್ ಶೇ 5ರಷ್ಟು ಕುಸಿತ ಕಂಡಿದೆ.

ವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 1,492 ಅಂಶ, ನಿಫ್ಟಿ 462 ಅಂಶ ಇಳಿಕೆ ಕಂಡಿವೆ.

'ಮಾರುಕಟ್ಟೆಯಲ್ಲಿ ಈಗ ಕಂಡುಬಂದಿರುವ ಇಳಿಕೆಯು ಇನ್ನಷ್ಟು ದಿನ ಮುಂದುವರಿಯುವ ಸೂಚನೆ ಇದೆ. ಮಧ್ಯದಲ್ಲಿ ಒಂಚೂರು ಏರಿಕೆ ಆಗಬಹುದು' ಎಂದು ರೆಲಿಗೇರ್ ಬ್ರೋಕಿಂಗ್‌ನ ತಾಂತ್ರಿಕ ಸಂಶೋಧನಾ ವಿಭಾಗದ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಬಿಎಸ್‌ಇ ಸ್ಮಾಲ್‌ಕ್ಯಾಪ್ ಸೂಚ್ಯಂಕವು ಶೇ 4.11ರಷ್ಟು ಕುಸಿದಿದೆ. ಮಿಡ್‌ಕ್ಯಾಪ್ ಸೂಚ್ಯಂಕವು ಶೇ 3.40ರಷ್ಟು ಕುಸಿತ ಕಂಡಿದೆ.

ಏಷ್ಯಾದಲ್ಲಿ ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಷೇರುಪೇಟೆಗಳು ಕುಸಿತ ಕಂಡಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇಕಡ 1.89ರಷ್ಟು ಹೆಚ್ಚಾಗಿ ಪ್ರತಿ ಬ್ಯಾರೆಲ್‌ಗೆ 82.51 ಡಾಲರ್‌ಗೆ ತಲುಪಿದೆ.

ವಲಯವಾರು ಕುಸಿತ (%)	
ಸೇವೆಗಳು	5.43
ಯುಟಿಲಿಟಿ	5.17
ವಿದ್ಯುತ್	4.89
ಲೋಹ	3.93
ಸರಕು	3.92
ಇಂಧನ	3.82
ತೈಲ ಮತ್ತು ಅನಿಲ	3.71

ಹೂಡಿಕೆದಾರರಿಗೆ ₹ 15.77 ಲಕ್ಷ ಕೋಟಿ ನಷ್ಟ



ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳು ಸತತ ನಾಲ್ಕು ದಿನಗಳಿಂದ ನಕಾರಾತ್ಮಕ ವಹಿವಾಟು ಕಾಣುತ್ತಿದ್ದು, ಹೂಡಿಕೆದಾರರ ಸಂಪತ್ತು ಒಟ್ಟು ₹ 15.77 ಲಕ್ಷ ಕೋಟಿಯಷ್ಟು ಕರಗಿದೆ.

ನಾಲ್ಕು ದಿನಗಳ ವಹಿವಾಟಿನಲ್ಲಿ ಸೆನ್ಸೆಕ್ಸ್ ಶೇಕಡ 3ಕ್ಕಿಂತ ಹೆಚ್ಚು ಕುಸಿದಿದೆ. ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ಈಗ ₹ 272 ಲಕ್ಷ ಕೋಟಿಗೆ ತಲುಪಿದೆ.

'ಬಡ್ಡಿ ದರವನ್ನು ಇನ್ನಷ್ಟು ಹೆಚ್ಚು ಮಾಡುವ ಸೂಚನೆಯನ್ನು ಅಮೆರಿಕದ ಫೆಡರಲ್ ರಿಸರ್ವ್ ನೀಡಿದ ನಂತರದಲ್ಲಿ ಜಾಗತಿಕ ಮಾರುಕಟ್ಟೆಗಳು ಇಳಿಕೆ ಕಾಣುತ್ತಿವೆ. ಚೀನಾದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗಿರುವುದು ಹೂಡಿಕೆದಾರರ ವಿಶ್ವಾಸವನ್ನು ಕುಂದಿಸಿವೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಆರ್‌ಬಿಐ ಹಣಕಾಸು ನೀತಿ ಸಮಿತಿ ಸದಸ್ಯ ಜಯಂತ್ ವರ್ಮ

ಖರೀದಿ ಸಾಮರ್ಥ್ಯ, ಹೂಡಿಕೆ ಹೆಚ್ಚಬೇಕಿದೆ

ನವದೆಹಲಿ (ಪಿಟಿಐ): ಜನರ ಖರೀದಿ ಸಾಮರ್ಥ್ಯ ಮತ್ತು ಬಂಡವಾಳ ಹೂಡಿಕೆಯು ಇನ್ನೂ ಚೇತರಿಸಿಕೊಂಡಿಲ್ಲದ ಕಾರಣ, ದೇಶದ ಆರ್ಥಿಕ ಬೆಳವಣಿಗೆಯು ಸದ್ಯ ಬಹಳ ದುರ್ಬಲವಾದ ಸ್ಥಿತಿಯಲ್ಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸದಸ್ಯ ಜಯಂತ್ ಆರ್. ವರ್ಮಾ ಹೇಳಿದ್ದಾರೆ.

ಆರ್ಥಿಕತೆಗೆ ಎಲ್ಲ ರೀತಿಯ ಬೆಂಬಲದ ಅಗತ್ಯ ಇದೆ ಎಂದು ಅವರು ಹೇಳಿದ್ದಾರೆ.

ರಫ್ತು, ಸರ್ಕಾರದ ವೆಚ್ಚ, ಬಂಡವಾಳ ಹೂಡಿಕೆ ಮತ್ತು ಜನರ ಖರೀದಿ ಸಾಮರ್ಥ್ಯವು ದೇಶದ ಆರ್ಥಿಕ ಬೆಳವಣಿಗೆಗೆ ಪ್ರಮುಖವಾದ ನಾಲ್ಕು ಚಾಲಕ ಶಕ್ತಿಗಳಾಗಿವೆ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ರಫ್ತು ಮತ್ತು ಸರ್ಕಾರದ ವೆಚ್ಚವು ಆರ್ಥಿಕತೆಗೆ ಬೆಂಬಲ ನೀಡಿದೆ. ಆದರೆ, ಬಂಡವಾಳ ಹೂಡಿಕೆ ಮತ್ತು ಜನರ ಖರೀದಿ ಸಾಮರ್ಥ್ಯವು ಚೇತರಿಕೆ ಕಂಡುಕೊಳ್ಳಬೇಕಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.



ಜಾಗತಿಕ ಆರ್ಥಿಕತೆಯು ಮಂದಗತಿಯಲ್ಲಿ ಇರುವುದರಿಂದ ರಫ್ತು ವಹಿವಾಟು ದೇಶದ ಆರ್ಥಿಕ ಬೆಳವಣಿಗೆಯ ಪ್ರಮುಖ ಚಾಲಕ ಶಕ್ತಿ ಆಗಿಲ್ಲ. ವಿತ್ತೀಯ ಮಿತಿಗಳಿಂದಾಗಿ ಸರ್ಕಾರದ ವೆಚ್ಚವು ಸೀಮಿತಗೊಂಡಿದೆ ಎಂದು ಅವರು ತಿಳಿಸಿದ್ದಾರೆ. ಬೇರೆ ದೇಶಗಳಂತೆ ಭಾರತವು ಆರ್ಥಿಕ ಹಿಂಜರಿತದ ಅಪಾಯವನ್ನು ಎದುರಿಸುವುದಿಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ.

ಜಿಆರ್‌ಟಿಯಿಂದ ಹಬ್ಬದ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಆರ್‌ಟಿ ಜುವೆಲರ್ಸ್ ಕಂಪನಿಯು ಕ್ರಿಸ್‌ಮಸ್, ಹೊಸ ವರ್ಷ ಮತ್ತು ಸಂಕ್ರಾಂತಿ ಪ್ರಯುಕ್ತ ಗ್ರಾಹಕರಿಗೆ ಗೋಲ್ಡನ್ ಫೆಸ್ಟಿವಲ್ ಕೊಡುಗೆಗಳನ್ನು ಘೋಷಿಸಿದೆ.

ಚಿನ್ನದ ವೇಸ್ಟೇಜ್ ಮೇಲೆ ಶೇಕಡ 20ರಷ್ಟು ರಿಯಾಯಿತಿ, ವಜ್ರ ಮತ್ತು ಕತ್ತರಿಸದ ವಜ್ರದ ಮೌಲ್ಯದ ಮೇಲೆ ಶೇ25ರಷ್ಟು ರಿಯಾಯಿತಿ, ಬೆಳ್ಳಿ ವಸ್ತುಗಳ ಮೇಲೆ ಶೇ 25ರಷ್ಟು ರಿಯಾಯಿತಿ, ಬೆಳ್ಳಿಯ ಆಭರಣಗಳ ಎಂಆರ್‌ಪಿ ಮೇಲೆ ಶೇ10ರಷ್ಟು ರಿಯಾಯಿತಿ, ಪ್ಲಾಟಿನಂ ಮೇಲೆ ಆಕರ್ಷಕ ಕೊಡುಗೆಗಳನ್ನು ಪಡೆಯಬಹುದು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಚಂದಾ ಕೊಚ್ಚರ್ ಬಂಧನ



ಚಂದಾ ಕೊಚ್ಚರ್

ನವದೆಹಲಿ (ಪಿಟಿಐ): ಐಸಿಐಸಿಐ ಬ್ಯಾಂಕ್‌ನ ಮಾಜಿ ಸಿಇಒ ಮತ್ತು ಎಂ.ಡಿ. ಚಂದಾ ಕೊಚ್ಚರ್ ಹಾಗೂ ಅವರ ಪತಿ ದೀಪಕ್ ಕೊಚ್ಚರ್ ಅವರನ್ನು ವಂಚನೆ ಹಾಗೂ ಅಕ್ರಮ ಸಾಲ ಮಂಜೂರಾತಿ ಪ್ರಕರಣವೊಂದರಲ್ಲಿ ಬಂಧಿಸಲಾಗಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಚಂದಾ ಕೊಚ್ಚರ್, ದೀಪಕ್ ಕೊಚ್ಚರ್ ಮತ್ತು ವೀಡಿಯೊಕಾನ್ ಸಮೂಹದ ವೇಣುಗೋಪಾಲ್ ಧೂತ್ ಅವರ ವಿರುದ್ಧ ಸಿಬಿಐ ಪ್ರಕರಣ ದಾಖಲು ಮಾಡಿಕೊಂಡಿತ್ತು. ಕಂಪನಿಗಳಾದ ನ್ಯೂಪವರ್ ರಿನಿವೆಬಲ್ಸ್, ಸುಪ್ರೀಂ ಎನರ್ಜಿ, ವಿಡಿಯೊಕಾನ್ ಇಂಟರ್‌ನ್ಯಾಷನಲ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಮತ್ತು ವಿಡಿಯೊಕಾನ್ ಇಂಡಸ್ಟ್ರೀಸ್ ಲಿಮಿಟೆಡ್ ವಿರುದ್ಧವೂ ಸಿಬಿಐ ಎಫ್‌ಐಆರ್ ದಾಖಲು ಮಾಡಿತ್ತು.

2012ರಲ್ಲಿ ಐಸಿಐಸಿಐ ಬ್ಯಾಂಕ್‌ನಿಂದ ₹ 3,250 ಕೋಟಿ ಸಾಲ ಪಡೆದ ಕೆಲವೇ ತಿಂಗಳಲ್ಲಿ ಧೂತ್ ಅವರು ನ್ಯೂಪವರ್ ಕಂಪನಿಯಲ್ಲಿ ಕೋಟ್ಯಂತರ ರೂಪಾಯಿ ಹೂಡಿಕೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಐಸಿಐಸಿಐ ಬ್ಯಾಂಕ್‌ಗೆ ವಂಚಿಸುವ ಉದ್ದೇಶದಿಂದ ಆರೋಪಿಗಳು ಇತರ ಕೆಲವರ ಜೊತೆ ಶಾಮೀಲಾಗಿ ಖಾಸಗಿ ಕಂಪನಿಗಳಿಗೆ ಸಾಲ ಮಂಜೂರು ಮಾಡಿದ್ದಾರೆ ಎಂದು ಕೂಡ ಆರೋಪ ಹೊರಿಸಲಾಗಿದೆ.

ಮುಂಬೈ ಧಾರಣೆ

ಶೇಂಗಾ

23–12–2022

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1175 (1190)
ಪಾಮ್ ವಾರದ ಡೆಲಿವರಿ	938 (948)
ಸೂರ್ಯಕಾಂತಿ ಎಣ್ಣೆ ಕಚ್ಚಾ	1230 (1240)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

54,200 (54,550)

ಬೆಳ್ಳಿ ಕೆ.ಜಿ 67,800 (67,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	500
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-54500
ಕಾರ್ಕಳ	
ಹೊಸತು	25000-37500
ಹಳತು	40000-54500
ಹೊಸನಗರ	
ಚಾಲಿ	32599-32599
ಕೆಂಪುಗೋಟು	31099-34399
ರಾಶಿ	43889-45370
ಕುಮಟ	
ಚಿಪ್ಪು	25019-31999
ಕೋಕ	16089-28999
ಹಳೆಚಾಲಿ	36509-39509
ಹೊಸಚಾಲಿ	31019-33701
ಪುತ್ತೂರು	
ಕೋಕ	11000-26000
ಹೊಸತು	32000-38000
ಶಿವಮೊಗ್ಗ	
ಬೆಟ್ಟೆ	41399-51410
ಗೊರಬಲು	18000-33399
ರಾಶಿ	30000-44009
ಸರಕು	46119-80796
ಸಿದ್ದಾಪುರ	
ಬಿಳಿಗೋಟು	27699-33399
ಚಾಲಿ	36299-38999
ಕೋಕ	26119-32199
ಕೆಂಪುಗೋಟು	29699-30609
ರಾಶಿ	41699-43809
ತಟ್ಟಿಬೆಟ್ಟೆ	34089-43509
ಶಿರಸಿ	
ಬೆಟ್ಟೆ	37299-40088
ಬಿಳಿಗೋಟು	22569-34992
ಚಾಲಿ	28699-41000
ಕೆಂಪುಗೋಟು	23099-34199
ರಾಶಿ	41659-44119
ಯಲ್ಲಾಪುರ	
ಬಿಳಿಗೋಟು	24899-33899
ಚಾಲಿ	36612-40199
ಕೋಕ	16179-28899
ಕೆಂಪುಗೋಟು	24899-32499
ರಾಶಿ	42019-48319
ತಟ್ಟಿಬೆಟ್ಟೆ	35599-40299

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13500	13450	164.30 ಸೆಂಟ್ಸ್
ಎಸಿ	---	6850	6100	
ಆರ್‌ಪಿ	---	8300	8000	ಲಂಡನ್
ಆರ್‌ಸಿ	---	165 on OT	4250	1945 ಡಾಲರ್ಸ್

ಭಾರತೀಯ ಪತ್ರಕರ್ತೆ ಆಯೂಬ್‌ಗೆ ಅಮೆರಿಕದ ಸೆನೆಟರ್ ಬೆಂಬಲ

ವಾಷಿಂಗ್ಟನ್ (ಪಿಟಿಐ): ಭಾರತೀಯ ಪತ್ರಕರ್ತೆ ರಾಣಾ ಆಯೂಬ್ ಅವರನ್ನು ಬೆಂಬಲಿಸಿ ಅಮೆರಿಕದ ಪ್ರಮುಖ ಸೆನೆಟರ್ ಹೇಳಿಕೆ ನೀಡಿದ್ದಾರೆ. ಅವರ ಕೆಲಸಗಳು ಸದುದ್ದೇಶದಿಂದ, ರಾಷ್ಟ್ರದ ಮೇಲಿನ ಪ್ರೀತಿಯಿಂದ ಕೂಡಿದ್ದು ಮಾದರಿ ಎನಿಸಿವೆ ಎಂದಿದ್ದಾರೆ.

ಅಮೆರಿಕದ ವೆರ್‌ಮೊಂಟ್‌ನ ಡೆಮಾಕ್ರಟಿಕ್ ಸೆನೆಟರ್ ಪ್ಯಾಟ್ರಿಕ್ ಲೆಹೈ ಗುರುವಾರ ಹೇಳಿಕೆ ನೀಡಿದ್ದು, ಆಯೂಬ್ ಅವರು ಪ್ರಶಸ್ತಿ ವಿಜೇತ ಭಾರತೀಯ ಪತ್ರಕರ್ತೆ. ಮತೀಯ ಹಿಂಸಾಚಾರಗಳ ಬಗ್ಗೆ, ನ್ಯಾಯಾಂಗ ಹತ್ಯೆಗಳ ಬಗ್ಗೆ ಮತ್ತು ಇತರ ಕೃತ್ಯಗಳ ಬಗ್ಗೆ ಧೈರ್ಯದಿಂದ ವರದಿಗಳನ್ನು ಮಾಡಿದ್ದಾರೆ. ಇವೆಲ್ಲವೂ ಭಾರತದ ಸಾರ್ವಜನಿಕ ಹಿತಾಸಕ್ತಿಯಿಂದ ಕೂಡಿದ್ದಾಗಿವೆ ಎಂದಿದ್ದಾರೆ.

ಅವರ ಪ್ರಮುಖ ಕೆಲಸಗಳು ಭಾರತದ ಮೇಲಿನ ಪ್ರೀತಿಯಿಂದ ಮತ್ತು ಸದುದ್ದೇಶದಿಂದ ಕೂಡಿವೆ. ಅವುಗಳು ರಾಷ್ಟ್ರದ ಧ್ಯೇಯಕ್ಕೆ ಅನುಗುಣವಾಗಿವೆ. ಹಾಗಿದ್ದೂ ಅವರನ್ನು ಗುರಿಯಾಗಿಸಿ ಆನ್‌ಲೈನ್‌ನಲ್ಲಿ ಕಿರುಕುಳ ನೀಡಲಾಗುತ್ತಿದೆ, ಟ್ರೋಲ್ ಮಾಡಲಾಗುತ್ತಿದೆ, ಜೀವ ಬೆದರಿಕೆಗಳನ್ನು ಒಡ್ಡಲಾಗುತ್ತಿದೆ. ವರದಿಗಾರಿಕೆಗೆ ಸರ್ಕಾರವು ಆಧಾರ ರಹಿತ ಪ್ರಕರಣಗಳನ್ನು ದಾಖಲಿಸುವ ಮೂಲಕ ಸೇಡು ತೀರಿಸಿಕೊಳ್ಳುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸರ್ಕಾರಿ ಅಧಿಕಾರಿಗಳು ಆಕೆಯ ಬಾಯಿ ಮುಚ್ಚಿಸಲು ಸರ್ವ ಪ್ರಯತ್ನವನ್ನು ನಡೆಸುತ್ತಿರುವ ನಡುವೆ ಅಧಿಕಾರದಲ್ಲಿರುವವರ ಅವ್ಯವಹಾರಗಳನ್ನು ಬಯಲಿಗೆ ತರಲು ಶ್ರಮಿಸುತ್ತಿದ್ದಾರೆ ಎಂದಿದ್ದಾರೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿ ಪತ್ರಕರ್ತೆ ರಾಣಾ ಆಯೂಬ್ ವಿರುದ್ಧ ಜಾರಿ ನಿರ್ದೇಶನಾಲಯವು (ಇ.ಡಿ) ಪ್ರಕರಣ ದಾಖಲಿಸಿದೆ.

ಸಂಕ್ಷಿಪ್ತ ಸುದ್ದಿ

ಜೀವವೈವಿಧ್ಯ ಸಮಾವೇಶಕ್ಕೆ ತೆರೆ

ಮಾಂಟ್ರಿಯಲ್, ಕೆನಡಾ (ಪಿಟಿಐ): ಜೀವವೈವಿಧ್ಯ ಸಂರಕ್ಷಣೆ ಕುರಿತ 15ನೇ ಸಮಾವೇಶವು ಮಹತ್ವದ ಒಪ್ಪಂದದೊಂದಿಗೆ ಅಂತ್ಯಗೊಂಡಿತು. ನಾಲ್ಕು ವರ್ಷಗಳ ಮಾತುಕತೆಯ ನಂತರ ನಿಸರ್ಗ ಮತ್ತು ಪರಿಸರ ವ್ಯವಸ್ಥೆಯನ್ನು ಕಾಪಾಡುವ ಐತಿಹಾಸಿಕ ಒಪ್ಪಂದಕ್ಕೆ ಸುಮಾರು 200 ದೇಶಗಳು ಅನುಮೋದನೆ ನೀಡಿವೆ.

ಒಪ್ಪಂದದ ಭಾಗವಾಗಿ ಜಗತ್ತಿನ ಜೀವವೈವಿಧ್ಯವನ್ನು ರಕ್ಷಿಸಲು ಡಿಜಿಟಲ್ ಅನುಕ್ರಮ ಮಾಹಿತಿಯನ್ನು ಅಳವಡಿಸಿಕೊಳ್ಳಲಾಗಿದೆ. ಇದು ಭಾರತದಂತಹ ದೇಶಗಳಿಗೆ ಪ್ರಕೃತಿ ಸಂರಕ್ಷಣೆಗೆ ಹಣದ ಹರಿವನ್ನು ಖಾತರಿಪಡಿಸಲಿದೆ.

ಕೀವ್‌ಗೆ ಮರಳಿದ ಝೆಲೆನ್‌ಸ್ಕಿ

ಕೀವ್ (ಎಪಿ): ಯುದ್ಧ ಕಾಲದಲ್ಲೇ ಅಮೆರಿಕಕ್ಕೆ ತುರ್ತು ಭೇಟಿ ನೀಡಿ, ₹14,700 ಕೋಟಿ ಮೊತ್ತದ ಸೇನಾ ನೆರವಿನೊಂದಿಗೆ ದೇಶಕ್ಕೆ ಮರಳಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ರಷ್ಯಾ ವಿರುದ್ಧ ಅಂತಿಮ ಜಯಸಾಧಿಸುವತ್ತ ತಮ್ಮ ಸೇನೆ ಕಾರ್ಯೋನ್ಮುಖವಾಗಿದೆ ಎಂದು ಶುಕ್ರವಾರ ಹೇಳಿದ್ದಾರೆ.

ಉಕ್ರೇನ್‌ನಲ್ಲಿ ಸೇನಾ ಕಾರ್ಯಾಚರಣೆ ಗುರಿ ತಲುಪುವವರೆಗೂ ಯುದ್ಧ ನಿಲ್ಲದು ಎಂದು ರಷ್ಯಾ ನೀಡಿರುವ ಎಚ್ಚರಿಕೆಗೆ ಝೆಲೆನ್‌ಸ್ಕಿ ಅವರು ಮಣಿದಿಲ್ಲ.

ಕಳೆದ 24 ಗಂಟೆಗಳಲ್ಲಿ ಉಕ್ರೇನ್ ದಕ್ಷಿಣ ಮತ್ತು ಪೂರ್ವದಲ್ಲಿ ರಷ್ಯಾ ಸುಮಾರು 70ಕ್ಕೂ ಕ್ಷಿಪಣಿಗಳನ್ನು ಉಡಾಯಿಸಿದೆ. ಆರು ನಾಗರಿಕರು ಸಾವನ್ನಪ್ಪಿದರು. 18 ಜನರು ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಹೇಳಿದೆ.

ಪಾಕ್: ಆತ್ಮಾಹುತಿ ದಾಳಿ

ಇಸ್ಲಾಮಾಬಾದ್ (ಪಿಟಿಐ): ಇಲ್ಲಿ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ ಪೊಲೀಸ್ ಅಧಿಕಾರಿ ಹಾಗೂ ಇಬ್ಬರು ಪಾಕಿಸ್ತಾನ ತಾಲಿಬಾನ್ ಸಂಘಟನೆಯ ಶಂಕಿತ ಉಗ್ರರು ಮೃತಪಟ್ಟಿದ್ದಾರೆ. ಘಟನೆಯಲ್ಲಿ ಆರು ಮಂದಿ ಗಾಯಗೊಂಡಿದ್ದು, ನಗರದಾದ್ಯಂತ ಕಟ್ಟೆಚ್ಚರ ವಹಿಸಲಾಗಿದೆ.

ಭಾರತದಿಂದ ಶ್ರೀಲಂಕಾ ಪೊಲೀಸರಿಗೆ 125 ಎಸ್‌ಯುವಿ

ಕೊಲಂಬೊ (ಪಿಟಿಐ): ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿರುವ ಶ್ರೀಲಂಕಾಗೆ ಭಾರತವು ತನ್ನ ನೆರವನ್ನು ಮುಂದುವರಿಸಿದ್ದು, ಪ್ರಸ್ತುತ ಶ್ರೀಲಂಕಾ ಪೊಲೀಸರಿಗಾಗಿ 125 ಎಸ್‌ಯುವಿಗಳನ್ನು ಹಸ್ತಾಂತರಿಸಿದೆ.

ನೆರೆ ರಾಷ್ಟ್ರಗಳಿಗೆ ಆದ್ಯತೆ ನೀತಿಯ ಭಾಗವಾಗಿ ಭಾರತ 12 ತಿಂಗಳಿಂದ ನೆರವು ವಿಸ್ತರಿಸಿದೆ. 'ಲೈನ್ ಆಫ್ ಕ್ರೆಡಿಟ್' ಅಡಿಯಲ್ಲಿ ಒಟ್ಟು 500 ಅತ್ಯಾಧುನಿಕ ಎಸ್‌ಯುವಿಗಳನ್ನು ನೀಡುವ ಒಪ್ಪಂದಕ್ಕೆ ಈ ವರ್ಷದ ಆರಂಭದಲ್ಲಿ ಸಹಿ ಹಾಕಲಾಗಿತ್ತು. ಅದರಂತೆ ಈಗ 125 ಎಸ್‌ಯುವಿಗಳನ್ನು ಕಳುಹಿಸಲಾಗಿದ್ದು, ಉಳಿದವನ್ನು ಶೀಘ್ರದಲ್ಲೇ ಕಳುಹಿಸಲಾಗುವುದು ಎಂದು ಭಾರತೀಯ ಹೈಕಮಿಷನರ್ ಗೋಪಾಲ್ ಬಾಗ್ಲೆ ಹೇಳಿದ್ದಾರೆ.

ಗುಂಡಿನ ದಾಳಿ; ಇಬ್ಬರ ಸಾವು

ಪ್ಯಾರಿಸ್ (ಎಪಿ): ಇಲ್ಲಿಯ ಸೆಂಟ್ರಲ್ ಭಾಗದಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಇಬ್ಬರು ಮೃತಪಟ್ಟಿದ್ದು, ನಾಲ್ವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ 69 ವರ್ಷದ ಶಂಕಿತ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದೂ ಹೇಳಿದ್ದಾರೆ.

ಶೋಭ್‌ರಾಜ್ ಬಿಡುಗಡೆ

ಕಠ್ಮಂಡು (ಪಿಟಿಐ): 'ಬಿಕಿನಿ ಕಿಲ್ಲರ್' ಎಂದೇ ಕುಖ್ಯಾತಿ ಗಳಿಸಿದ್ದ ಫ್ರಾನ್ಸ್‌ನ ಸರಣಿ ಹಂತಕ ಚಾರ್ಲ್ಸ್ ಶೋಭ್‌ರಾಜ್‌ನನ್ನು (78) ನೇಪಾಳದ ಜೈಲಿನಿಂದ ಶುಕ್ರವಾರ ಬಿಡುಗಡೆ ಮಾಡಲಾಯಿತು. ಬಿಡುಗಡೆಯಾದ ಕೆಲವೇ ತಾಸುಗಳಲ್ಲಿ ದೇಶದಿಂದ ಅವರನ್ನು ಗಡಿಪಾರು ಮಾಡಲಾಯಿತು. ಕತಾರ್ ವಿಮಾನದ ಮೂಲಕ ಅವರು ದೋಹಕ್ಕೆ ತೆರಳಿದರು.

ಜೀವಾವಧಿ ಶಿಕ್ಷೆಗೆ ಗುರಿಯಾಗಿ 2003ರಿಂದ ಜೈಲಿನಲ್ಲಿದ್ದ ಶೋಭ್‌ರಾಜ್ ಅನ್ನು ಸನ್ನಡತೆ ಆಧರಿಸಿ ಬಿಡುಗಡೆ ಮಾಡಲು ಸುಪ್ರೀಂ ಕೋರ್ಟ್ ಬುಧವಾರ ಆದೇಶಿಸಿತ್ತು.

ಸ್ಯಾಮ್ ಕರನ್‌ಗೆ ಬಂಪರ್

ಭಾರತದ ಆಟಗಾರರಲ್ಲಿ ಅಗರವಾಲ್‌ಗೆ ಅಗ್ರಮೌಲ್ಯ

ಆಟಗಾರ	ಮೂಲಬೆಲೆ	ಹರಾಜು (ಮೊತ್ತ ₹ಗಳಲ್ಲಿ)
ಚೆನ್ನೈ ಸೂಪರ್ ಕಿಂಗ್ಸ್		
ಬೆನ್ ಸ್ಟೋಕ್ಸ್	2 ಕೋಟಿ	16.25 ಕೋಟಿ
ಕೈಲ್ ಜೆಮಿಸನ್	1 ಕೋಟಿ	1 ಕೋಟಿ
ನಿಶಾಂತ್ ಸಿಂಧು	20 ಲಕ್ಷ	60 ಲಕ್ಷ
ಅಜಿಂಕ್ಯ ರಹಾನೆ	50 ಲಕ್ಷ	50 ಲಕ್ಷ
ಶೇಖ್ ರಶೀದ್	20 ಲಕ್ಷ	20 ಲಕ್ಷ
ಭಗತ್ ವರ್ಮಾ	20 ಲಕ್ಷ	20 ಲಕ್ಷ
ಅಜಯ್ ಮಂಡಲ್	20 ಲಕ್ಷ	20 ಲಕ್ಷ
ಗುಜರಾತ್ ಟೈಟನ್ಸ್		
ಶಿವಂ ಮಾವಿ	40 ಲಕ್ಷ	6 ಕೋಟಿ
ಜೋಶ್ ಲಿಟಲ್	50 ಲಕ್ಷ	4.4 ಕೋಟಿ
ಕೇನ್ ವಿಲಿಯಮ್ಸನ್	2 ಕೋಟಿ	2 ಕೋಟಿ
ಕೆ.ಎಸ್.ಭರತ್	20 ಲಕ್ಷ	1.5 ಕೋಟಿ
ಒಡೀನ್ ಸ್ಮಿತ್	50 ಲಕ್ಷ	50 ಲಕ್ಷ
ಮೋಹಿತ್ ಶರ್ಮಾ	50 ಲಕ್ಷ	50 ಲಕ್ಷ
ಉರ್ವಿಲ್ ಪಟೇಲ್	20 ಲಕ್ಷ	20 ಲಕ್ಷ
ಸನ್‌ರೈಸರ್ಸ್ ಹೈದರಾಬಾದ್		
ಹ್ಯಾರಿ ಬ್ರೂಕ್	1.5 ಕೋಟಿ	13.25 ಕೋಟಿ
ಮಯಂಕ್ ಅಗರವಾಲ್	1 ಕೋಟಿ	8.25 ಕೋಟಿ
ಹೆನ್ರಿಚ್ ಕ್ಲಾಸೆನ್	1 ಕೋಟಿ	5.25 ಕೋಟಿ
ವಿವ್ರಾಂತ್ ಶರ್ಮಾ	20 ಲಕ್ಷ	2.6 ಕೋಟಿ
ಆದಿಲ್ ರಶೀದ್	2 ಕೋಟಿ	2 ಕೋಟಿ
ಮಯಂಕ್ ದಾಗರ್	20 ಲಕ್ಷ	1.8 ಕೋಟಿ
ಮಯಂಕ್ ಮಾರ್ಕಂಡೆ	50 ಲಕ್ಷ	50 ಲಕ್ಷ
ಸಮರ್ಥ್ ವ್ಯಾಸ್	20 ಲಕ್ಷ	20 ಲಕ್ಷ
ಸನ್ವೀರ್ ಸಿಂಗ್	20 ಲಕ್ಷ	20 ಲಕ್ಷ
ಉಪೇಂದ್ರ ಯಾದವ್	20ಲಕ್ಷ	25 ಲಕ್ಷ
ನಿತೀಶ್ ಕುಮಾರ್ ರೆಡ್ಡಿ	20 ಲಕ್ಷ	20 ಲಕ್ಷ
ಅಕೀಲ್ ಹುಸೇನ್	1 ಕೋಟಿ	1 ಕೋಟಿ
ಅನ್ಮೋಲ್‌ಪ್ರೀತ್ ಸಿಂಗ್	20 ಲಕ್ಷ	20 ಲಕ್ಷ
ರಾಯಲ್ ಚಾಲೆಂಜರ್ಸ್ ಬೆಂಗಳೂರು		
ವಿಲ್ ಜಾಕ್ಸ್	1.5 ಕೋಟಿ	3.2 ಕೋಟಿ
ರೀಸ್ ಟೋಪ್ಲಿ	75 ಲಕ್ಷ	1.9 ಕೋಟಿ
ಅವಿನಾಶ್ ಸಿಂಗ್	20 ಲಕ್ಷ	60 ಲಕ್ಷ
ಹಿಮಾಂಶು ಶರ್ಮಾ	20 ಲಕ್ಷ	20 ಲಕ್ಷ
ಮನೋಜ್ ಭಾಂಡಗೆ	20 ಲಕ್ಷ	20 ಲಕ್ಷ
ಸೋನು ಯಾದವ್	20 ಲಕ್ಷ	20 ಲಕ್ಷ
ರಾಜನ್ ಕುಮಾರ್	20 ಲಕ್ಷ	70 ಲಕ್ಷ
ಲಖನೌ ಸೂಪರ್ ಜೈಂಟ್ಸ್		
ನಿಕೊಲಸ್ ಪೂರನ್	2 ಕೋಟಿ	16 ಕೋಟಿ
ಡೇನಿಯಲ್ ಸ್ಯಾಮ್ಸ್	75 ಲಕ್ಷ	75 ಲಕ್ಷ
ಜೈದೇವ್ ಉನದ್ಕತ್	50 ಲಕ್ಷ	50 ಲಕ್ಷ
ರೊಮೆರಿಯೊ ಶೆಫರ್ಡ್	50 ಲಕ್ಷ	50 ಲಕ್ಷ
ಅಮಿತ್ ಮಿಶ್ರಾ	50 ಲಕ್ಷ	50 ಲಕ್ಷ
ನವೀನ್ ಉಲ್ ಹಕ್	50 ಲಕ್ಷ	50 ಲಕ್ಷ
ಯಶ್ ಠಾಕೂರ್	20 ಲಕ್ಷ	45 ಲಕ್ಷ
ಸ್ವಪ್ನಿಲ್ ಸಿಂಗ್	20 ಲಕ್ಷ	20 ಲಕ್ಷ
ಪ್ರೇರಕ್ ಮಂಕಡ್	20 ಲಕ್ಷ	20 ಲಕ್ಷ
ಯುಧ್ವೀರ್ ಚರಕ್	20 ಲಕ್ಷ	20 ಲಕ್ಷ


ಶಿವಂ ಮಾವಿ


ಮನೀಷ್ ಪಾಂಡೆ


ಸ್ಯಾಮ್ ಕರನ್

ಕೊಚ್ಚಿ/ನವದೆಹಲಿ (ಪಿಟಿಐ): ಇಂಗ್ಲೆಂಡ್ ಆಲ್‌ರೌಂಡರ್ ಸ್ಯಾಮ್ ಕರನ್ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಅತ್ಯಂತ ದುಬಾರಿ ಮೌಲ್ಯಕ್ಕೆ ಖರೀದಿಯಾದ ಆಟಗಾರನೆಂಬ ದಾಖಲೆ ಬರೆದರು.

ಕನ್ನಡಿಗ ಮಯಂಕ್ ಅಗರವಾಲ್ ಈ ಬಾರಿ ಅತಿ ಹೆಚ್ಚು ಮೌಲ್ಯ ಗಳಿಸಿದ ಭಾರತದ ಆಟಗಾರನಾಗಿ ಹೊರಹೊಮ್ಮಿದರು. ಗುರುವಾರ ಕೊಚ್ಚಿಯಲ್ಲಿ ನಡೆದ ಮಿನಿ ಹರಾಜು ಪ್ರಕ್ರಿಯೆಯಲ್ಲಿ ಪಂಜಾಬ್ ಕಿಂಗ್ಸ್ ತಂಡವು ₹ 18.5 ಕೋಟಿಗೆ ಕರನ್ ಅವರನ್ನು ಖರೀದಿಸಿತು. ಅವರನ್ನು ಪಡೆಯಲು ಮುಂಬೈ ಇಂಡಿಯನ್ಸ್, ರಾಯಲ್ ಚಾಲೆಂಜರ್ಸ್ ಬೆಂಗಳೂರು, ರಾಜಸ್ಥಾನ ರಾಯಲ್ಸ್, ಚೆನ್ನೈ ಸೂಪರ್ ಕಿಂಗ್ಸ್, ಲಖನೌ ಸೂಪರ್ ಜೈಂಟ್ಸ್ ಮತ್ತು ಪಂಜಾಬ್ ತಂಡಗಳು ಭಾರಿ ಪೈಪೋಟಿ ನಡೆಸಿದವು. ಕೊನೆಯಲ್ಲಿ ಪಂಜಾಬ್ ತಂಡವು ಮೇಲುಗೈ ಸಾಧಿಸಿತು. ಇದರೊಂದಿಗೆ ಐಪಿಎಲ್ ಇತಿಹಾಸದಲ್ಲಿಯೇ ಅತಿ ಹೆಚ್ಚು ಮೌಲ್ಯ ಗಳಿಸಿದ ಆಟಗಾರನಾದರು. 2021ರಲ್ಲಿ ದಕ್ಷಿಣ ಆಫ್ರಿಕಾದ ಆಲ್‌ರೌಂಡರ್ ಕ್ರಿಸ್ ಮೊರಿಸ್ ಅವರಿಗೆ ರಾಜಸ್ಥಾನ್ ರಾಯಲ್ಸ್ ತಂಡವು ₹ 16.25 ಕೋಟಿ ಮೌಲ್ಯ ನೀಡಿದ್ದು ಇದುವರೆಗಿನ ದಾಖಲೆಯಾಗಿತ್ತು.

'ಕಳೆದ ರಾತ್ರಿ ನನಗೆ ನಿದ್ದೆಯೇ ಬಂದಿಲ್ಲ. ಹರಾಜು ಪ್ರಕ್ರಿಯೆಯ ಬಗ್ಗೆ ಬಹಳಷ್ಟು ಕುತೂಹಲ ಮೂಡಿತ್ತು. ನನ್ನ ನಿರೀಕ್ಷೆ ಮೀರಿದ ಮೌಲ್ಯ ಲಭಿಸಿದೆ. ತಂಡದ ಮ್ಯಾನೇಜ್‌ಮೆಂಟ್ ತೋರಿರುವ ವಿಶ್ವಾಸಕ್ಕೆ ಆಭಾರಿಯಾಗಿರುವೆ' ಎಂದು ಸ್ಯಾಮ್ ಸ್ಟಾರ್ ಸ್ಪೋರ್ಟ್ಸ್ ಕಾರ್ಯಕ್ರಮದಲ್ಲಿ ಹೇಳಿದರು.

2019ರಲ್ಲಿ ಸ್ಯಾಮ್ ಐಪಿಎಲ್‌ಗೆ ಪಂಜಾಬ್ (ಆಗಿನ ಕಿಂಗ್ಸ್ ಇಲೆವನ್ ಪಂಜಾಬ್) ತಂಡದ ಮೂಲಕವೇ ಆಗಿತ್ತು. ಇದೀಗ ಮತ್ತೆ ಅಲ್ಲಿಗೆ ಮರಳಿದ್ದಾರೆ. ಚೆನ್ನೈ ಸೂಪರ್ ಕಿಂಗ್ಸ್‌ನಲ್ಲಿಯೂ ಮಿಂಚಿದ್ದರು.

ಆಸ್ಟ್ರೇಲಿಯಾದ ಕ್ಯಾಮರೂನ್ ಗ್ರೀನ್ ₹ 17.5 ಕೋಟಿ ಪಡೆಯುವುದರೊಂದಿಗೆ ಎರಡನೇ ಗರಿಷ್ಠ ಮೌಲ್ಯ ಗಳಿಸಿದ ಆಟಗಾರನಾದರು. ಅವರನ್ನು ಮುಂಬೈ ಇಂಡಿಯನ್ಸ್ ಖರೀದಿಸಿತು.

ಮುಂಬೈಕರ್ ಅಜಿಂಕ್ಯ ರಹಾನೆ ತಮ್ಮ ಮೂಲಬೆಲೆ (₹ 50ಲಕ್ಷ) ಪಡೆದು ಚೆನ್ನೈ ತಂಡಕ್ಕೆ ಸೇರ್ಪಡೆಯಾದರೆ, ನ್ಯೂಜಿಲೆಂಡ್ ತಂಡದ ನಾಯಕ ಕೇನ್ ವಿಲಿಯಮ್ಸನ್ ಕೂಡ ಮೂಲಬೆಲೆ ₹2 ಕೋಟಿಗೆ ಗುಜರಾತ್ ಟೈಟನ್ಸ್ ಪಾಲಾದರು.

ಚೆನ್ನೈಗೆ ಸ್ಟೋಕ್ಸ್: ಇಂಗ್ಲೆಂಡ್ ತಂಡದ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಅವರನ್ನು ತನ್ನ ತೆಕ್ಕೆಗೆ ಸೆಳೆಯುವಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಯಶಸ್ವಿಯಾಯಿತು. ಅನುಭವಿಗಳನ್ನು ಆಯ್ಕೆ ಮಾಡಿಕೊಂಡು ತಂಡ ಕಟ್ಟುವ ಚೆನ್ನೈ ತಂಡದ ನಾಯಕ ಮಹೇಂದ್ರಸಿಂಗ್ ಧೋನಿ ಮತ್ತು ಆಡಳಿತ ಮಂಡಳಿಯವರ ಯೋಜನೆ ಫಲಿಸಿತು. ಸ್ಟೋಕ್ಸ್ ಅವರನ್ನು (₹ 16.25 ಕೋಟಿ) ಖರೀದಿಸಿತು. ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಸ್ಟೋಕ್ಸ್ ಖರೀದಿಗಾಗಿ ನಿಕಟ ಪೈಪೋಟಿಯೊಡ್ಡಿತ್ತು. ಇಂಗ್ಲೆಂಡ್ ತಂಡದ ಹೊಸಪ್ರತಿಭೆ ಹ್ಯಾರಿ ಬ್ರೂಕ್ಸ್ ₹13.25 ಕೋಟಿ ಗಳಿಸುವಲ್ಲಿ ಯಶಸ್ವಿಯಾದರು. ಅವರನ್ನು ಸನ್‌ರೈಸರ್ಸ್ ತಂಡವು ಖರೀದಿಸಿತು.

ಮಯಂಕ್‌ಗೆ ಮೌಲ್ಯ

ಕಳೆದ ಟೂರ್ನಿಯಲ್ಲಿ ಪಂಜಾಬ್ ಕಿಂಗ್ಸ್ ನಾಯಕತ್ವ ವಹಿಸಿದ್ದ ಮಯಂಕ್ ಅಗರವಾಲ್ 2023ರ ಟೂರ್ನಿಯಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದಲ್ಲಿ ಆಡಲಿದ್ದಾರೆ. ಅವರಿಗೆ ₹ 8.25 ಕೋಟಿ ಮೌಲ್ಯ ನೀಡಿದ ಸನ್‌ರೈಸರ್ಸ್ ಖರೀದಿಸಿತು. ಅವರಿಗೆ ₹ 1 ಕೋಟಿ ಮೂಲಬೆಲೆ ನಿಗದಿಪಡಿಸಲಾಗಿತ್ತು. ಭಾರತ ತಂಡದಲ್ಲಿ ಅವಕಾಶ ಪಡೆಯಲು ವಿಫಲವಾಗಿರುವ ಮಯಂಕ್ ರಣಜಿ ಟ್ರೋಫಿ ಟೂರ್ನಿಯಲ್ಲಿ ಕರ್ನಾಟಕ ತಂಡದ ನಾಯಕರಾಗಿದ್ದಾರೆ. ಅವರನ್ನು ಈಚೆಗೆ ಪಂಜಾಬ್ ತಂಡವು ಬಿಡುಗಡೆ ಮಾಡಿತ್ತು. ಈ ಹರಾಜಿನಲ್ಲಿ ಅತಿ ಹೆಚ್ಚು ಮೌಲ್ಯ ಪಡೆದ ಭಾರತದ ಆಟಗಾರನೆಂಬ ಹೆಗ್ಗಳಿಕೆಯೂ ಮಯಂಕ್ ಅವರದ್ದಾಯಿತು.


ಮಯಂಕ್ ಅಗರವಾಲ್

ಆಟಗಾರ	ಮೂಲಬೆಲೆ	ಹರಾಜು (ಮೊತ್ತ ₹ಗಳಲ್ಲಿ)
ಮುಂಬೈ ಇಂಡಿಯನ್ಸ್		
ಕ್ಯಾಮರಾನ್ ಗ್ರೀನ್	2 ಕೋಟಿ	17.50 ಕೋಟಿ
ಜಾಯ್ ರಿಚರ್ಡ್‌ಸನ್	1.5 ಕೋಟಿ	1.5 ಕೋಟಿ
ಪಿಯೂಷ್ ಚಾವ್ಲಾ	50 ಲಕ್ಷ	50 ಲಕ್ಷ
ನೇಹಲ್ ವಧೇರಾ	20 ಲಕ್ಷ	20 ಲಕ್ಷ
ಶಮ್ಸ್ ಮುಲಾನಿ	20 ಲಕ್ಷ	20 ಲಕ್ಷ
ವಿಷ್ಣು ವಿನೋದ್	20 ಲಕ್ಷ	20 ಲಕ್ಷ
ಡುವಾನ್ ಜಾನ್ಸನ್	20 ಲಕ್ಷ	20 ಲಕ್ಷ
ರಾಘವ್ ಘೋಯಲ್	20 ಲಕ್ಷ	20 ಲಕ್ಷ
ಡೆಲ್ಲಿ ಕ್ಯಾಪಿಟಲ್ಸ್		
ಮುಕೇಶ್ ಕುಮಾರ್	20 ಲಕ್ಷ	5.5 ಕೋಟಿ
ಮನೀಷ್ ಪಾಂಡೆ	1 ಕೋಟಿ	2.4 ಕೋಟಿ
ಫಿಲ್ ಸಾಲ್ಟ್	2 ಕೋಟಿ	2 ಕೋಟಿ
ಇಶಾಂತ್ ಶರ್ಮಾ	50 ಲಕ್ಷ	50 ಲಕ್ಷ
ರೆಲಿ ರೂಸ್ಸೊ	2 ಕೋಟಿ	4.6 ಕೋಟಿ
ಪಂಜಾಬ್ ಕಿಂಗ್ಸ್		
ಸ್ಯಾಮ್ ಕರನ್	2 ಕೋಟಿ	18.5 ಕೋಟಿ
ಸಿಕಂದರ್ ರಾಜಾ	50 ಲಕ್ಷ	50 ಲಕ್ಷ
ಹರ್‌ಪ್ರೀತ್ ಭಾಟಿಯಾ	40 ಲಕ್ಷ	40 ಲಕ್ಷ
ಶಿವಂ ಸಿಂಗ್	20 ಲಕ್ಷ	20 ಲಕ್ಷ
ಮೋಹಿತ್ ರಾಠಿ	20 ಲಕ್ಷ	20 ಲಕ್ಷ
ವಿದ್ವತ್ ಕಾವೇರಪ್ಪ	20 ಲಕ್ಷ	20 ಲಕ್ಷ
ರಾಜಸ್ಥಾನ ರಾಯಲ್ಸ್		
ಜೇಸನ್ ಹೋಲ್ಡರ್	2 ಕೋಟಿ	5.75 ಕೋಟಿ
ಆ್ಯಡಂ ಜಂಪಾ	1.5 ಕೋಟಿ	1.5 ಕೋಟಿ
ಡೊನೊವಾನ್ ಪೆರೇರ	20 ಲಕ್ಷ	50 ಲಕ್ಷ
ಕೆ.ಎಂ.ಆಸಿಫ್	30 ಲಕ್ಷ	30 ಲಕ್ಷ
ಕುನಾಲ್ ರಾಥೋಡ್	20 ಲಕ್ಷ	20 ಲಕ್ಷ
ಅಬ್ದುಲ್ ಪಿ.ಎ	20 ಲಕ್ಷ	20 ಲಕ್ಷ
ಆಕಾಶ್ ವಸಿಷ್ಠ	20 ಲಕ್ಷ	20 ಲಕ್ಷ
ಮುರುಗನ್ ಅಶ್ವಿನ್	20 ಲಕ್ಷ	20 ಲಕ್ಷ
ಜೊ ರೂಟ್	1 ಕೋಟಿ	1 ಕೋಟಿ
ಅಬ್ದುಲ್ ಬಾಸಿತ್	20 ಲಕ್ಷ	20 ಲಕ್ಷ
ಕೋಲ್ಕತ್ತ ನೈಟ್ ರೈಡರ್ಸ್		
ಶಕೀಬ್ ಅಲ್ ಹಸನ್	1.5 ಕೋಟಿ	1.5 ಕೋಟಿ
ಡೇವಿಡ್ ವೀಸ್	1 ಕೋಟಿ	1 ಕೋಟಿ
ವೈಭವ್ ಅರೋರಾ	20 ಲಕ್ಷ	60 ಲಕ್ಷ
ಮನದೀಪ್ ಸಿಂಗ್	50 ಲಕ್ಷ	50 ಲಕ್ಷ
ಕುಲವಂತ್ ಕೆಜ್ರೊಲಿಯಾ	20 ಲಕ್ಷ	20 ಲಕ್ಷ
ಸುಯಶ್ ಶರ್ಮಾ	20 ಲಕ್ಷ	20 ಲಕ್ಷ
ಲಿಟನ್ ದಾಸ್	50 ಲಕ್ಷ	50 ಲಕ್ಷ
ಎನ್.ಜಗದೀಶನ್	20 ಲಕ್ಷ	90 ಲಕ್ಷ


ರೀಸ್ ಟಾಪ್ಲಿ

ಬೆಂಗಳೂರು ಬಳಗಕ್ಕೆ ರೀಸ್ ಟಾಪ್ಲಿ, ಜಾಕ್ಸ್

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಇಂಗ್ಲೆಂಡ್‌ನ ರೀಸ್ ಟಾಪ್ಲಿ ಮತ್ತು ವಿಲ್ ಜ್ಯಾಕ್ಸ್ ಅವರನ್ನು ಖರೀದಿಸಿತು.

ಅಲ್ಲದೇ ಕರ್ನಾಟಕದ ಆಟಗಾರ ಮನೋಜ್ ಬಾಂಢಗೆ ಅವರನ್ನೂ ಸೇರ್ಪಡೆ ಮಾಡಿಕೊಂಡಿತು.

ವಿಲ್ ಜ್ಯಾಕ್ಸ್ ಅವರಿಗೆ ₹ 3.2 ಕೋಟಿ, ಟಾಪ್ಲಿಗೆ ₹ 1.2 ಕೋಟಿ ಮೌಲ್ಯ ನೀಡಿತು. ವಿಲ್ ಜ್ಯಾಕ್ಸ್ ಅವರ ಮೂಲಬೆಲೆ ₹ 1.5 ಕೋಟಿಯಾಗಿತ್ತು. ಟಾಪ್ಲಿ ಅವರಿಗೆ ₹ 75 ಲಕ್ಷ ಮೂಲಬೆಲೆ ನಿಗದಿ ಮಾಡಲಾಗಿತ್ತು.

ರಾಜನ್ ಕುಮಾರ್ (₹ 70 ಲಕ್ಷ), ಅವಿನಾಶ್ ಸಿಂಗ್ (₹ 60 ಲಕ್ಷ), ಮನೋಜ್ ಬಾಂಢಗೆ (₹ 20 ಲಕ್ಷ) ಮತ್ತು ಹಿಮಾಂಶು ಶರ್ಮಾ (₹ 20 ಲಕ್ಷ) ಅವರನ್ನು ಸೇರ್ಪಡೆ ಮಾಡಿಕೊಂಡಿತು.

ಹರಾಜು ಪ್ರಕ್ರಿಯೆಯ ಆರಂಭದಿಂದಲೂ ಆರ್‌ಸಿಬಿ ತಂಡವು ಬಹಳ ಎಚ್ಚರಿಕೆಯಿಂದ ಹಣ ಖರ್ಚು ಮಾಡಿತು. ದೊಡ್ಡಮಟ್ಟದ ಹೂಡಿಕೆಗೆ ಮುಂದಾಗಲಿಲ್ಲ.

ಕರ್ನಾಟಕದ ಮನೀಷ್ ಪಾಂಡೆ ಅಥವಾ ಮಯಂಕ್ ಅಗರವಾಲ್ ಅವರ ಖರೀದಿಯಲ್ಲಿಯೂ ಹೆಚ್ಚು ಹಣ ಹೂಡಲು ಮುಂದಾಗಲಿಲ್ಲ. ಇದರಿಂದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಆರ್‌ಸಿಬಿ ಕುರಿತ ವ್ಯಂಗ್ಯ ಟ್ವೀಟ್‌ಗಳು ಮತ್ತು ಮಿಮ್‌ಗಳು ಹರಿದಾಡಿದವು.

ಕುಸ್ತಿ: ಧರೆಪ್ಪಗೆ ಕಂಚು

ಪ್ರಜಾವಾಣಿ ವಾರ್ತೆ

ದಾವಣಗೆರೆ: ಕರ್ನಾಟಕದ ಕುಸ್ತಿಪಟು ಧರೆಪ್ಪ ಆರ್. ಹೊಸಮನಿ ಅವರು ವಿಶಾಖಪಟ್ಟಣದಲ್ಲಿ ನಡೆದ ರಾಷ್ಟ್ರೀಯ ಸೀನಿಯರ್ ಕುಸ್ತಿ ಚಾಂಪಿಯನ್‌ಷಿಪ್‌ನ ಗ್ರಿಕೊ ರೋಮನ್ ಶೈಲಿಯ 87 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಸೆಮಿಫೈನಲ್ ಪಂದ್ಯದಲ್ಲಿ ಧರೆಪ್ಪ ಅವರು ಸರ್ವೀಸಸ್ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್ (ಎಸ್.ಎಸ್.ಸಿ.ಬಿ)ನ ಸುಶಾಂತ್ ವಿರುದ್ಧ 3–8ರಲ್ಲಿ ಪರಾಭವಗೊಂಡರು. ಬಳಿಕ ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಧರೆಪ್ಪ ಅವರು ಜಾರ್ಖಂಡ್‌ನ ಅಶೋಕಕುಮಾರ್ ವಿರುದ್ಧ 10–2ರಲ್ಲಿ ಗೆಲ್ಲುವ ಮೂಲಕ ಕಂಚಿನ ಪದಕ ಜಯಿಸಿದರು.


ಧರೆಪ್ಪ

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನವರಾದ ಧರೆಪ್ಪ ಅವರು ಭಾರತೀಯ ಸೇನೆಯ ಯೋಧರಾಗಿದ್ದು, ಪುಣೆಯ ಸೇನಾ ಕ್ರೀಡಾ ಕೇಂದ್ರದಲ್ಲಿ ವಿನಾಯಕ ದಳವಿ ಅವರ ಬಳಿ ತರಬೇತಿ ಪಡೆಯುತ್ತಿದ್ದಾರೆ. ಈ ಹಿಂದೆ ದಾವಣಗೆರೆ ಕ್ರೀಡಾ ವಸತಿ ಶಾಲೆಯಲ್ಲಿ ತರಬೇತುದಾರ ಆರ್. ಶಿವಾನಂದ ಅವರ ಬಳಿ ತರಬೇತಿ ಪಡೆದುಕೊಂಡಿದ್ದರು.

'ಬಡವರಿಗೆ 1 ವರ್ಷ ಉಚಿತ ಆಹಾರ ಧಾನ್ಯ ವಿತರಣೆ'

ನವದೆಹಲಿ(ಪಿಟಿಐ): ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್‌ಎಫ್‌ಎಸ್‌ಎ) ಅಡಿಯಲ್ಲಿ ದೇಶದ 81.35 ಕೋಟಿ ಬಡವರಿಗೆ ಒಂದು ವರ್ಷದವರೆಗೆ ಉಚಿತ ಪಡಿತರ ನೀಡುವ ಮಹತ್ವದ ನಿರ್ಧಾರವೊಂದನ್ನು ಕೇಂದ್ರ ಸರ್ಕಾರವು ಶುಕ್ರವಾರ ಪ್ರಕಟಿಸಿದೆ.


ಪಿಯೂಷ್ ಗೋಯಲ್

ಕೇಂದ್ರ ಸಂಪುಟದ ಈ ನಿರ್ಧಾರದ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಕೇಂದ್ರ ಆಹಾರ ಸಚಿವ ಪೀಯೂಷ್ ಗೋಯಲ್ ಅವರು 'ಎನ್‌ಎಫ್‌ಎಸ್‌ಎ ಅಡಿಯಲ್ಲಿ ಉಚಿತ ಆಹಾರ ಧಾನ್ಯಗಳನ್ನು ಒದಗಿಸುವ ಸಂಪೂರ್ಣ ಹೊರೆಯನ್ನು ಕೇಂದ್ರವು ಭರಿಸಲಿದೆ. ಇದರಿಂದ ಬೊಕ್ಕಸಕ್ಕೆ ವಾರ್ಷಿಕವಾಗಿ ₹ 2 ಲಕ್ಷ ಕೋಟಿ ವೆಚ್ಚವಾಗಲಿದೆ' ಎಂದು ಹೇಳಿದ್ದಾರೆ.

ಎನ್‌ಎಫ್‌ಎಸ್‌ಎ ಅಡಿಯಲ್ಲಿ ಸರ್ಕಾರವು ಪ್ರಸ್ತುತ ಪ್ರತಿ ವ್ಯಕ್ತಿಗೆ ಕೆ.ಜಿ.ಗೆ ₹ 2ರಿಂದ ₹ 3ರಂತೆ 5 ಕೆ.ಜಿ.ಯಷ್ಟು ಆಹಾರ ಧಾನ್ಯವನ್ನು ಒದಗಿಸುತ್ತಿದೆ. ಅಂತ್ಯೋದಯ ಅನ್ನ ಯೋಜನೆ (ಎಎವೈ) ಅಡಿಯಲ್ಲಿ ಬರುವ ಕುಟುಂಬಗಳು ತಿಂಗಳಿಗೆ 35 ಕೆ.ಜಿ. ಆಹಾರ ಧಾನ್ಯಗಳನ್ನು ಪಡೆಯುತ್ತಿವೆ. ಅಂತೆಯೇ ಬಡವರಿಗೆ ಪ್ರತಿ ಕೆ.ಜಿಗೆ ₹ 3ರಂತೆ ಅಕ್ಕಿಯನ್ನು ಹಾಗೂ ಪ್ರತಿ ಕೆ.ಜಿ.ಗೆ ₹ 2ರಂತೆ ಗೋಧಿಯನ್ನು ನೀಡಲಾಗುತ್ತಿದೆ.

ಈ ಮಧ್ಯೆ, ಕೇಂದ್ರ ಸರ್ಕಾರವು ಇದೇ ಡಿ. 31ಕ್ಕೆ ಮುಕ್ತಾಯವಾಗಲಿರುವ ಉಚಿತ ಪಡಿತರವನ್ನೊದಗಿಸುವ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯನ್ನು (ಪಿಎಂಜಿಕೆಎವೈ) ವಿಸ್ತರಿಸದಿರಲು ನಿರ್ಧರಿಸಿದೆ.

ಪಿಎಂಜಿಕೆಎವೈ ಅಡಿ, ಪ್ರತಿ ವ್ಯಕ್ತಿಗೆ ಪ್ರತಿ ತಿಂಗಳು ಐದು ಕೆ.ಜಿ ಆಹಾರ ಧಾನ್ಯಗಳನ್ನು ನೀಡಲಾಗುತ್ತಿದೆ. 81.35 ಕೋಟಿ ಫಲಾನುಭವಿಗಳಿಗೆ ಈ ಯೋಜನೆಯ ಲಾಭ ಸಿಗುತ್ತಿದೆ.

'ವರ್ಷದವರೆಗೆ ಉಚಿತ ಪಡಿತರ ನೀಡುವ ಸಂಬಂಧ ಕೈಗೊಂಡಿರುವ ಈ ನಿರ್ಧಾರವು ಕೇಂದ್ರ ಸರ್ಕಾರ ಬಡವರಿಗೆ ನೀಡಿರುವ ಹೊಸ ವರ್ಷದ ಕೊಡುಗೆ' ಎಂದು ಅಧಿಕಾರಿಗಳು ಬಣ್ಣಿಸಿದ್ದಾರೆ.

'ಈ ನಿರ್ಧಾರದಿಂದಾಗಿ, 80 ಕೋಟಿಗೂ ಅಧಿಕ ಜನರು ಎನ್‌ಎಫ್‌ಎಸ್‌ಎ ಅಡಿ ಉಚಿತವಾಗಿ ಆಹಾರ ಧಾನ್ಯಗಳನ್ನು ಪಡೆದುಕೊಳ್ಳಲಿದ್ದಾರೆ' ಎಂದೂ ಹೇಳಿದ್ದಾರೆ.

ಸೈನಿಕರಿಗೆ 'ಒಂದು ಶ್ರೇಣಿ, ಒಂದು ಪಿಂಚಣಿ' ಪರಿಷ್ಕರಿಸಲು ನಿರ್ಧಾರ

ನವದೆಹಲಿ: ಕೇಂದ್ರ ರಕ್ಷಣಾ ಸಿಬ್ಬಂದಿ ಮತ್ತು ಕುಟುಂಬದ ಪಿಂಚಣಿದಾರರ 'ಒಂದು ಶ್ರೇಣಿ, ಒಂದು ಪಿಂಚಣಿ' (ಒಆರ್‌ಒಪಿ) ಯೋಜನೆಯನ್ನು ಪರಿಷ್ಕರಿಸಲು ಕೇಂದ್ರ ಸಚಿವ ಸಂಪುಟವು ಶುಕ್ರವಾರ ಅನುಮೋದನೆ ನೀಡಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

ಯುದ್ಧದಲ್ಲಿ ಮಡಿದ ಯೋಧರ ಪತ್ನಿಯರಿಗೆ ಮತ್ತು ಅಂಗವಿಕಲ ಪಿಂಚಣಿದಾರರು ಸೇರಿದಂತೆ ಕುಟುಂಬ ಪಿಂಚಣಿದಾರರಿಗೂ ಈ ಪ್ರಯೋಜನವನ್ನು ವಿಸ್ತರಿಸಲಾಗುವುದು ಎಂದು ಠಾಕೂರ್ ಪತ್ರಿಕಾಗೋಷ್ಠಿಯಲ್ಲಿ ಅವರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪಾಕ್ ಡ್ರೋನ್ ಹೊಡೆದುರುಳಿಸಿದ ಬಿಎಸ್‌ಎಫ್

ನವದೆಹಲಿ (ಪಿಟಿಐ): ಪಂಜಾಬ್‌ನ ಅಂತರ ರಾಷ್ಟ್ರೀಯ ಗಡಿ ಮೂಲಕ ಭಾರತ ಪ್ರವೇಶಿಸುತ್ತಿದ್ದ ಪಾಕಿಸ್ತಾನದ ಡ್ರೋನ್ ಒಂದನ್ನು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಶುಕ್ರವಾರ ಹೊಡೆದುರುಳಿಸಿದೆ ಎಂದು ವಕ್ತಾರರು ತಿಳಿಸಿದ್ದಾರೆ.

ಅಮೃತಸರ ಸೆಕ್ಟರ್‌ನ ಪುಲ್ಮೊರನ್ ಗಡಿ ಪೋಸ್ಟ್ ಬಳಿ ಬೆಳಿಗ್ಗೆ 7.45ರ ಸುಮಾರಿಗೆ ಡ್ರೋನ್ ಪತ್ತೆಯಾಗಿತ್ತು. ಬಿಎಸ್‌ಎಫ್ ಸಿಬ್ಬಂದಿ ಗುಂಡಿನ ದಾಳಿ ನಡೆಸಿ ಅದನ್ನು ಹೊಡೆದುರುಳಿಸಿ ವಶಕ್ಕೆ ಪಡೆದಿದ್ದಾರೆ ಎಂದು ತಿಳಿಸಿದರು.

ಕಳೆದ ಮೂರು ದಿನಗಳಲ್ಲಿ ಭಾರತದೊಳಗೆ ಪ್ರವೇಶಿಸಲು ಯತ್ನಿಸುತ್ತಿದ್ದ ಮೂರು ಡ್ರೋನ್‌ಗಳನ್ನು ಗಡಿ ಭದ್ರತಾ ಸಿಬ್ಬಂದಿ ಹೊಡೆದುರುಳಿಸಿದ್ದಾರೆ.

ಕಮಲ್‌ನಾಥ್ ಸೋದರಳಿಯನಿಗೆ ಸಮನ್ಸ್

ನವದೆಹಲಿ: ರಸಗೊಬ್ಬರ ಹಗರಣ ಮತ್ತು ₹ 685 ಕೋಟಿ ಲಂಚ ಪಡೆದ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಕಮಲ್‌ನಾಥ್ ಅವರ ಸೋದರಳಿಯ ರತುಲ್ ಪುರಿ ಅವರಿಗೆ ದೆಹಲಿ ನ್ಯಾಯಾಲಯವು ಶುಕ್ರವಾರ ಸಮನ್ಸ್ ನೀಡಿದೆ.

ಪ್ರಕರಣಕ್ಕೆ ಸಂಬಂಧಿಸಿದ ಚಾರ್ಜ್‌ಶೀಟ್ ಅನ್ನು ಗಮನದಲ್ಲಿಟ್ಟುಕೊಂಡು ವಿಶೇಷ ನ್ಯಾಯಾಧೀಶ ವಿಕಾಸ್ ಧುಲ್ ಅವರು ಜನವರಿ 18ಕ್ಕೆ ನ್ಯಾಯಾಲಯಕ್ಕೆ ಹಾಜರಾಗುವಂತೆ ಪುರಿ ಅವರಿಗೆ ಸೂಚಿಸಿದ್ದಾರೆ.

ಪ್ರಕರಣದಲ್ಲಿ ಪುರಿ ಅವರನ್ನು ವಿಚಾರಣೆಗೆ ಒಳಪಡಿಸಲು ಪ್ರಾಥಮಿಕವಾಗಿ ಸಾಕಷ್ಟು ಸಾಕ್ಷ್ಯಾಧಾರಗಳಿವೆ ಎಂದು ಜಾರಿನಿರ್ದೇಶನಾಲಯದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ನಿತೇಶ್ ರಾಣಾ ಅವರ ಸಲ್ಲಿಕೆಗಳನ್ನು ಗಮನಿಸಿ, ನ್ಯಾಯಾಧೀಶರು ಸಮನ್ಸ್ ನೀಡಿದ್ದಾರೆ.

'ಗರ್ಭಕಂಠ ಕ್ಯಾನ್ಸರ್: ಉಚಿತ ಲಸಿಕೆ ನೀಡಿಕೆ'

ನವದೆಹಲಿ: 9 ರಿಂದ 14 ವರ್ಷದ ಶಾಲಾ ಬಾಲಕಿಯರಿಗೆ ಗರ್ಭಕಂಠ ಕ್ಯಾನ್ಸರ್‌ನ ಲಸಿಕೆಯನ್ನು (ಸರ್ವಾವ್ಯಾಕ್) ಉಚಿತವಾಗಿ ನೀಡಲಾಗುವುದು ಎಂದು ಕೇಂದ್ರ ಶಿಕ್ಷಣ ಖಾತೆ ರಾಜ್ಯ ಸಚಿವ ಡಾ.ಸುಭಾಷ್ ಸರ್ಕಾರ್ ಗುರುವಾರ ಹೇಳಿದ್ದಾರೆ.

'ಪ್ರಜಾವಾಣಿ'ಗೆ ಈ ವಿಷಯ ತಿಳಿಸಿದ ಅವರು, 'ಮುಂದಿನ ವರ್ಷ ಲಸಿಕೆಯ ಮೊದಲ ಡೋಸ್ ನೀಡಲಾಗುತ್ತದೆ. ನಂತರ 9 ವರ್ಷಗಳ ಅಂತರದಲ್ಲಿ ಎರಡನೇ ಡೋಸ್ ನೀಡಲಾಗುವುದು' ಎಂದರು.

'ವಿಮಾನಯಾನ: ಪ್ರಯಾಣದ ವರ್ಗ ಸ್ವಯಂಚಾಲಿತವಾಗಿ ಬದಲಾದರೆ ಹಣ ಮರುಪಾವತಿ'

ನವದೆಹಲಿ (ಪಿಟಿಐ): ಪ್ರಯಾಣಿಕರು ಆಯ್ದುಕೊಂಡ ವರ್ಗವನ್ನು ಅದಕ್ಕಿಂತ ಕಡಿಮೆ ದರ್ಜೆಗೆ ಸ್ವಯಂಚಾಲಿತವಾಗಿ ವಿಮಾನಸಂಸ್ಥೆಯೇ ಬದಲಾಯಿಸಿದ ಸಂದರ್ಭದಲ್ಲಿ, ಪ್ರಯಾಣಿಕರಿಗೆ ಪರಿಹಾರ ನೀಡಬೇಕು ಎಂಬ ನಿಯಮವನ್ನು ಜಾರಿಗೆ ತರಲಾಗುತ್ತಿದೆ.

ನಾಗರಿಕ ವಿಮಾನಯಾನ ನಿರ್ದೇಶನಾಲಯವು (ಡಿಜಿಸಿಎ) ಇಂಥ ನಿಯಮಗಳನ್ನು ಸಿದ್ಧಪಡಿಸುತ್ತಿದೆ ಎಂದು ನಿರ್ದೇಶನಾಲಯದ ಮೂಲಗಳು ಹೇಳಿವೆ.

ಇಂಥ ನಿಯಮಗಳು ಜಾರಿಗೆ ಬಂದಿದ್ದೇ ಆದಲ್ಲಿ, ತೆರಿಗೆಗಳು ಸೇರಿದಂತೆ ಟಿಕೆಟ್‌ನ ಹಣವನ್ನು ಸಂತ್ರಸ್ತ ಪ್ರಯಾಣಿಕನಿಗೆ ಸಂಬಂಧಿಸಿದ ವಿಮಾನಯಾನ ಸಂಸ್ಥೆ ಸಂಪೂರ್ಣವಾಗಿ ಮರುಪಾವತಿಸಬೇಕಾಗುತ್ತದೆ. ಅಲ್ಲದೇ, ನಂತರ ಲಭ್ಯವಿರುವ ವರ್ಗದಲ್ಲಿ ಉಚಿತ ಪ್ರಯಾಣಕ್ಕೆ ವ್ಯವಸ್ಥೆ ಮಾಡಬೇಕಾಗುತ್ತದೆ ಎಂದು ಡಿಜಿಸಿಎ ಮೂಲಗಳು ಹೇಳಿವೆ.

ನಿರ್ದಿಷ್ಟ ವರ್ಗದ ಟಿಕೆಟ್ ಕಾಯ್ದಿರಿಸಿದ ನಂತರವೂ ವಿಮಾನಸಂಸ್ಥೆಯು ತಮ್ಮ ಪ್ರಯಾಣದ ವರ್ಗವನ್ನು ಬದಲಾಯಿಸುತ್ತಿರುವ ಕುರಿತು ವ್ಯಾಪಕ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ನಿಯಮಗಳಿಗೆ ತಿದ್ದುಪಡಿ ತರಲು ಡಿಜಿಸಿಎ ಮುಂದಾಗಿದೆ ಎಂದು ಮೂಲಗಳು ಹೇಳಿವೆ.

ಪತ್ರಕರ್ತ ಸಿದ್ದಿಕ್ ಕಪ್ಪನ್‌ಗೆ ಜಾಮೀನು


ಸಿದ್ದಿಕ್ ಕಪ್ಪನ್

ಲಖನೌ: ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಕೇರಳದ ಪತ್ರಕರ್ತ ಸಿದ್ದಿಕ್ ಕಪ್ಪನ್ ಅವರಿಗೆ ಅಲಹಾಬಾದ್ ಹೈಕೋರ್ಟ್ ಶುಕ್ರವಾರ ಜಾಮೀನು ಮಂಜೂರು ಮಾಡಿದೆ.

ಹೈಕೋರ್ಟಿನ ಲಖನೌ ಪೀಠದ ನ್ಯಾಯಮೂರ್ತಿ ದಿನೇಶ್ ಕುಮಾರ್ ಸಿಂಗ್ ಅವರು ಕಪ್ಪನ್ ಅವರ ಜಾಮೀನಿಗೆ ಆದೇಶಿಸಿದರು. ಕಪ್ಪನ್ ಅವರನ್ನು ಪ್ರಸ್ತುತ ಲಖನೌ ಜಿಲ್ಲಾ ಕಾರಾಗೃಹದಲ್ಲಿರಿಸಲಾಗಿದೆ.

ತಂಗಿ ಮದುವೆ: ಖಾಲಿದ್ ಬಿಡುಗಡೆ

ನವದೆಹಲಿ (ಪಿಟಿಐ): 2020ರ ಈಶಾನ್ಯ ದೆಹಲಿ ಗಲಭೆ ಪ್ರಕರಣದಲ್ಲಿ ಬಂಧಿಯಾಗಿರುವ ಜೆಎನ್‌ಯುನ ವಿದ್ಯಾರ್ಥಿಯಾಗಿದ್ದ ಉಮರ್ ಖಾಲಿದ್ ಅವರನ್ನು ವಾರದ ಅವಧಿಗೆ ಮಧ್ಯಂತರ ಜಾಮೀನು ಮೇಲೆ ಶುಕ್ರವಾರ ತಿಹಾರ್ ಜೈಲಿನಿಂದ ಬಿಡುಗಡೆ ಮಾಡಲಾಗಿದೆ. ಅವರ ಸಹೋದರಿ ವಿವಾಹ ನಿಮಿತ್ತ ಬಿಡುಗಡೆ ಮಾಡಲಾಗಿದೆ.

ಎರಡು ವಾರದ ಅವಧಿಗೆ ಜಾಮೀನು ನೀಡುವಂತೆ ಸಲ್ಲಿಕೆಯಾಗಿದ್ದ ಅರ್ಜಿ ವಿಚಾರಣೆ ನಡೆಸಿದ ಹೆಚ್ಚುವರಿ ಸೆಷನ್ ನ್ಯಾಯಾಧೀಶ ಅಮಿತಾಬ್ ರಾವತ್ ಅವರು, ಡಿಸೆಂಬರ್ 30ರ ವರೆಗೆ ಮಧ್ಯಂತರ ಜಾಮೀನಿಗೆ ಅನುಮತಿ ನೀಡಿದ್ದಾರೆ.

ದೆಹಲಿಯ ಈಶಾನ್ಯಭಾಗದಲ್ಲಿ 2020ರಲ್ಲಿ ನಡೆಸಲಾಗಿದ್ದ ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ) ಮತ್ತು ರಾಷ್ಟ್ರೀಯ ನಾಗರಿಕರ ನೋಂದಣಿ (ಎನ್‌ಆರ್‌ಸಿ) ವಿರುದ್ಧದ ಪ್ರತಿಭಟನೆಯು ಹಿಂಸಾಚಾರಕ್ಕೆ ತಿರುಗಿತ್ತು. ಈ ಗಲಭೆಯಲ್ಲಿ 53 ಜನ ಮೃತರಾಗಿದ್ದು, 700ಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು. ಈ ಗಲಭೆಗೆ ಮೂಲ ಕಾರಣಕರ್ತ ಉಮರ್ ಎಂಬ ಆರೋಪದಡಿ 2020ರ ಸೆಪ್ಟೆಂಬರ್ ನಲ್ಲಿ ದೆಹಲಿ ಪೊಲೀಸರು ಜೆಎನ್‌ಯುನ ಉಮರ್ ಅವರನ್ನು ಬಂಧಿಸಿದ್ದರು.

'ಚರ್ಚೆಯಿಂದ ಸರ್ಕಾರ ಪಲಾಯನ'

ನವದೆಹಲಿ (ಪಿಟಿಐ): 'ಗಡಿಭಾಗದಲ್ಲಿ ಚೀನಾದ ಅತಿಕ್ರಮಣದ ಯತ್ನ, ಹಣ ದುಬ್ಬರ ಮತ್ತು ನಿರುದ್ಯೋಗದಂತಹ ವಿಷಯಗಳ ಚರ್ಚೆಯಿಂದ ಕೇಂದ್ರ ಸರ್ಕಾರವು ಪಲಾಯನಗೈದಿರುವುದು, ಅದರ ಆಡಳಿತ ವೈಫಲ್ಯವನ್ನು ತೋರಿಸುತ್ತದೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ಹೇಳಿದ್ದಾರೆ.

'ಕಾಂಗ್ರೆಸ್‌ನ ಭಾರತ್ ಜೋಡೊ ಯಾತ್ರೆಗೆ ವ್ಯಕ್ತವಾಗುತ್ತಿರುವ ಅಗಾಧ ಬೆಂಬಲದಿಂದ ಕಂಗೆಟ್ಟಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಯಾತ್ರೆಯನ್ನು ನಿಲ್ಲಿಸಲು ನೆಪಗಳನ್ನು ಹುಡುಕುತ್ತಿದೆ' ಎಂದೂ ಅವರು ಆರೋಪಿಸಿದ್ದಾರೆ.

ಪಕ್ಷದ ಸಂಘಟನೆಯನ್ನು ಬಲಪಡಿಸುವ ಮಾರ್ಗಗಳು ಮತ್ತು ಯಾತ್ರೆ ಬಳಿಕ ಪಕ್ಷದ ಮುಂದಿನ ನಡೆಯ ಕುರಿತಂತೆ ನಡೆಸಿದ ಉನ್ನತ ನಾಯಕರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಬಾರಿಯ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ 16 ಮುಖ್ಯವಾದ ವಿಷಯಗಳನ್ನು ಚರ್ಚೆಗಾಗಿ ಪ್ರತಿಪಕ್ಷಗಳು ಮುಂದಿಟ್ಟವು. ಆದರೆ, ಅವುಗಳ ಪೈಕಿ ಮೋದಿ ಸರ್ಕಾರವು ಒಂದೇ ಒಂದು ವಿಷಯವನ್ನೂ ಚರ್ಚೆಗೆ ಕೈಗೆತ್ತಿಕೊಳ್ಳಲು ಒಪ್ಪಲಿಲ್ಲ' ಎಂದರು.

'ವಿರೋಧಪಕ್ಷಗಳು ರಾಷ್ಟ್ರೀಯ ಭದ್ರತೆ, ಹಣದುಬ್ಬರ, ನಿರುದ್ಯೋಗದಂಥ ವಿಷಯಗಳ ಚರ್ಚೆಗೆ ಒತ್ತಾಯಿಸುತ್ತಲೇ ಇದ್ದವು. ಆದರೆ, ಸರ್ಕಾರವು ಒಂದರ ಬಳಿಕ ಒಂದರಂತೆ ಕಟ್ಟುಕತೆಗಳನ್ನು ಹೇಳುತ್ತಾ ಪಲಾಯಗೈಯ್ಯುತ್ತಲೇ ಇತ್ತು. ಒಟ್ಟಿನಲ್ಲಿ ಜನರಿಗೆ ಸಂಬಂಧಿಸಿದ ಮುಖ್ಯವಾದ ಯಾವುದೇ ವಿಷಯದಲ್ಲಿ ಸರ್ಕಾರಕ್ಕೆ ಉತ್ತರಿಸಲು ಸಾಧ್ಯವಾಗಲೇ ಇಲ್ಲ. ಪ್ರತ್ಯುತ್ತರದ ಹೆಸರಿನಲ್ಲಿ ಬಿಜೆಪಿಯಿಂದ ವೈಯಕ್ತಿಕ ಮಟ್ಟದಲ್ಲಿ ದಾಳಿಗಳಾದವು. ಇದು ಮೋದಿ ನೇತೃತ್ವದ ಸರ್ಕಾರದ ಬೃಹತ್ ಆಡಳಿತ ವೈಫಲ್ಯಕ್ಕೆ ಸಾಕ್ಷಿಯಾಗಿದೆ' ಎಂದು ಖರ್ಗೆ ಅಭಿಪ್ರಾಯಪಟ್ಟಿದ್ದಾರೆ.

'ಯಾತ್ರೆ ನಿಲ್ಲಿಸಲು 'ಕೋವಿಡ್ ನಾಟಕ'

ಫರೀದಾಬಾದ್ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ ಜೋಡೊ ಯಾತ್ರೆಯನ್ನು ವಿಫಲಗೊಳಿಸಲು ಸರ್ಕಾರ 'ಕೋವಿಡ್ ನಾಟಕ' ಆರಂಭಿಸಿದೆ ಎಂದು ಪಕ್ಷದ ಹಿರಿಯ ನಾಯಕ ಜೈರಾಂ ರಮೇಶ್ ಅವರು ಶುಕ್ರವಾರ ಆರೋಪಿಸಿದರು.

ವೈಜ್ಞಾನಿಕ ಆಧಾರದಲ್ಲಿ ಸಾರ್ವತ್ರಿಕವಾಗಿ ಅನುಷ್ಠಾನಗೊಳಿಸುವ ಯಾವುದೇ ಮಾರ್ಗಸೂಚಿಯನ್ನು ಪಕ್ಷವು ಅನುಸರಿಸಲಿದೆ ಎಂದು ಹೇಳಿದರು.

ಪಖಲ್ ಗ್ರಾಮದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, 'ಭಾರತ ಜೋಡೊ ಯಾತ್ರೆಯು ದೆಹಲಿ ಪ್ರವೇಶಿಸುವುದನ್ನು ವಿಫಲಗೊಳಿಸಲೆಂದೇ ಕಳೆದ ಎರಡು ದಿನಗಳಿಂದ 'ಕೋವಿಡ್ ನಾಟಕ' ನಡೆಯುತ್ತಿದೆ' ಎಂದು ಹೇಳಿದರು.

'ಕೇವಲ 18 ದಿನಗಳಲ್ಲಿ ಕೋವಿಡ್ ಪರಿಸ್ಥಿತಿಯಿಂದ (2020ರಲ್ಲಿ) ಹೊರಬರಬಹುದು ಎಂದು ಸಲಹೆ ನೀಡಿದ ಪಕ್ಷ ನಮ್ಮದಲ್ಲ. 'ಸಭ್ಯ'ರೊಬ್ಬರು ನಾವು ಕೇವಲ 18 ದಿನಗಳಲ್ಲಿ ಕೋವಿಡ್ ವಿರುದ್ಧ ಜಯ ಗಳಿಸಬಹುದು ಎಂದು ಹೇಳಿದ್ದರು. ಕೊರೊನಾ ವಿರುದ್ಧ ಹೋರಾಡಲು ಮನೆಯ ಬಾಲ್ಕನಿಯಲ್ಲಿ ದೀಪ ಹಚ್ಚಿ ಎಂದು ಕರೆ ಕೊಟ್ಟಿದ್ದರು' ಎಂದು ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ಟೆಸ್ಟ್ ಕ್ರಿಕೆಟ್: ಶಕೀಬ್, ತೈಜುಲ್ ಕೈಚಳಕ; ಭಾರತಕ್ಕೆ ಅಲ್ಪ ಮುನ್ನಡೆ

ರಿಷಭ್–ಶ್ರೇಯಸ್ ಜೊತೆಯಾಟ

ಮೀರ್‌ಪುರ್ (ಪಿಟಿಐ): ಲಯ ಕಂಡುಕೊಂಡ ರಿಷಭ್ ಪಂತ್ ಏಳು ರನ್‌ಗಳ ಅಂತರದಿಂದ ಶತಕ ತಪ್ಪಿಸಿಕೊಂಡರು. ಇನ್ನೊಂದೆಡೆ ಶ್ರೇಯಸ್ ಅಯ್ಯರ್ ಕೂಡ ನೂರರ ಗಡಿ ಮುಟ್ಟಲಿಲ್ಲ.

ಆದರೆ ಇವರಿಬ್ಬರ ಆಟದಿಂದಾಗಿ ಭಾರತ ತಂಡವು ಬಾಂಗ್ಲಾ ಎದುರು ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿತು.

ಶೇರ್ ಎ ಬಾಂಗ್ಲಾ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದ ಎರಡನೇ ದಿನವಾದ ಗುರುವಾರ ಭಾರತ ತಂಡವು 86.3 ಓವರ್‌ಗಳಲ್ಲಿ 314 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. 87 ರನ್‌ಗಳ ಮುನ್ನಡೆ ಗಳಿಸಿತು.

ರಿಷಭ್ (93; 105ಎ, 4X10, 6X2) ಹಾಗೂ ಶ್ರೇಯಸ್ (87; 105ಎ, 4X10, 6X2) ಅವರಿಬ್ಬರೇ ಭಾರತಕ್ಕೆ ಆಸರೆಯಾದರು. ಉಳಿದ ಬ್ಯಾಟರ್‌ಗಳು ದೊಡ್ಡ ಇನಿಂಗ್ಸ್ ಆಡುವಲ್ಲಿ ವಿಫಲರಾದರು. ಆತಿಥೇಯ ತಂಡದ ನಾಯಕ ಶಕೀಬ್ ಅಲ್ ಹಸನ್ ಮತ್ತು ತೈಜುಲ್ ಇಸ್ಲಾಂ ತಲಾ ನಾಲ್ಕು ವಿಕೆಟ್ ಗಳಿಸಿ ಭಾರತದ ಬ್ಯಾಟಿಂಗ್ ಪಡೆಗೆ ಆಘಾತ ನೀಡಿದರು. ಸ್ಪಿನ್ ಬೌಲಿಂಗ್‌ಗೆ ನೆರವು ನೀಡುತ್ತಿರುವ ಪಿಚ್ ಬಳಸಿಕೊಂಡ ಇಬ್ಬರೂ ಬೌಲರ್‌ಗಳೂ ಸಫಲರಾದರು.

ಎರಡನೇ ಇನಿಂಗ್ಸ್ ಆರಂಭಿಸಿರುವ ಬಾಂಗ್ಲಾ ತಂಡವು ದಿನದಾಟದ ಕೊನೆಗೆ 6 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 7 ರನ್ ಗಳಿಸಿದೆ.



ರಿಷಭ್ ಪಂತ್ ಆಟದ ವೈಖರಿ –ಎಎಫ್‌ಪಿ ಚಿತ್ರ

ರಿಷಭ್-ಶ್ರೇಯಸ್ ಜೊತೆಯಾಟ: ಎಡಗೈ ಬ್ಯಾಟರ್ ರಿಷಭ್ ಮತ್ತು ಬಲಗೈ ಬ್ಯಾಟರ್ ಶ್ರೇಯಸ್ ಐದನೇ ವಿಕೆಟ್ ಜೊತೆಯಾಟದಲ್ಲಿ 159 ರನ್ ಗಳಿಸದಿದ್ದರೆ ಭಾರತ ತಂಡವು ಹಿನ್ನಡೆ ಅನುಭವಿಸುವ ಸಾಧ್ಯತೆ ಇತ್ತು.

94 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿದ್ದ ತಂಡ ಸಂಕಷ್ಟದಲ್ಲಿತ್ತು. ನಾಯಕ ಕೆ.ಎಲ್. ರಾಹುಲ್ (10 ರನ್) ಅವರ ವೈಫಲ್ಯದ ಸರಣಿ ಮುಂದುವರಿಯಿತು. ಹೋದ ಪಂದ್ಯದಲ್ಲ ಶತಕ ಗಳಿಸಿದ್ದ ಶುಭಮನ್ ಗಿಲ್ ಹಾಗೂ ಚೇತೇಶ್ವರ್ ಪೂಜಾರ ಕೂಡ ಬೇಗನೆ ಔಟಾದರು. ಈ ಮೂವರೂ ತೈಜುಲ್ ಇಸ್ಲಾಂ ಎಸೆತಗಳಲ್ಲಿ ಔಟಾದರು.

ಟೆಸ್ಟ್ ಕ್ರಿಕೆಟ್‌ನಲ್ಲಿ ಮೂರು ವರ್ಷದಿಂದ ಶತಕ ಗಳಿಸದ ವಿರಾಟ್ ಕೊಹ್ಲಿ ಕೂಡ 24 ರನ್ ಗಳಿಸಿ ನಿರ್ಗಮಿಸಿದರು. ಅವರು ತಸ್ಕಿನ್ ಅಹಮದ್ ಎಸೆತದಲ್ಲಿ ನೂರುಲ್ ಹಸನ್‌ಗೆ ಕ್ಯಾಚಿತ್ತು ನಿರ್ಗಮಿಸಿದರು.

ಈ ಸನ್ನಿವೇಶದಲ್ಲಿ ಜೊತೆಗೂಡಿದ ರಿಷಭ್ ಮತ್ತು ಶ್ರೇಯಸ್ ಚೆಂದದ ಇನಿಂಗ್ಸ್ ಕಟ್ಟಿದರು. ರಿಷಭ್ ತಮ್ಮ ಆಕ್ರಮಣ ಶೈಲಿಯಲ್ಲಿಯೇ ಬ್ಯಾಟ್ ಬೀಸಿದರು. ಆದರೆ ಶ್ರೇಯಸ್ ಸ್ವಲ್ಪ ರಕ್ಷಣಾತ್ಮಕ ಆಟಕ್ಕೆ ಒತ್ತು ಕೊಟ್ಟರು. ಇವರಿಬ್ಬರೂ ಕ್ರೀಸ್‌ನಲ್ಲಿ ಇದ್ದಷ್ಟು ಹೊತ್ತು ಬೌಲರ್‌ಗಳ ಮೇಲೆ ಒತ್ತಡ ಹೆಚ್ಚಾಗಿತ್ತು. ನಿಧಾನಗತಿಯಲ್ಲಿ ತಿರುವು ಪಡೆದು ಬರುವ ಎಸೆತಗಳಿಗೆ ಸ್ವೀಪ್ ಶಾಟ್‌ಗಳ ಉತ್ತರ ಕೊಟ್ಟರು.

ಬಾಂಗ್ಲಾ ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 227 ರನ್‌ಗಳನ್ನು ಚುಕ್ತಾ ಮಾಡುವಲ್ಲಿ ಯಶಸ್ವಿಯಾಯಿತು. ಆದರೆ, ಮಿರಾಜ್ ಹಾಕಿದ 68ನೇ ಓವರ್‌ನಲ್ಲಿ ದೊಡ್ಡ ಹೊಡೆತಕ್ಕೆ ಪ್ರಯತ್ನಿಸಿದ ಪಂತ್ ನೂರುಲ್ ಹಸನ್‌ಗೆ ಕ್ಯಾಚಿತ್ತರು. ಶತಕ ಗಳಿಸುವ ಅವಕಾಶ ಕೈತಪ್ಪಿತು.

ನಾಲ್ಕು ಓವರ್‌ಗಳ ನಂತರ ಶ್ರೇಯಸ್ ಅವರು ಶಕೀಬ್ ಓವರ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 73.5 ಓವರ್‌ಗಳಲ್ಲಿ 227. ಭಾರತ: 86.3 ಓವರ್‌ಗಳಲ್ಲಿ 314 (ಚೇತೇಶ್ವರ್ ಪೂಜಾರ 24, ವಿರಾಟ್ ಕೊಹ್ಲಿ 24, ರಿಷಭ್ ಪಂತ್ 93, ಶ್ರೇಯಸ್ ಅಯ್ಯರ್ 87 ; ಶಕೀಬ್ ಅಲ್ ಹಸನ್ 79ಕ್ಕೆ 4, ತೈಜುಲ್ ಇಸ್ಲಾಂ 74ಕ್ಕೆ 4). ಎರಡನೇ ಇನಿಂಗ್ಸ್: ಬಾಂಗ್ಲಾದೇಶ: ಆರು ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 7 (ನಜ್ಮುಲ್ ಹುಸೇನ್ ಶಾಂತೊ ಬ್ಯಾಟಿಂಗ್ 5, ಜಾಕೀರ್ ಹುಸೇನ್ ಬ್ಯಾಟಿಂಗ್ 2).



ಬೆಂಗಳೂರಿನ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಹಾಕಿ ಅಂಗಣದಲ್ಲಿ ಶುಕ್ರವಾರ ಪುರುಷರ ವಿಶ್ವಕಪ್ ಹಾಕಿ ಟೂರ್ನಿಯ ಟ್ರೋಫಿ ಟೂರ್ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಭಾರತ ಹಾಕಿ ತಂಡದ ಮಾಜಿ ನಾಯಕರಾದ ಧನರಾಜ್ ಪಿಳ್ಳೈ (ಎಡದಿಂದ ಮೂರನೆಯವರು), ಎಂ.ಪಿ. ಗಣೇಶ್ (ಎಡದಿಂದ ನಾಲ್ಕನೆಯವರು), ಒಲಿಂಪಿಯನ್‌ಗಳಾದ ಎ.ಬಿ.ಸುಬ್ಬಯ್ಯ, ಆಶಿಶ್ ಬಲ್ಲಾಳ್, ಮ್ಯಾನ್ಯುಯೆಲ್ ಫೆಡರಿಕ್ಸ್ ಮತ್ತಿತರರಿದ್ದರು. 13 ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಟ್ರೋಫಿ ಸಂಚರಿಸಲಿದೆ– ಪ್ರಜಾವಾಣಿ ಚಿತ್ರ

ಹರ್ಮನ್‌ಪ್ರೀತ್ ಸಿಂಗ್ ನಾಯಕ

ನವದೆಹಲಿ (ಪಿಟಿಐ): ಡಿಫೆಂಡರ್ ಹರ್ಮನ್‌ಪ್ರೀತ್ ಸಿಂಗ್ ಅವರನ್ನು ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡದ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ.

ಒಡಿಶಾದಲ್ಲಿ ಜನವರಿ 13ರಿಂದ ವಿಶ್ವಕಪ್ ಟೂರ್ನಿ ಆರಂಭವಾಗಲಿದೆ. 18 ಆಟಗಾರರ ತಂಡವನ್ನು ಶುಕ್ರವಾರ ಪ್ರಕಟಿಸಲಾಗಿದೆ. ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರ (ಎಸ್‌ಎಐ)ದಲ್ಲಿ 2 ದಿನಗಳ ಕಾಲ 33 ಆಟಗಾರರು ಟ್ರಯಲ್ಸ್‌ನಲ್ಲಿ ಭಾಗವಹಿಸಿದ್ದರು. ಅದರಲ್ಲಿ ತಂಡವನ್ನು ಆಯ್ಕೆ ಮಾಡಲಾಗಿದೆ.

ತಂಡ : ಡಿಫೆಂಡರ್ಸ್: ಹರ್ಮನ್‌ಪ್ರೀತ್ (ನಾಯಕ), ಅಮಿತ್ ರೋಹಿದಾಸ್ (ಉಪನಾಯಕ), ಜರ್ಮನ್‌ಪ್ರೀತ್ ಸಿಂಗ್, ಸುರೇಂದರ್ ಕುಮಾರ್, ವರುಣ್ ಕುಮಾರ್, ನೀಲಂ ಸಂಜೀಪ್ ಕ್ರಿಸ್.

ಮಿಡ್‌ಫೀಲ್ಡರ್ಸ್: ಮನಪ್ರೀತ್ ಸಿಂಗ್, ಹಾರ್ದಿಕ್ ಸಿಂಗ್, ನೀಲಕಂಠ ಶರ್ಮಾ, ಶಂಶೇರ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್, ಆಕಾಶದೀಪ್ ಸಿಂಗ್.

ಫಾರ್ವರ್ಡ್ಸ್: ಮನದೀಪ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ಅಭಿಷೇಕ್, ಸುಖಜೀತ್ ಸಿಂಗ್

ಗೋಲ್ ಕೀಪರ್ಸ್: ಕಿಶನ್ ಬಹಾದ್ದೂರ್ ಪಾಠಕ್ ಮತ್ತು ಪಿ.ಆರ್. ಶ್ರೀಜೇಶ್. ಮೀಸಲು ಆಟಗಾರರು: ರಾಜಕುಮಾರ್ ಪಾಲ್, ಜುಗರಾಜ್.

ಶೂಟಿಂಗ್: ರಾಜ್ಯಕ್ಕೆ ಆರು ಪದಕ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕರ್ನಾಟಕದ ಶೂಟರ್‌ಗಳು ಮಧ್ಯಪ್ರದೇಶದ ಇಂದೋರ್‌ನ ಸೈನಿಕ ಶೂಟಿಂಗ್ ರೇಂಜ್‌ನಲ್ಲಿ ನಡೆದ 3ನೇ ರಾಷ್ಟ್ರೀಯ ಪ್ಯಾರಾ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕು ಚಿನ್ನ, ಒಂದು ಬೆಳ್ಳಿ ಹಾಗೂ ಒಂದು ಕಂಚು ಗೆದ್ದಿದ್ದಾರೆ.

ರಾಜ್ಯವನ್ನು ಪ್ರತಿನಿಧಿಸಿದ್ದ ಶ್ರೀಹರ್ಷ ದೇವರೆಡ್ಡಿ 10 ಮೀ ಏರ್ ರೈಫಲ್ ಸ್ಟ್ಯಾಂಡಿಂಗ್, 10 ಮೀ ಏರ್ ರೈಫಲ್ ಪ್ರೋನ್ ಹಾಗೂ 50 ಮೀ ರೈಫಲ್ ಪ್ರೋನ್ ವಿಭಾಗದಲ್ಲಿ ಚಿನ್ನ ಜಯಿಸಿದರು.

ಹುಬ್ಬಳ್ಳಿ ಶೂಟಿಂಗ್ ಅಕಾಡೆಮಿಯಲ್ಲಿ ತರಬೇತಿ ಪಡೆದಿರುವ ರಾಕೇಶ ನಿಡಗುಂದಿ 50 ಮೀ ರೈಫಲ್ ತ್ರಿಪೊಸಿಸ್ನಿಂಗ್‌ನ ವೈಯಕ್ತಿಕ ವಿಭಾಗದಲ್ಲಿ ಬೆಳ್ಳಿ ಗೆದ್ದಿದ್ದಾರೆ. ತಂಡ ವಿಭಾಗದಲ್ಲಿ ರಾಕೇಶ, ಸಚಿನ ಸಿದ್ದಣವರ ಮತ್ತು ಜ್ಯೋತಿ ಸಣ್ಣಕ್ಕಿ ಅವರಿದ್ದ ತಂಡ 10 ಮೀ ಏರ್ ರೈಫಲ್ ಪ್ರೋನ್ ಮಿಕ್ಸಡ್ ವಿಭಾಗದಲ್ಲಿ ಚಿನ್ನಕ್ಕೆ ಗುರಿಯಿಟ್ಟಿತು. ಇದೇ ತಂಡವು 50 ಮೀ ರೈಫಲ್ ಪ್ರೋನ್ ಮಿಕ್ಸೆಡ್ ವಿಭಾಗದಲ್ಲಿ ಕಂಚು ಗೆದ್ದಿತು.

ಟೂರ್ನಿಯಲ್ಲಿ ಕರ್ನಾಟಕದ 13 ಶೂಟರ್‌ಗಳು ಪಾಲ್ಗೊಂಡಿದ್ದರು. ಇದಕ್ಕೂ ಮುನ್ನ ಅಲ್ಲಿಯೇ ನಡೆದ 3ನೇ ವಲಯ ಪ್ಯಾರಾ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ 50 ಮೀ ರೈಫಲ್ ತ್ರಿಪೊಸಿಸ್ನಿಂಗ್ ವಿಭಾಗದಲ್ಲಿ ರಾಕೇಶ ಚಿನ್ನ ಗೆದ್ದರೆ, ಸಚಿನ್ ಸಿದ್ದಣವರ 50 ಮೀ ರೈಫಲ್ ಪ್ರೋನ್ ಮಿಕ್ಸಡ್ ವಿಭಾಗದಲ್ಲಿ ಕಂಚಿನ ಪದಕ ಪಡೆದರು.

ರಾಷ್ಟ್ರೀಯ ಬಾಕ್ಸಿಂಗ್: ಕ್ವಾರ್ಟರ್‌ಗೆ ಲವ್ಲಿನಾ

ಭೋಪಾಲ್ (ಪಿಟಿಐ): ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಲವ್ಲಿನಾ ಬೊರ್ಗೊಹೈನ್ ಅವರು ಮಹಿಳೆಯರ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಎಂಟರಘಟ್ಟ ಪ್ರವೇಶಿಸಿದ್ದಾರೆ.

ಅಸ್ಸಾಂ ರಾಜ್ಯವನ್ನು ಪ್ರತಿನಿಧಿಸಿರುವ ಲವ್ಲಿನಾ (75 ಕೆಜಿ ವಿಭಾಗ) ನಿರೀಕ್ಷೆಯಂತೆ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಆರ್‌ಎಸ್‌ಸಿ (ರೆಫರಿಯಿಂದ ಪಂದ್ಯ ಸ್ಥಗಿತ) ಆಧಾರದಲ್ಲಿ ಒಡಿಶಾದ ಪೂಜಾ ನಾಯಕ್ ವಿರುದ್ಧ ಗೆದ್ದರು. ನಿರಂತರ ಆಕ್ರಮಣ ಮತ್ತು ಬಲಿಷ್ಠ ಪಂಚ್‌ಗಳ ಮೂಲಕ ಲವ್ಲಿನಾ ಎದುರಾಳಿಯನ್ನು ಕಂಗೆಡಿಸಿದರು.

ಐಎಸ್‌ಎಲ್: ಬಿಎಫ್‌ಸಿಗೆ ಸೋಲು

ಬೆಂಗಳೂರು: ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಸೋಲು ಅನುಭವಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ 0–3ರಿಂದ ಹೈದರಾಬಾದ್ ಎಫ್‌ಸಿ ಎದುರು ಸೋತಿತು.

ಬಾರ್ತೊಲೊಮಿವ್ ಒಗ್ಬೆಚೆ ಅವರು ಹೈದರಾಬಾದ್ ತಂಡಕ್ಕಾಗಿ 26ನೇ ನಿಮಿಷದಲ್ಲಿ ಮೊದಲ ಗೋಲು ದಾಖಲಿಸಿದರು. ಬಿಎಫ್‌ಸಿಯ ಸಂದೇಶ್ ಜಿಂಗಾನ್ ಅವರು 44ನೇ ನಿಮಿಷದಲ್ಲಿ ಎದುರಾಳಿ ತಂಡಕ್ಕೆ 'ಉಡುಗೊರೆ' ಗೋಲು ನೀಡಿದರು.

90ನೇ ನಿಮಿಷದಲ್ಲಿ ಜೋಯಲ್ ಚಿಯಾನೀಸ್ ಹೈದರಾಬಾದ್ ತಂಡದ ಮತ್ತೊಂದು ಗೋಲು ದಾಖಲಿಸಿದರು.

ಅಪಘಾತ: ಕೊಕ್ಕೊ ಆಟಗಾರರ ಸಾವು

ಸುರಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ದೇವರಗೋನಾಲದ ಸಿದ್ಧಾಪುರ ಬಳಿ ಗುರುವಾರ ರಾತ್ರಿ ಟಂಟಂ ಆಟೊ ಮತ್ತು ಕಬ್ಬು ತುಂಬಿದ ಟ್ರ್ಯಾಕ್ಟರ್ ನಡುವೆ ಡಿಕ್ಕಿ ಸಂಭವಿಸಿ ರಾಜ್ಯ ಮಟ್ಟದ ಇಬ್ಬರು ಕೊಕ್ಕೊ ಆಟಗಾರರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸುರಪುರ ತಾಲ್ಲೂಕಿನ ದೇವರ ಗೋನಾಲದ ವೆಂಕಟೇಶ ಭಂಟನೂರ (20) ಮತ್ತು ಶಿರಸಿ ತಾಲ್ಲೂಕಿನ ದೇವನಳ್ಳಿಯ ನಾರಾಯಣ ಕೃಷ್ಣ ಮರಾಠೆ(18) ಮೃತರು.



ನಾರಾಯಣ



ವೆಂಕಟೇಶ

'ಆಟೊ ಚಾಲಕ ಮಾಳಪ್ಪ ಭಂಟನೂರ, ಕ್ರೀಡಾಪಟು ಯಲ್ಲಪ್ಪ ದೇವದುರ್ಗ ಅವರನ್ನು ಕಲಬುರಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಟೊದಲ್ಲಿ 7 ಆಟಗಾರರಿದ್ದು, ಉಳಿದವರಿಗೆ ಸಣ್ಣಪುಟ್ಟ ಗಾಯಗಳಾಗಿವೆ' ಎಂದು ಸುರಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಬುಡಕಟ್ಟು ಸಮುದಾಯದ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಸುರಪುರದ ವನವಾಸಿ ಕಲ್ಯಾಣ ಸಂಸ್ಥೆಯಲ್ಲಿ ಡಿಸೆಂಬರ್ 23ರಿಂದ ಆರಂಭವಾಗಲಿದ್ದ ತರಬೇತಿ ಶಿಬಿರಕ್ಕೆ ಬಂಟ್ವಾಳ, ಅಂಕೋಲಾ, ಶಿರಸಿಯಿಂದ ಆಟಗಾರರು ಬಂದಿದ್ದರು. ಕೆಲವರು ಸುರಪುರದಲ್ಲಿ ಉಳಿದರೆ, 7 ಮಂದಿ ವೆಂಕಟೇಶ ಜೊತೆಗೆ ಆಟೊದಲ್ಲಿ ದೇವರಗೋನಾಲಕ್ಕೆ ಹೊರಟಿದ್ದರು' ಎಂದು ತಿಳಿಸಿದ್ದಾರೆ.

ಹೈದರಾಬಾದ್ ರೇಸ್

ಪ್ಲೆರೋಮ ಗೆಲ್ಲುವ ನಿರೀಕ್ಷೆ

ವನಪಾರ್ಥಿ ಕಪ್ ಶನಿವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪ್ಲೆರೋಮ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:45ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ನಾಟ್ ಸೋ ನಾಟಿ 8, ಕಂಟ್ರೆಸ್ ಪೇಸ್ 3, ಬಾಕಸ್ 4
2ನೇ ರೇಸ್: ಓ ಕನ್ನಯ್ಯ 3, ಕುಶಾಖ್ 2, ಔರಿಲೆ 1
3ನೇ ರೇಸ್: ಕಿಂಗ್ಸ್ ಕಮಾಂಡ್ 8, ಸ್ವಿಸ್ ಟೈಗ್ರೆಸ್ 3, ಚಿಲ್ಲಿ ಬ್ರೀಝ್ 9
4ನೇ ರೇಸ್: ಓ ಹನ್ಸಿನಿ 1, ಸ್ಮಾರ್ಟ್ ಕ್ಯಾಡಿಲಾಕ್ 11, ಕೋಸ್ಟಲ್ ಕ್ರೂಝ್ 10
5ನೇ ರೇಸ್: ಸ್ಟೀಡ್‌ಸ್ಟರ್ 5, ಮೈ ಒಪಿನಿಯನ್ 1
6ನೇ ರೇಸ್: ಬಯೋಮೆಟ್ರಿಕ್ 1, ಅಮೇಜಿಂಗ್ ಸಫಾರಿ 9, ಲಾರ್ಡ್ ಕಮಾಂಡರ್ 11
7ನೇ ರೇಸ್: ನಾಟಿ ವುಡ್ಸ್ 8, ಗ್ಯಾಮ 9, ಮಿಲಾಸ್ 11

ಉತ್ತಮ ಬೆಟ್: ಪ್ಲೆರೋಮ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7